# ಜನತಾವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಆಗಸ್ಟ್ 29, 2024

ಸಂಪುಟ : 51 ಸಂಚಿಕೆ : 107 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com





ದಾವಣಗೆರೆ ಬಂಟರ ಭವನದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಸಂಘದ ವಾರ್ಷಿಕ ಮಹಾಸಭೆ, ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಬುಧವಾರ ಉದ್ಘಾಟಿಸಲಾಯಿತು.

# ಹಬ್ಬಗಳಲ್ಲಿ ಸೌಹಾರ್ದತೆ ಇರಲಿ

## ಅಹಿತಕರ ಘಟನೆ ಸಂಭವಿಸಿದರೆ ಕಾನೂನು ಕ್ರಮ ಖಚಿತ: ಡಿಸಿ

ದಾವಣಗೆರೆ, ಆ.28- ಬರುವ ಗಣೇಶ ಚತುರ್ಥಿ ಹಾಗೂ ಈದ್ ಮಿಲಾದ್ ಹಬ್ಬದ ಆಚರಣೆ ವೇಳೆ ಸಣ್ಣ ಅಹಿತಕರ ಘಟನೆ ನಡೆದರೂ ಜಿಲ್ಲಾಡಳಿತ ಸಹಿಸಲ್ಲ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ ಖಡಕ್ ಎಚ್ಚರಿಕೆ ನೀಡಿದರು.

ಜಿಲ್ಲಾಡಳಿತ ಹಾಗೂ ಜಿಲ್ಲಾ ಪೊಲೀಸ್ ಇಲಾಖೆಯಿಂದ ಜಿಲ್ಲಾಧಿಕಾರಿ ಕಚೇರಿಯ ತುಂಗ ಭದ್ರಾ ಸಭಾಂಗಣದಲ್ಲಿ ಬುಧವಾರ ಗಣೇಶ ಚತುರ್ಥಿ ಹಾಗೂ ಈದ್ ಮಿಲಾದ್ ಹಬ್ಬದ ಅಂಗವಾಗಿ ಆಯೋಜಿಸಿದ್ದ 'ನಾಗರಿಕ ಸೌಹಾರ್ದ ಸಭೆ'ಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಗರದ ಸಂಪೂರ್ಣ ಚಲನವಲನವು 250ಕ್ಕೂ ಅಧಿಕ ಸಿಸಿಟಿವಿ ಕಣ್ಗಾವಲಿನಲ್ಲಿದೆ. ಈ ಎರಡೂ ಹಬ್ಬಗಳ ಸುರಕ್ಷತಾ ದೃಷ್ಟಿಯಿಂದ ಇನ್ನೂ ಹೆಚ್ಚಿನ ಸಿಸಿಟಿವಿ ಅಳವಡಿಕೆ ಕಾಮಗಾರಿ ನಡೆಯುತ್ತಿದೆ. ತಪ್ಪಿತಸ್ಥರು ತಲೆಮರೆಸಿ ಕೊಳ್ಳದಂತೆ ಮುಂಜಾಗ್ರತೆ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದರು.

ಪೊಲೀಸ್ ಇಲಾಖೆಯ ಸೂಚನೆಯಂತೆ



### ಗಣೇಶ ಚತುರ್ಥಿ, ಈದ್ ಮಿಲಾದ್ ನಾಗರಿಕ ಸೌಹಾರ್ದ ಸಭೆ

ಧ್ವನಿವರ್ಧಕ ಬಳಸಬೇಕು. ಪರಿಸರ ಸ್ನೇಹಿ ಗಣೇಶ ವಿಗ್ರಹ ಬಳಸಬೇಕು. ಪಿಒಪಿ ವಿಗ್ರಹ ಬಳಸದಂತೆ ಎಚ್ಚರಿಕೆ ನೀಡಿದ ಅವರು, ಮಲೇಬೆನ್ನೂರಿನಲ್ಲಿ 21 ಪಿಒಪಿ ಗಣೇಶ ವಿಗ್ರಹ ಜಪ್ತಿ ಮಾಡಿದ್ದೇವೆ ಎಂದು ಮಾಹಿತಿ ನೀಡಿದರು. ಎರಡೂ ಧರ್ಮದವರು ಹಬ್ಬವನ್ನು ಖುಷಿಯಿಂದ ಆಚರಿಸುವ ಜತೆಗೆ ಸಮಾಜ, ಸಂವಿಧಾನ ಹಾಗೂ ಕಾನೂನು ವ್ಯವಸ್ಥೆಯನ್ನು ಗೌರವಿಸಬೇಕು ಎಂದು ಮನವಿ ಮಾಡಿದರು.

ಚನ್ನಗಿರಿಯಲ್ಲಿ ಯುಜಿಡಿ ಕಾಮಗಾರಿಯಿಂದ ಉಂಟಾದ ಗುಂಡಿಗಳನ್ನು ಸರಿಪಡಿಸುವಂತೆ ಹಾಗೂ ಮಲೇಬೆನ್ನೂರಿನಲ್ಲಿ ಉಂಟಾಗುವ (3ನೇ ಪುಟಕ್ಕೆ)

# ಒಳಮೀಸಲಾತಿ ಜಾರಿ : ಸಿಎಂ ನೇತೃತ್ವದಲ್ಲಿ ಸಭೆ

ಬೆಂಗಳೂರು, ಆ.28 -ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಇಂದು ಒಳಮೀಸಲಾತಿ ಜಾರಿಯ ಕುರಿತು ಇಂದು ಗೃಹ ಕಛೇರಿ ಕಾವೇರಿಯಲ್ಲಿ ಸಭೆಯನ್ನು ನಡೆಸಿದರು.

ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರಾದ ಕೆ.ಹೆಚ್. ಮುನಿಯಪ್ಪನವರು ಹಾಗೂ ಅಬಕಾರಿ ಸಚಿವರಾದ ಆರ್.ಬಿ.ತಿಮ್ಮಾಪುರ ರವರ ಉಪಸ್ಥಿತಿಯಲ್ಲಿ ಮಾದಿಗ ಸಮುದಾಯದ ಮಾಜಿ ಸಚಿವರು, ಶಾಸಕರು ಸಮ್ಮುಖದಲ್ಲಿ ಸಭೆಯನ್ನು ನಡೆಸಿದರು.

ಒಳಮೀಸಲಾತಿ ಜಾರಿಯ ವಿಚಾರದಲ್ಲಿ ನಾನು ಬದ್ದನಾಗಿದ್ದೇನೆ. ಈ ಕುರಿತು ಹೈಕಮಾಂಡ್ ಮಟ್ಟದಲ್ಲಿ ಚರ್ಚೆ ನಡೆಸಿ ನಂತರ ಕ್ಯಾಬಿನೆಟ್ ಮೂಲಕ ಇದಕ್ಕೆ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ಸಭೆಯಲ್ಲಿ ಮಾಜಿ ಸಚಿವರಾದ ಹೆಚ್.ಆಂಜನೇಯ, ಮಾಜಿ ರಾಜ್ಯ ಸಭಾ ಸದಸ್ಯರಾದ ಎಲ್. ಹನುಮಂತಯ್ಯ,ಶಾಸಕರಾದ ಎನ್. ಶ್ರೀನಿವಾಸ, ಬಸವಂತಪ್ಪ, ಡಾ.ತಿಮ್ಮಯ್ಯ, ಶಿವಣ್ಣ ಹಾಗೂ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

# ಸರ್ಕಾರಿ ನೌಕರರಿಗೂ ಕೇಂದ್ರ ವೇತನ ಶ್ರೇಣಿಗೆ ಪ್ರಾಮಾಣಿಕ ಪ್ರಯತ್ನ

### ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ

ದಾವಣಗೆರೆ, ಆ. 28- ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೂ ಕೇಂದ್ರದ ವೇತನ ಶ್ರೇಣಿ ಕೊಡಿಸುವಲ್ಲಿ ಹೋರಾಟದ ಮೂಲಕ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಹೇಳಿದರು.

ನಗರದ ಕುಂದುವಾಡ ರಸ್ತೆಯಲ್ಲಿರುವ ಬಂಟರ ಭವನದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಜಿಲ್ಲಾ ಶಾಖೆ ವತಿಯಿಂದ ಹಮ್ಮಿಕೊಂಡಿದ್ದ ಲೋಕಸಭಾ ಹಾಗೂ ವಿಧಾನಪರಿಷತ್ ಸದಸ್ಯರಿಗೆ ಸನ್ಮಾನ, 2023-24 ನೇ ಸಾಲಿನ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಹಾಗೂ 2023-24 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಹಳೇ ಪಿಂಚಣಿ ಮರುಸ್ಥಾಪಿಸುವ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ನಡೆಸುವ ಹೋರಾಟಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಬೇಕು. ನೌಕರರಲ್ಲಿ ಆತಂಕ ಬೇಡ ಎಂದರು.

ಇಡೀ ಭಾರತದಲ್ಲಿಯೇ ಅತ್ಯಂತ ಮೇಲ್ಪಟ್ಟದ, ಬಲಿಷ್ಠ ಹಾಗೂ ಕ್ರಿಯಾಶೀಲ ಸಂಘಟನೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ. ಜಿಎಸ್‌ಟಿ ಸಂಗ್ರಹದಲ್ಲಿ ಭಾರತದಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಕರ್ತವ್ಯದಲ್ಲಿ ಸಹ ಉನ್ನತ ಸ್ಥಾನದಲ್ಲಿ ರಾಜ್ಯ ಸರ್ಕಾರಿ ನೌಕರರು ಇದ್ದಾರೆ ಎಂದು ಹೇಳಿದರು.


ಯುಪಿಎಸ್ ಗೆ ಸಂಪೂರ್ಣ ವಿರೋಧವಿದೆ. ಹಳೆ ಪಿಂಚಣಿ ಯೋಜನೆ ಜಾರಿಗೊಳಿಸಬೇಕು. ಎನ್‌ಪಿಎಸ್ ಬದಲಿಗೆ ಒಪಿಎಸ್ ಆಗಬೇಕು. ಐದು ರಾಜ್ಯಗಳಲ್ಲಿ ಒಪಿಎಸ್ ಜಾರಿಗೆ ಬಂದಿದೆ ಎಂದರು. ವಿದ್ಯಾರ್ಥಿಗಳು ಓದಿನ ಕಡೆಗೆ ಹೆಚ್ಚು ಗಮನಹರಿಸಬೇಕು. ಸ್ವಾಭಿಮಾನಿಯಾಗಿ ಬದುಕುವುದನ್ನು ಕಲಿಯಬೇಕು. ಒಳ್ಳೆಯದಕ್ಕೆ ಮಾತ್ರ ಮೊಬೈಲ್ ಬಳಕೆ ಇರಲಿ ಎಂದು ಕರೆ ನೀಡಿದರು.

ರಾಜ್ಯದ ಆರು ಲಕ್ಷ ಸರ್ಕಾರಿ ನೌಕರರ ಸಮಸ್ಯೆಗಳನ್ನು ಗುರುತಿಸಿ, ಅವುಗಳ ಪರಿಹಾರಕ್ಕಾಗಿ ಪ್ರಾಮಾಣಿಕ (2ನೇ ಪುಟಕ್ಕೆ)

# ಕೆರೆಗಳು ಋತುಮಾನ ಜಲಸಂಗ್ರಹ ಆಸ್ತಿಗಳು

## ಜಗಳೂರು ತಾ.ಗಡಿಮಾಕುಂಟೆ ಕೆರೆಗೆ ವಿಶೇಷ ಗಂಗೆ ಪೂಜೆ ನೆರವೇರಿಸಿದ ಉಜ್ಜಿನಿ ಶ್ರೀ

ಜಗಳೂರು, ಆ.28- 'ವಿಜ್ಞಾನ ತಂತ್ರಜ್ಞಾನವಿಲ್ಲದ ಕಾಲಘಟ್ಟದಲ್ಲಿ ಪೂರ್ವಜರು ನಿರ್ಮಿಸಿದ ಕೆರೆಗಳು ಋತುಮಾನ ಜಲಸಂಗ್ರಹದ ಆಸ್ತಿಗಳು' ಎಂದು ಉಜ್ಜಿನಿ ಸದ್ದರ್ಮ ಪೀಠದ ಸಿಂಹಾಸನಾಧೀಶ್ವರ ಶ್ರೀ ಸಿದ್ದಲಿಂಗ ರಾಜದೇಶಿಕೇಂದ್ರ ಸ್ವಾಮೀಜಿ ವ್ಯಾಖ್ಯಾನಿಸಿದರು.



ತಾಲ್ಲೂಕಿನ ಗಡಿಮಾಕುಂಟೆ ಕೆರೆಗೆ 15ಅಡಿಗೂ ಅಧಿಕ ನೀರು ಭರ್ತಿಯಾದ ಹಿನ್ನೆಲೆ ವಿಶೇಷ ಗಂಗೆ ಪೂಜೆ, ನೆರವೇರಿಸಿ ಅವರು ಆಶೀರ್ವಚನ ನೀಡಿದರು.

ಜಮೀನುಗಳಲ್ಲಿ ಮಣ್ಣಿನ ಸವಕಳಿ ತಪ್ಪಿಸಲು, ಅಂತರ್ಜಲ ವೃದ್ದಿಗಾಗಿ ಪೂರ್ವಜರು ನಿರ್ಮಿಸಿದ ಬದುಗಳು, ಗೋಕಟ್ಟೆಗಳನ್ನು ಇತ್ತೀಚೆಗೆ ರೈತರು ದುರಾಸೆಯಿಂದ ನೆಲಸಮಗೊಳಿಸುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ.ಕೂಡಲೇ ಜಾಗೃತರಾಗಿ ನೀರಿನ ಆಕರಗಳ ಸಂರಕ್ಷಿಸಿ ಜಲಮೂಲಗಳನ್ನು ಉಳಿಸಬೇಕು ಎಂದು ಸಲಹೆ ನೀಡಿದರು.

ಭೂಮಂಡಲದಲ್ಲಿ ಮೂರು ಭಾಗ ನೀರಿದ್ದು, ಒಂದು ಭಾಗ ಭೂಮಿ ಆವರಿಸಿದ್ದರೂ ಬಹುತೇಕ ದೇಶಗಳಲ್ಲಿ ಕುಡಿಯುವ ನೀರಿಗೂ ಹಾಹಾಕಾರವಿದೆ. ಪಂಚಭೂತಗಳಲ್ಲಿ ಮೂಲ ಧಾತು ನೀರು. ಸಕಲ ಜೀವರಾಶಿಗಳಿಗೂ ಅದು ಅತ್ಯವಶ್ಯಕ. ಪ್ರಕೃತಿ ಸಂಪತ್ಭರಿತ ಭಾರತದಲ್ಲಿ ಜನಿಸಿದ ನಾವೇ ಪುಣ್ಯವಂತರು. ಧರ್ಮಾತೀತ, ಜಾತ್ಯತೀತ ರಾಷ್ಟ್ರದಲ್ಲಿ ಸರ್ವರೂ ಸಮನ್ವಯ ಜೀವನ ಸಾಗಿಸಿದರೆ ಸರ್ವೋದಯ ಪರಿಕಲ್ಪನೆ ಸಾಧಿಸಿದಂತೆ ಎಂದು ತಿಳಿಸಿದರು.

ಮಳೆಯಿಂದ ನಾಡು (5ನೇ ಪುಟಕ್ಕೆ)

# 12 ಕೈಗಾರಿಕಾ ನಗರಗಳ ಸ್ಥಾಪನೆಗೆ ಕೇಂದ್ರದ ಒಪ್ಪಿಗೆ

ನವದೆಹಲಿ, ಆ. 28 - ಉತ್ಪಾದನಾ ವಲಯಕ್ಕೆ ಉತ್ತೇಜನ ನೀಡುವ ಸಲುವಾಗಿ ದೇಶದ 10 ರಾಜ್ಯಗಳಲ್ಲಿ 12 ಹೊಸ ಕೈಗಾರಿಕಾ ನಗರಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಉತ್ತರ ಪ್ರದೇಶದ ಗ್ರೇಟರ್ ನೋಯಿಡಾ ಹಾಗೂ ಗುಜರಾತ್‌ನ ಢೋಲೆರಾ ಮಾದರಿಯಲ್ಲಿ ಕೈಗಾರಿಕಾ ನಗರಗಳ ಸ್ಥಾಪನೆ ಮಾಡಲಾಗುವುದು.

ಈ ಕೈಗಾರಿಕಾ ನಗರಗಳಿಗೆ 28,602 ಕೋಟಿ ರೂಪಾಯಿಗಳ ಹೂಡಿಕೆ ಮಾಡಲಾಗುವುದು. ಉತ್ತರಾಖಂಡದ ಖುರ್ಪಿಯ, ಪಂಜಾಬ್‌ನ ರಾಜಪುರ - ಪಟಿಯಾಲ, ಮಹಾರಾಷ್ಟ್ರದ ಢಿಗಿ, ಕೇರಳದ ಪಾಲಕ್ಕಾಡ್, ಉತ್ತರ ಪ್ರದೇಶದ ಆಗ್ರ ಮತ್ತು ಪ್ರಯಾಗ್ ರಾಜ್, ಬಿಹಾರದ ಗಯಾ, ತೆಲಂಗಾಣದ ಜಹೀರಾಬಾದ್, ಆಂಧ್ರ ಪ್ರದೇಶದ ಒರ್ವಕಲ್ ಹಾಗೂ ಕೊಪ್ಪರ್ತಿ ಮತ್ತು ರಾಜಸ್ಥಾನದ ಜೋಧಪುರ - ಪಾಳಿ ಮತ್ತು ಹರಿಯಾಣದಲ್ಲಿ ಒಂದು ಕೈಗಾರಿಕಾ ನಗರಗಳ ಸ್ಥಾಪನೆಯಾಗಲಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಂಪುಟದ ಆರ್ಥಿಕ ವ್ಯವಹಾರಗಳ ಸಮಿತಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಮುಂದಿನ ಮೂರು ವರ್ಷಗಳಲ್ಲಿ ಈ ಯೋಜನೆ (2ನೇ ಪುಟಕ್ಕೆ)

# ದಾವಣಗೆರೆ ಸೇರಿ ರಾಜ್ಯದ 16 ನಗರಗಳಲ್ಲಿ ಎಫ್‌ಎಂ

ನವದೆಹಲಿ, ಆ.27 - ದಾವಣಗೆರೆ ನಗರವೂ ಸೇರಿದಂತೆ ರಾಜ್ಯದ 16 ನಗರ ಹಾಗೂ ಪಟ್ಟಣಗಳು ಶೀಘ್ರದಲ್ಲಿ ಖಾಸಗಿ ಎಫ್‌ಎಂ ರೇಡಿಯೊ ಚಾನೆಲ್‌ಗಳನ್ನು ಹೊಂದಲಿವೆ.

234 ನಗರಗಳಲ್ಲಿ 730 ಚಾನೆಲ್‌ಗಳಿಗೆ 'ಖಾಸಗಿ ಎಫ್‌ಎಂ ರೇಡಿಯೊ ಹಂತ–3 ನೀತಿ'ಯ ಅಡಿಯಲ್ಲಿ ಅಂದಾಜು ಮೀಸಲು 784.87 ಕೋಟಿ ರೂ. ವೆಚ್ಚದಲ್ಲಿ 3ನೇ ಆವೃತ್ತಿಯ ಆರೋಹಣ ರೀತಿಯ ಇ-ಹರಾಜು ಪ್ರಕ್ರಿಯೆಗಳನ್ನು ನಡೆಸುವ ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಹೊರತುಪಡಿಸಿ ಎಫ್‌ಎಂ ಚಾನೆಲ್‌ನ ವಾರ್ಷಿಕ ಪರವಾನಗಿ ಶುಲ್ಕವನ್ನು (ಎಎಲ್‌ಎಫ್) ಒಟ್ಟು ಆದಾಯದ ಶೇ 4ರಂತೆ ವಿಧಿಸುವ ಪ್ರಸ್ತಾವನೆಗೆ ಸಂಪುಟ ಅನುಮೋದನೆ ನೀಡಿದೆ. ಇದು 234 ನಗರಗಳು / ಪಟ್ಟಣಗಳಿಗೆ ಅನ್ವಯಿಸುತ್ತದೆ. ಇಲ್ಲಿಯವರೆಗೆ, ಈ ನಗರಗಳು ಮತ್ತು ಪಟ್ಟಣಗಳಲ್ಲಿ ಯಾವುದೇ ಎಫ್‌ಎಂ ಚಾನೆಲ್‌ಗಳು (2ನೇ ಪುಟಕ್ಕೆ)

# ದಾವಣಗೆರೆ ಅರ್ಬನ್ ಬ್ಯಾಂಕ್‌ಗೆ ರಾಷ್ಟ್ರ ಪ್ರಶಸ್ತಿ

## ಪ್ರಶಸ್ತಿ ಬ್ಯಾಂಕಿನ ಸದೃಢತೆಯನ್ನು ಪ್ರತಿಬಿಂಬಿಸುತ್ತದೆ : ಅಧ್ಯಕ್ಷ ಬಿ.ಸಿ. ಉಮಾಪತಿ



ದಾವಣಗೆರೆ, ಆ. 28- ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಪ್ರಗತಿಯ ಮುಂಚೂಣಿಯಲ್ಲಿದ್ದು, ಈ ಹಿನ್ನೆಲೆಯಲ್ಲಿ ಬ್ಯಾಂಕಿಗೆ ಲಭಿಸಿರುವ ರಾಷ್ಟ್ರೀಯ ಪ್ರಶಸ್ತಿಯು ಬ್ಯಾಂಕಿನ ಸದೃಢತೆಯನ್ನು ಪ್ರತಿಬಿಂಬಿಸುತ್ತದೆ ಎಂದು ಜವಳಿ ಉದ್ಯಮಿಯೂ ಆಗಿರುವ ಬ್ಯಾಂಕಿನ ಆಡಳಿತ ಮಂಡಳಿ ಅಧ್ಯಕ್ಷ ಬಿ.ಸಿ. ಉಮಾಪತಿ ಸಂತಸ ವ್ಯಕ್ತಪಡಿಸಿದರು.

ಸ್ಥಳೀಯ ಶ್ರೀ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಇಂದು ನಡೆದ ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕಿನ 63ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಭಾರತ ದೇಶದ ಸಹಕಾರ ಬ್ಯಾಂಕುಗಳ ಪ್ರಗತಿಯನ್ನು ಅವಲೋಕಿಸಿ ಕೊಲ್ಹಾಪುರದ ಅವೀಸ್ ಪಬ್ಲಿಕೇಷನ್ ಸಂಸ್ಥೆಯು ಪ್ರತಿ ವರ್ಷ ಕೊಡಮಾಡುವ ರಾಷ್ಟ್ರೀಯ ಪ್ರಶಸ್ತಿಯನ್ನು ತಮ್ಮ ಬ್ಯಾಂಕ್ 2022-23ನೇ ಸಾಲಿಗೆ ಪಡೆದಿದೆ. ಠೇವಣಾತಿ ವರ್ಗೀಕರಣದಲ್ಲಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಅತ್ಯುನ್ನತ ಸಾಧನೆಗೈದಿದೆ ಎಂದು ಗುರುತಿಸಿ, 'ಬ್ಯಾಂಕೋ ಬ್ಲೂ ರಿಬ್ಬನ್-2023 ರಾಷ್ಟ್ರೀಯ ಪ್ರಶಸ್ತಿ' ನೀಡಿದೆ ಎಂದು ಅವರು ತಿಳಿಸಿದರು.

**ಪ್ರಗತಿಯ ಪಕ್ಷಿನೋಟ :** ಬ್ಯಾಂಕಿನ ಪ್ರಗತಿಯನ್ನು ಪ್ರಸ್ತಾಪಿಸಿದ ಅವರು, 2024, ಮಾರ್ಚ್ ಅಂತ್ಯಕ್ಕೆ 13.55 ಕೋಟಿ ರೂ. ಲಾಭ ಗಳಿಸಿದ್ದು, ಇದು ಕಳೆದ ಸಾಲಿಗಿಂತ 1.54 ಕೋಟಿ ರೂ. ಹೆಚ್ಚಾಗಿರುತ್ತದೆ. 546 ಕೋಟಿ ರೂ.ಗಳಿಗೂ ಹೆಚ್ಚು ಠೇವಣಿ ಸಂಗ್ರಹಿಸಲಾಗಿದ್ದು, ಇಲ್ಲೂ ಕೂಡಾ ಕಳೆದ ವರ್ಷಕ್ಕಿಂತ 53 ಕೋಟಿ ರೂ. ಹೆಚ್ಚಾಗಿರುತ್ತದೆ ಎಂದು ಹೇಳಿದರು.

13.63 ಕೋಟಿ ರೂ. ಷೇರು ಬಂಡವಾಳ ಹೊಂದಿದೆ. 99 ಕೋಟಿ ರೂ. ಕಾಯ್ದಿಟ್ಟ ಮತ್ತು ಇತರೆ ನಿಧಿಗಳಾಗಿದ್ದು, ಇದು ಬ್ಯಾಂಕಿನ ಸದೃಢತೆಯನ್ನು ಬಿಂಬಿಸುತ್ತದೆ. 669 ಕೋಟಿ ರೂ. ದುಡಿಯುವ ಬಂಡವಾಳವಾಗಿದ್ದು, 206 ಕೋಟಿ ರೂ.ಗಳನ್ನು ವಿವಿಧ ಬ್ಯಾಂಕುಗಳ ಖಾಯಂ ಠೇವಣಿಗಳಲ್ಲಿ ಮತ್ತು ಇತರೆ ಹಣಕಾಸು ಸಂಸ್ಥೆಗಳಲ್ಲಿ ಲಾಭದಾಯಕವಾಗಿ ತೊಡಗಣೆ ಮಾಡಲಾಗಿದೆ.

ಸಣ್ಣ - ಸಣ್ಣ ವ್ಯಾಪಾರಸ್ಥರು, ಸ್ವಾವಲಂಬಿಗಳು, ವರ್ತಕರು, ಉದ್ಯಮಿಗಳು, ಕೈಗಾರಿಕೆಗಳಿಗೆ ಅವರ ಅಗತ್ಯಗನುಗುಣವಾಗಿ 396 ಕೋಟಿ ರೂ. ಸಾಲ-ಸೌಲಭ್ಯ ಒದಗಿಸಲಾಗಿದ್ದು, ಈ ಮೂಲಕ ಅವರನ್ನು ಅವರ ಉದ್ಯಮಕ್ಕೆ (3ನೇ ಪುಟಕ್ಕೆ)


॥ ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು ॥ ॥ ಶ್ರೀ ಉಜ್ಜಯಿನಿ ಮರುಳಸಿದ್ದೇಶ್ವರ ಪ್ರಸನ್ನ ॥

# ಗುರು-ಲಿಂಗ ಜಂಗಮಾರಾಧನೆ ಆಹ್ವಾನ



ದಾವಣಗೆರೆ ನಗರದ ಹೆಸರಾಂತ ಆಟೋಮೊಬೈಲ್ ಉದ್ಯಮಿ, ಶ್ರೀ ಮಲ್ಲಿಕಾರ್ಜುನ ಸಮೂಹ ಸಂಸ್ಥೆಗಳ ಅಧ್ಯಕ್ಷರು, ದಾವಣಗೆರೆ ಆಟೋಮೊಬೈಲ್ ಡೀಲರ್ಸ್ ಅಸೋಸಿಯೇಷನ್ ಅಧ್ಯಕ್ಷರು, ಹಾಗೂ ದಾವಣಗೆರೆ ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷರಾದ

## ವೇ॥ ಶ್ರೀ ನರಗನಹಳ್ಳಿ ಮಠದ ಎನ್.ಜೆ. ಗುರುಸಿದ್ದಯ್ಯನವರು

ದಿನಾಂಕ : 21.08.2024 ರಂದು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ


## 'ಗುರು-ಲಿಂಗ ಜಂಗಮಾರಾಧನೆ'ಯನ್ನು

ದಿನಾಂಕ :29.08.2024ರ ಗುರುವಾರ ಬೆಳಿಗ್ಗೆ 11.30ಕ್ಕೆ ಷ॥ ಬ್ರ॥ ಡಾ॥ ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳು, ಎಂಸಿಸಿ ಬಿ ಬ್ಲಾಕ್, ಶಿವಾಚಾರ್ಯ ನಿಕೇತನ, ಹಿರೇಮಠ, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಪತ್ನಿ : ಶ್ರೀಮತಿ ಶಕುಂತಲ ಗುರುಸಿದ್ದಯ್ಯ
ಶ್ರೀಮತಿ ಪಂಕಜ, ಶ್ರೀ ಡಾ॥ ಹೆಚ್.ಎಂ. ವೀರಯ್ಯ
ಶ್ರೀಮತಿ ಸಿರಿಗೌರಿ ಶ್ರೀ ಎನ್.ಜಿ. ಚಂದ್ರಶೇಖರ್
ಶ್ರೀಮತಿ ಸುಮನ್ ಶ್ರೀ ಎನ್.ಜಿ. ಸಿದ್ದೇಶ್, ನಿಖಿತ, ವರುಣ್, ನಮ್ರುತ, ಅಮ್ರಿತ
ನರಗನಹಳ್ಳಿ ಮಠದ ವಂಶಸ್ಥರು ಮತ್ತು ಕುಟುಂಬದವರು ಹಾಗೂ ಬಂಧು-ಮಿತ್ರರು.
ಫೋನ್ : 97411 13055, 98869 78843

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನ ಪತ್ರಿಕೆಯೆಂದು ಭಾವಿಸಿ ಆಗಮಿಸಲು ಕೋರಿದೆ.

## ಮಲೇಬೆನ್ನೂರಿನ ಶ್ರೀ ವೀರಭದ್ರೇಶ್ವರ ಸ್ವಾಮಿ ವಿಶೇಷ ಪೂಜೆ





ಮಲೇಬೆನ್ನೂರು, ಆ.28- ಪಟ್ಟಣದ ಹೊರ ವಲಯದಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿರುವ ಭದ್ರಕಾಳಮ್ಮ ಮತ್ತು ವೀರಭದ್ರೇಶ್ವರ ಸ್ವಾಮಿಗೆ ಶ್ರಾವಣ ಮಾಸದ ಕೊನೆ ಮಂಗಳವಾರದ ಪ್ರಯುಕ್ತ ಮಾಡಲಾಗಿದ್ದ ವಿಶೇಷ ಪೂಜೆ, ಅಲಂಕಾರ ಭಕ್ತರ ಗಮನ ಸೆಳೆಯಿತು.

## ಹರಿಹರೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ



ಹರಿಹರ, ಆ. 28- ನಗರದ ಇತಿಹಾಸ ಪ್ರಸಿದ್ಧ ಶ್ರೀ ಹರಿಹರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ವಿಶೇಷ ಅಭಿಷೇಕ, ಅಲಂಕಾರ ಮಹಾಮಂಗಳಾರತಿ ಸೇರಿದಂತೆ ಪೂಜಾ ಕಾರ್ಯಗಳು ಜರುಗಿದವು. ಪ್ರಧಾನ ಅರ್ಚಕ ಶ್ರೀನಿವಾಸ್ ಮೂರ್ತಿ, ಗುರುಪ್ರಸಾದ್ ಪೂಜೆ ನೆರವೇರಿಸಿದರು. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿದ್ದರು.

## ಕಲಾವಿದರ ಸಮಸ್ಯೆ ಅರಿಯಲು ರಾಜ್ಯ ಸಂಚಾರ



**ಹಾವೇರಿಯಲ್ಲಿ ರಂಗಾಯಣ ನಿರ್ದೇಶಕ ರಾಜು ತಾಳಿಕೋಟಿ**

ರಾಣೇಬೆನ್ನೂರು, ಆ.28- ನಾಲ್ಕು ದಶಕಗಳಿಂದ ರಂಗಭೂಮಿ ಸೇವೆ ಮಾಡುತ್ತಾ ಬಂದಿರುವೆ. ರಂಗಾಯಣದಿಂದ-ಕಲಾವಿದರಿಗೆ, ಕಲಾವಿದರಿಂದ-ರಂಗಾಯಣಕ್ಕೆ ಆಗಬೇಕಿರುವ ಕಾರ್ಯಗಳನ್ನು ಅರಿಯಲು ಪ್ರತಿ ಜಿಲ್ಲೆಗೂ ಸಂಚರಿಸುತ್ತಿದ್ದೇನೆ. ಈ ಸಂಚಾರ ಹಾವೇರಿ ಜಿಲ್ಲೆಯಿಂದ ಪ್ರಾರಂಭಗೊಂಡಿದೆ ಎಂದು ರಂಗಾಯಣದ ನಿರ್ದೇಶಕ, ರಂಗಕರ್ಮಿ ರಾಜು ತಾಳಿಕೋಟೆ ಹೇಳಿದರು.

ಹಾವೇರಿ ಸರ್ಕಾರಿ ನೌಕರರ ಭವನದಲ್ಲಿ ನಡೆದ ಕಾರ್ಯ ಚಟುವಟಿಕೆಗಳ ಸಮಾಲೋಚನೆ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು.

ಜಿಲ್ಲೆಯಲ್ಲಿ ಅಪಾರ ಪ್ರಮಾಣದ ಕಲಾವಿದರಿದ್ದಾರೆ, ಇಲ್ಲಿ ರಂಗಾಯಣದ ಶಾಖೆ ತೆರೆಯಬೇಕು ಎನ್ನುವುದು ಸೇರಿದಂತೆ ಸ್ಥಳೀಯರ ಬೇಡಿಕೆಗಳ ಬಗ್ಗೆ ಪ್ರಾಮಾಣಿಕವಾಗಿ ಸ್ಪಂದಿಸುವುದಾಗಿ ತಿಳಿಸಿ, ಗ್ರಾಮೀಣ ಪ್ರತಿಭೆಗಳಿಗೆ ಆದ್ಯತೆ ನೀಡುವ, ಬೀದಿ ನಾಟಕಗಳ ಕಲಾವಿದರನ್ನು ಗುರುತಿಸುವ ಉದ್ದೇಶದಿಂದ ಬೆಳಗಾವಿ ವಿಭಾಗದ ಏಳು ಜಿಲ್ಲೆಗಳಲ್ಲಿ ಸಂಚರಿಸಿ ಕಲಾವಿದರ ಸಮಸ್ಯೆಗಳ ಕುರಿತಂತೆ ಅಹವಾಲು ಪಡೆಯುವುದಾಗಿ ರಾಜು ತಾಳಿಕೋಟೆ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಉಪ ನಿರ್ದೇಶಕಿ ಶಶಿಕಲಾ ಹುಡೇದ, ನಿರ್ದೇಶಕ ಆರ್.ವಿ.ಚಿನ್ನಿಕಟ್ಟಿ, ಸಾಹಿತಿ ಸತೀಶ ಕುಲ್ಕರ್ಣಿ, ಕಸಾಪ ಜಿಲ್ಲಾ ಅಧ್ಯಕ್ಷ ಲಿಂಗಯ್ಯ ಹಿರೇಮಠ ಮತ್ತಿತರರಿದ್ದರು.

## ವಿದ್ಯುತ್ ತಗಲಿ ಚಾಟಿ ನಾಗರಾಜ್ ಸಾವು

ಹೊನ್ನಾಳಿ, ಆ.28- ಪಟ್ಟಣದ ಕಲ್ಕೇರಿ ವಾಸಿ 38 ವರ್ಷದ ಚಾಟಿ ನಾಗರಾಜ್ ಕೊನಕನಹಳ್ಳಿ ಭತ್ತದ ಜಮೀನಿಗೆ ನೀರು ಬಿಡಲು ಹೋದಾಗ ವಿದ್ಯುತ್ ತಗಲಿ ಸಾವನ್ನಪ್ಪಿರುವ ಘಟನೆ ಹೊನ್ನಾಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಭೀಮಪ್ಪನವರ 8ನೇ ಮಗನಾದ ಮೃತನು ಎರಡು ವರ್ಷಗಳ ಹಿಂದೆ ಮದುವೆಯಾಗಿದ್ದು. 9 ತಿಂಗಳ ಮಗು ಇರುವುದಾಗಿ ತಿಳಿದು ಬಂದಿದೆ. ಇಂದು ಸಂಜೆ 5:00 ಗಂಟೆಗೆ ಜಮೀನಿನಲ್ಲಿ ವಿದ್ಯುತ್ ತಗುಲಿದಾಗ ಹತ್ತಿರದಲ್ಲಿದ್ದ ಗಜೇಂದ್ರಪ್ಪ ವಿದ್ಯುತ್ತಿನಿಂದ ಬೇರ್ಪಡಿಸಿ ವಾಹನದಲ್ಲಿ ಸಾರ್ವಜನಿಕ ಆಸ್ಪತ್ರೆಗೆ ತೆರಳಿದ್ದು ಚಿಕಿತ್ಸೆ ಪಡೆಯುತ್ತಿದ್ದ ಸಂದರ್ಭದಲ್ಲಿ ಸಾವನ್ನಪ್ಪಿದ್ದು ಎ ಎಸ್ ಐ ಅಶೋಕ್ ರೆಡ್ಡಿ ತನಿಖೆ ಕೈಗೊಂಡಿದ್ದಾರೆ.

## ವಿಷ ಸೇವಿಸಿ ಚೀಲಾಪುರ ರೈತ ಸಾವು

ಹೊನ್ನಾಳಿ, ಆ.28- ತಾಲ್ಲೂಕಿನ ಚೀಲಾಪುರ ಗ್ರಾಮದ ತನ್ನ ಜಮೀನಿನಲ್ಲಿ ಬುಧವಾರ ಬೆಳಿಗ್ಗೆ 9ಕ್ಕೆ ವಿಷ ಸೇವಿಸಿ, ರೈತ ಹನುಮಂತ ನಾಯಕ್ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹೊನ್ನಾಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಒಂದು ವರ್ಷದ ಕೆಳಗೆ ಅಡಿಕೆ ಗಿಡ ಹಾಗೂ ಅರ್ಧಭಾಗ ಮೆಕ್ಕೆಜೋಳ ಬೆಳೆಯುತ್ತಿದ್ದು, ಕಳೆದ ಮೂರು ವರ್ಷಗಳಿಂದ ಸರಿಯಾಗಿ ಬೆಳೆ ಬಾರದೇ ಜಮೀನಿನಲ್ಲಿ ವಿಷ ಕುಡಿದು ಒದ್ದಾಡುತ್ತಿರುವುದನ್ನು ಗಮನಿಸಿದ ಅಕ್ಕ ಪಕ್ಕದಲ್ಲಿದ್ದ ಗಿರಿಜಾ ಬಾಯಿ, ಬೆನಕ ನಾಯ್ಕ್ ಇವರಿಂದ ಮಾಹಿತಿ ತಿಳಿದು ಪತ್ನಿ ಸಾಸ್ವೇಹಳ್ಳಿ ಪ್ರಾಥಮಿಕ ಚಿಕಿತ್ಸೆ ನಂತರ ಹೊನ್ನಾಳಿಗೆ ಹೋಗುವ ಮಾರ್ಗ ಮಧ್ಯೆ ಹನುಮಂತ ನಾಯ್ಕ್ ಸಾವನ್ನಪ್ಪಿರುವುದಾಗಿ ವರದಿಯಾಗಿದೆ.

ಪತ್ನಿ ಮಂಜುಳಾ ಬಾಯಿ, ಮೃತ ಗಂಡನು ಸಾಸ್ವೇಹಳ್ಳಿ ಸೊಸೈಟಿಯಲ್ಲಿ 30,000 ಸೇರಿದಂತೆ ಕೆಲವೊಂದು ಖಾಸಗಿ ವ್ಯಕ್ತಿಗಳಿಂದ ಸಾಲ ಪಡೆದಿದ್ದಾಗಿ ತಿಳಿಸಿದ್ದು, ಪಿಎಸ್ಐ ನಿರ್ಮಲ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.


**ಏಳನೇ ವರ್ಷದ ಪುಣ್ಯಸ್ಮರಣೆ**



**ದಿ|| ಶ್ರೀಮತಿ ಸೌಭಾಗ್ಯ**

ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷಗಳಾದವು, ಸದಾ ನಿಮ್ಮ ಸ್ಮರಣೆಯಲ್ಲಿರುವ

**ಪತಿ : ಶ್ರೀ ಕೆ. ಸಿದ್ದಪ್ಪ ಮತ್ತು ಮಕ್ಕಳು ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಮಿತ್ರರು**

**ಇವರ ಸ್ಮರಣೆ : ದಿ:29.08.2024ರ ಗುರುವಾರ ಬೆಳಿಗ್ಗೆ 11.00 ಗಂಟೆಗೆ 6ನೇ ಮೇನ್, 4ನೇ ಕ್ರಾಸ್, ವಿನೋಬನಗರ, ದಾವಣಗೆರೆಯ ಮೃತರ ಸ್ವಗೃಹದಲ್ಲಿ ಪುಣ್ಯಸ್ಮರಣೆಯನ್ನು ನೆರವೇರಿಸಲಾಗುವುದು. ಫೋ. : 94826 90053**



**ಚಿರಸ್ಮರಣೆ**





ಕಾತರಕಿ ವೀರಭದ್ರಪ್ಪನವರು
ನಿಧನ : 19.2.2014

ಕಾತರಕಿ ವೀರಮ್ಮನವರು
ನಿಧನ : 28.8.2005

ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ ಹಾಗೂ ಸದಾ ನಿಮ್ಮ ಸ್ಮರಣೆಯಲ್ಲಿರುವ,

**ಶ್ರೀಮತಿ ರೂಪಾ** ಮತ್ತು **ಶ್ರೀ ಕಾತರಕಿ ರುದ್ರೇಶ್**
**ಶ್ರೀಮತಿ ಕವಿತಾ** ಮತ್ತು **ಶ್ರೀ ಪ್ರಭಾಕರ್**

ಮೊಮ್ಮಕ್ಕಳಾದ : ಚಿ|| ಕಾತರಕಿ ಗೌತಮ್‌ರಾಜ್,ಚಿ|| ಕಾತರಕಿ ವಿಜೇತ್, ಕು|| ಪ್ರಾರ್ಥನಾ ಬಂಧುಗಳು, ವಿನೋಬನಗರ, ದಾವಣಗೆರೆ. ಮೊ : 9482586657


# ಅಕ್ರಮ ಗಣಿಗಾರಿಕೆ ಮುಚ್ಚಿ ಹಾಕುವ ಹುನ್ನಾರ : ಆರೋಪ

ದಾವಣಗೆರೆ, ಆ. 28- ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಶಾಂತಿಸಾಗರ ಮಾವಿನಕಟ್ಟೆ ವಲಯ ಅರಣ್ಯ ವ್ಯಾಪ್ತಿಯಲ್ಲಿ ಕಳೆದ ಒಂದು ವರ್ಷದಿಂದ ಸುಮಾರು 250 ರಿಂದ 300 ಎಕರೆಯಷ್ಟು ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿ ಅರಣ್ಯ ಗುಡ್ಡಗಳನ್ನು ಕಡಿದು ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದರೂ ಸಹ ಅರಣ್ಯ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳಲು ಮುಂದಾಗದೆ ಪ್ರಕರಣ ಮುಚ್ಚಿ ಹಾಕುವ ಹುನ್ನಾರ ನಡೆಸಲಾಗುತ್ತಿದೆ ಎಂದು ನ್ಯಾಯವಾದಿ ಜಿ.ಆರ್. ಷಡಾಕ್ಷರಪ್ಪ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅರಣ್ಯ ಒತ್ತುವರಿ ಮಾಡಿ ಅಡಿಕೆ ತೋಟ ಮಾಡಲಾಗಿದೆ. ಅರಣ್ಯ ಗುಡ್ಡಗಳಲ್ಲಿ ಅಕ್ರಮ ಮಣ್ಣು ಗಣಿಗಾರಿಕೆ ನಡೆಯುತ್ತಿದೆ. ಈ ಬಗ್ಗೆ ಸಾರ್ವಜನಿಕರು ಹಲವಾರು ಬಾರಿ ಸಂಬಂಧಿಸಿದ ಅಧಿಕಾರಿಗಳಿಗೆ ದೂರು ನೀಡಿದ್ದಾರೆ.

ಇದಲ್ಲದೇ ಇತ್ತೀಚೆಗೆ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಜಿಲ್ಲೆಗೆ ಭೇಟಿ ನೀಡಿದಾಗ ಅವರಿಗೂ ಸಹ ದೂರು ನೀಡಿದ್ದಾರೆ. ಅರಣ್ಯ ಸಚಿವರು ದೂರು ಸ್ವೀಕರಿಸಿ ತನಿಖೆಗೆ ಸೂಚಿಸಿದಾಗ ಇಲಾಖೆಯಲ್ಲಿ ಅರಣ್ಯ ಒತ್ತುವರಿಗೆ ಸಹಕಾರ ನೀಡಿದವರಿಂದಲೇ ತನಿಖೆ ನಡೆಸಿದ್ದು, ಕೇವಲ ಒಬ್ಬ ಗಾರ್ಡ್‌ನ್ನು ಮಾತ್ರ ಅಮಾನತ್ತುಗೊಳಿಸಿದ್ದು, ಇದು ಅಧಿಕಾರಿಗಳು ಒತ್ತುವರಿ ಪ್ರಕರಣವನ್ನು ಮುಚ್ಚಿಹಾಕಲು ನಡೆಸಿರುವ ಸಂಚಾಗಿದೆ ಎಂದು ಕಿಡಿಕಾರಿದರು.

ಸಚಿವರ ಸೂಚನೆ ಮೇರೆಗೆ ಕಾಟಾಚಾರದ ತನಿಖೆ ನಡೆಸಿರುವ ಉಪ ಅರಣ್ಯ ಸಂರಕ್ಷಣಾಧಿಕಾರಿ ಆಶಿಶ್ ರೆಡ್ಡಿ, ಭದ್ರಾವತಿ ತಾಲ್ಲೂಕು ಗುಡುಮಘಟ್ಟೆ ಗ್ರಾಮದ ಸರ್ವೆ ನಂ. 43ರಲ್ಲಿ ಕಳೆದ 4-5 ತಿಂಗಳಿನಿಂದ ಸುಮಾರು 15 ಎಕರೆಯಷ್ಟು ಅರಣ್ಯ ಪ್ರದೇಶದ ಗುಡ್ಡ ಕಡಿದು ಸಮತಟ್ಟಾದ ಜಾಗವನ್ನು ನಿರ್ಮಿಸಿ ಅಲ್ಲಿ ಅಡಿಕೆ ತೋಟ ನಿರ್ಮಾಣ ಮಾಡಲಾಗಿದೆ ಎಂದು ಒಪ್ಪಿಕೊಂಡಿದ್ದಾರೆ.

ಚನ್ನಗಿರಿ ಉಪವಿಭಾಗದ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಶಾಂತಿಸಾಗರ ವಲಯ ಅರಣ್ಯಾಧಿಕಾರಿಯವರು 'ಅರಣ್ಯ ಭೂಮಿ ಒತ್ತುವರಿಯಾಗಿರುವ ಈ ಮಾಹಿತಿಯನ್ನು ಅರಣ್ಯ ಇಲಾಖೆಗೆ ನೀಡುವಲ್ಲಿ ಕರ್ತವ್ಯ ನಿರ್ಲಕ್ಷ್ಯ ತೋರಿದ್ದಾರೆಂದು ನೀಡಿರುವ ವರದಿಯನ್ನಾಧರಿಸಿ ಗಸ್ತು ಅರಣ್ಯ ಪಾಲಕ ಜೆ.ಎಲ್. ಜಯರಾಮ್ ಅವರನ್ನು ಅಮಾನತ್ತು ಪಡಿಸುವುದಾಗಿ ಆದೇಶ ಮಾಡಿರುತ್ತಾರೆ ಎಂದರು.

ಶಾಂತಿಸಾಗರ ವಲಯದಲ್ಲಿ ನಿರಂತರವಾಗಿ ಅರಣ್ಯ ಒತ್ತುವರಿಯಾಗುತ್ತಿರುವ ಬಗ್ಗೆ ಸಾರ್ವಜನಿಕರಿಂದ ನಿರಂತರ ದೂರುಗಳು ಬರುತ್ತಿದ್ದರೂ ಆ ಬಗ್ಗೆ ಗಮನ ಹರಿಸಬೇಕಿದ್ದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಆರ್.ರತ್ನಪ್ರಭ, ವಲಯ ಅರಣ್ಯಾಧಿಕಾರಿ ಜಗದೀಶ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಆಶಿಶ್ ರೆಡ್ಡಿಯವರು ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯಲೋಪ ಎಸಗಿದ್ದಾರೆ. ಮೇಲ್ನೋಟಕ್ಕೆ ಅರಣ್ಯ ಗುಡ್ಡಗಳು ನಾಶವಾಗಿರುವುದು ಗೊತ್ತಾಗುತ್ತದೆ. ಆದರೆ, ಆಶಿಶ್ ರೆಡ್ಡಿಯವರು ತಮ್ಮ ಆದೇಶದಲ್ಲಿ ಕೇವಲ 15 ಎಕರೆ ಮಾತ್ರ ಅರಣ್ಯ ನಾಶವಾಗಿದೆ ಎಂದು ಹೇಳಿರುವುದು ಈ ಪ್ರಕರಣದಲ್ಲಿ ಆರ್.ಎಫ್.ಓ ಜಗದೀಶ್ ಮತ್ತು ಎಸಿಎಫ್‌ಆರ್.ರತ್ನಪ್ರಭ ಇವರನ್ನು ರಕ್ಷಣೆ ಮಾಡಲು ಡಿಸಿಎಫ್ ಆಶಿಶ್ ರೆಡ್ಡಿ ಈ ರೀತಿಯ ಕಾಟಾಚಾರದ ತನಿಖೆ ನಡೆಸಿದ್ದಾರೆ ಎಂದು ಕಿಡಿಕಾರಿದರು.

ಶಾಂತಿಸಾಗರ ವಲಯದಲ್ಲಿ ಅವ್ಯಾಹತವಾಗಿ ಅರಣ್ಯ ನಾಶ ಆಗುತ್ತಿದ್ದರೂ ಈ ಮೂವರು ಅಧಿಕಾರಿಗಳು ಒತ್ತುವರಿದಾರರೊಂದಿಗೆ ಶಾಮೀಲಾಗಿರುವ ಸಂಶಯ ಇದೆ. ಕಾರಣ ಈ ಅಧಿಕಾರಗಳನ್ನು ಸೇವೆಯಿಂದ ವಜಾ ಮಾಡಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಸಾಮಾಜಿಕ ಕಾರ್ಯಕರ್ತ ಚಿತ್ರಪ್ಪ ರಾಯಭಾಗ ಇತರರು ಇದ್ದರು.

## ಹರಿಹರ ತಾ. ಮಾದಿಗ ಸಮಾಜದ ಸದಸ್ಯತ್ವ ಅಭಿಯಾನ ಆರಂಭ




ಹರಿಹರ,ಆ.28- ಮಾದಿಗ ಸಮಾಜದ ಸದಸ್ಯತ್ವ ಅಭಿಯಾನ ಆರಂಭಿಸಲಾಗುವುದು ಎಂದು ತಾಲ್ಲೂಕು ಮಾದಿಗ ಸಮಾಜದ ಅಧ್ಯಕ್ಷ ಎಂ.ಎಸ್. ಆನಂದಕುಮಾರ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಮೂಹಿಕ ಮದುವೆ, ವಿವಿಧ ರಂಗಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನ ಸೇರಿದಂತೆ ಹಲವಾರು ಸಮಾಜ ಮುಖಿ ಕಾರ್ಯಗಳನ್ನು ಮಾಡುತ್ತಾ ಬಂದಿದ್ದು, ಸದಸ್ಯತ್ವ ಅಭಿಯಾನದ ಮೂಲಕ ಸಮಾಜವನ್ನು ಇನ್ನಷ್ಟು ಸದೃಢಗೊಳಿಸುವ ಕಾರ್ಯವನ್ನು ಮಾಡಲಾಗುತ್ತದೆ. ತಾಲ್ಲೂಕಿನ ಸರಹದ್ದಿನಲ್ಲಿ ವಾಸವಾಗಿರುವ 18 ವರ್ಷ ಮೀರಿದ ಪುರುಷರು ಮತ್ತು ಮಹಿಳೆಯರು ಸದಸ್ಯರಾಗಲು ಅರ್ಜಿ ಸಲ್ಲಿಸಬಹುದು ಎಂದರು.

ಕಾರ್ಯದರ್ಶಿ ಎಚ್. ಶಿವಪ್ಪ ಮಾತನಾಡಿ, ತಾಲ್ಲೂಕಿನ 80 ಹಳ್ಳಿಗಳಲ್ಲಿ ಮಾದಿಗ ಸಮಾಜದ ಜನರು ಇದ್ದು, ಕಳೆದ ಮೂರು ವರ್ಷದ ಹಿಂದೆ ಈ ಕೆಲಸವನ್ನು ಮಾಡಬೇಕಿತ್ತು, ಆದರೆ ಹಲವಾರು ತಾಂತ್ರಿಕ ಕಾರಣಗಳಿಂದಾಗಿ ಸಾಧ್ಯವಾಗಲಿಲ್ಲ. ಸಮಾಜವನ್ನು ರಾಜಕೀಯವಾಗಿ, ಸಾಮಾಜಿಕವಾಗಿ, ಅಧ್ಯಾತ್ಮಿಕವಾಗಿ, ಶೈಕ್ಷಣಿಕವಾಗಿ ಸದೃಢಗೊಳಿಸುವುದು ಅನಿವಾರ್ಯವಾಗಿದ್ದು, ಆ ದೃಷ್ಟಿಯಿಂದ ಸದಸ್ಯತ್ವ ಅಭಿಯಾನ ಆರಂಭಿಸಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿ.ಎಂ. ಧರ್ಮದಾತ, ಎಲ್. ಬಿ. ಹನುಮಂತಪ್ಪ, ಕೊಕ್ಕನೂರು ಬಸವರಾಜಪ್ಪ, ರಾಜನಹಳ್ಳಿ ಜಿ.ಎಂ. ಸಿದ್ದಾರೂಡ, ರಾಜನಹಳ್ಳಿ ಎ.ಕೆ. ನಾಗೇಂದ್ರಪ್ಪ, ಎಂ.ಎಸ್. ಶ್ರೀನಿವಾಸ್, ಎ.ಕೆ. ದಾಸಪ್ಪ, ಬನ್ನಿಕೋಡು ಹನುಮಂತಪ್ಪ, ಹಳ್ಳಿಹಾಳ ಹನುಮಂತಪ್ಪ, ನಿಂಗಪ್ಪ ದೂಳೆಹೊಳೆ, ಇತರರು ಹಾಜರಿದ್ದರು.

**ಸ್ಪಷ್ಟನೆ:** ಇತ್ತೀಚೆಗೆ ಹರಿಹರ ತಾಲ್ಲೂಕು ಮಾದಿಗ ಸಮಾಜಕ್ಕೆ ನೂತನ ಅಧ್ಯಕ್ಷರನ್ನು ಆಯ್ಕೆ ಮಾಡಲಾಗಿದೆ ಎಂದು ಅವರ ಹೆಸರು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ನೀವು ಮಾದಿಗ ಸಮಾಜದ ಅಧ್ಯಕ್ಷ ಎಂದು ಹೇಳುತ್ತೀರಿ ಇದರಲ್ಲಿ ಯಾರು ಅಧಿಕೃತ ಅಧ್ಯಕ್ಷರು ಎಂಬ ಪ್ರಶ್ನೆಗೆ ಉತ್ತರಿಸಿದ ಆನಂದಕುಮಾರ್ ನಮ್ಮದು ನೋಂದಣಿ ಆಗಿರುವ ಸಂಘವಾಗಿದೆ. ಹಾಗಾಗಿ ಈಗ ನಾವು ಸದಸ್ಯತ್ವ ಅಭಿಯಾನ ಆರಂಭಿಸಿದ್ದೇವೆ ಎಂದು ಸ್ಪಷ್ಟಪಡಿಸಿದರು.

## ಖೋ-ಖೋ : ಸಂತ ಪೌಲ ಕಾಲೇಜಿನ ವಿದ್ಯಾರ್ಥಿಗಳು ಜಿಲ್ಲಾ ಮಟ್ಟಕ್ಕೆ ಆಯ್ಕೆ



ದಾವಣಗೆರೆ, ಆ.27- ಸಂತ ಪೌಲರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ತಾಲ್ಲೂಕು ಮಟ್ಟದ ಖೋ-ಖೋ ಕ್ರೀಡಾ ಕೂಟದಲ್ಲಿ ಪ್ರಥಮ ಸ್ಥಾನ ಪಡೆದು, ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

## ಹರಿಹರ ಠಾಣೆಯಲ್ಲಿ ಶ್ರಾವಣ ಮಾಸದ ಪೂಜೆ



ಹರಿಹರ, ಆ. 27- ನಗರದ ಪೊಲೀಸ್ ಠಾಣೆಯ ಆವರಣದಲ್ಲಿರುವ ಗಣೇಶ, ಆಂಜನೇಯ ಸ್ವಾಮಿ, ನಾಗದೇವತೆ ಮತ್ತು ನವಗ್ರಹಗಳಿಗೆ ಶ್ರಾವಣ ಮಾಸದ ಅಂಗವಾಗಿ ತಹಶೀಲ್ದಾರ್ ಗುರುಬಸವರಾಜ್, ಡಿವೈಎಸ್ಪಿ ಜಿ.ಎಸ್. ಬಸವರಾಜ್, ಸಿಪಿಐ ಸುರೇಶ್ ಸಗಲಿ ಇವರು ವಿಶೇಷ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಪಿಎಸ್ಐ ಚಿದಾನಂದ, ಗುರುಸಿದ್ದಯ್ಯ ಹಿರೇಮಠ, ಎಎಸ್ಐ ಡಿ.ಟಿ. ಶ್ರೀನಿವಾಸ್, ಸಿಬ್ಬಂದಿಗಳಾದ ಲಿಂಗರಾಜ್, ಕರಿಯಪ್ಪ, ಹನುಮಂತಪ್ಪ ಗೋಪನಾಳ, ಮುರುಳೀಧರ್, ಕವಿತಾ, ರವಿಕುಮಾರ್, ಸತೀಶ್, ನಾಗರಾಜ್ ಸಿಂಗ್ರಿಹಳ್ಳಿ, ನಗರಸಭೆ ಸದಸ್ಯರಾದ ಕೆ.ಜಿ. ಸಿದ್ದೇಶ್, ಎ.ಬಿ. ವಿಜಯಕುಮಾರ್, ವಕೀಲ ರುದ್ರಗೌಡ, ಅಡಕಿ ಕುಮಾರ್, ಚೂರಿ ಜಗದೀಶ್, ಸತ್ಯನಾರಾಯಣ, ದೇವೇಂದ್ರಪ್ಪ, ಮಂಜುನಾಥ್ ಕೊಪ್ಪಳ, ಕೃಷ್ಣಪ್ಪ, ಮಹಾಂತೇಶ್, ಸಂತೋಷ ನೋಟದರ್, ಪ್ರವೀಣ್ ಪವರ್, ರವೀಂದ್ರ ಹೋವಳೆ ಇತರರು ಹಾಜರಿದ್ದರು.

## ಕೇಂದ್ರ ವೇತನ ಶ್ರೇಣಿಗೆ ಪ್ರಾಮಾಣಿಕ ಪ್ರಯತ್ನ

**(1ನೇ ಪುಟದಿಂದ)** ಪ್ರಯತ್ನ ಮಾಡುತ್ತಾ ಬಂದಿದ್ದು, ಶೇ. 98 ರಷ್ಟು ಬೇಡಿಕೆಗಳನ್ನು ಈಗಾಗಲೇ ಈಡೇರಿಸುವಲ್ಲಿ ಮುಂದಾಗಿರುವುದಾಗಿ ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ಶಿವಮೊಗ್ಗದ ಡಾ. ಧನಂಜಯ ಸರ್ಜಿ ಮಾತನಾಡಿ, ವಿದ್ಯಾರ್ಥಿಗಳು ಕೇವಲ ಅಂಕಗಳನ್ನು ಬೆನ್ನಟ್ಟಿ ಹೋಗುವುದು ಸರಿಯಲ್ಲ. 'ಓದು ಒಕ್ಕಾಲು ಬುದ್ದಿ ಮುಕ್ಕಾಲು' ಎನ್ನುವಂತೆ ಪಠ್ಯೇತರ ಚಟವಟಿಕೆಗಳಲ್ಲಿ ಪಾಲ್ಗೊಳ್ಳಬೇಕು. ಕ್ರೀಡೆ, ಸಂಗೀತ, ನಾಟಕ, ನೃತ್ಯ ಮುಂತಾದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ಮಿದುಳು ಕ್ರಿಯಾಶೀಲವಾಗಿರುತ್ತದೆ ಎಂದರು.

ಶಿಕ್ಷಣದ ಪ್ರಗತಿಗೆ ಅಂಕಗಳಿಕೆ ಬೇಕು. ಆದರೆ ಅದೇ ಮುಖ್ಯವಾಗಿರಬಾರದು. ಓದಿನ ಜೊತೆಗೆ ಇತರೆ ಪಠ್ಯೇತರ ಚಟುವಟಿಕೆಗಳನ್ನು ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು. ಪೋಷಕರು ತಮ್ಮ ಮಕ್ಕಳಿಗೆ ಸಂಸ್ಕೃತಿ, ಸಂಸ್ಕಾರ, ಶಿಸ್ತು, ಬಡತನ, ಹಣದ ಮಹತ್ವದ ಬಗ್ಗೆ ತಿಳಿಸಿಕೊಡುವ ಅಗತ್ಯವಿದೆ ಎಂದು ಹೇಳಿದರು.

ವಿದ್ಯಾರ್ಥಿಗಳು 'ಎಸ್‌ಕ್ಯೂಆರ್‌ಆರ್‌ಆರ್' ಪದ್ಧತಿಯಲ್ಲಿ ಓದು, ಮನನ ಮತ್ತು ಸ್ಮರಣೆ ವಿಧಾನ ಅನುಸರಿಸಿದರೆ ಅಧ್ಯಯನ ಸುಲಭವಾಗುತ್ತದೆ. ಪರೀಕ್ಷೆಗಳನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಾಗುತ್ತದೆ ಎಂದರು.

ಮರೆವು ದೇವರು ಕೊಟ್ಟ ವರ. ಆದರೆ ಜೀವನದ ಕಹಿ ಘಟನೆಗಳನ್ನು ಮರೆಯದಿದ್ದರೆ ಮತ್ತಷ್ಟು ಮಾನಸಿಕ ತುಮುಲ ಹೆಚ್ಚಾಗುತ್ತದೆ. ಕೆಟ್ಟದ್ದನ್ನು ಮರೆಯಬೇಕು. ಒಳ್ಳೆಯದನ್ನು ನೆನಪಿನಲ್ಲಿಟ್ಟು ಕೊಳ್ಳಬೇಕೆಂಬ ಪ್ರಜ್ಞೆ ಕೂಡ ಇರಬೇಕೆಂದು ಸಲಹೆ ನೀಡಿದರು.

ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಮಾತನಾಡಿ, ಸರ್ಕಾರಿ ನೌಕರರು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ನೌಕರರು ಚನ್ನಾಗಿದ್ದರೆ ಕಚೇರಿ ಚನ್ನಾಗಿರುತ್ತದೆ. ಸಾರ್ವಜನಿಕರಿಗೂ ಅನುಕೂಲಕರ ವಾತಾವರಣ ಒದಗಿಸಿದಂತಾಗುತ್ತದೆ ಎಂದರು.

ಪೋಷಕರು ಮಕ್ಕಳಿಗೆ ಆಸ್ತಿ ಮಾಡುವ ಬದಲು ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ ಎಂದು ಕಿವಿಮಾತು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಸಂಘದ ಜಿಲ್ಲಾಧ್ಯಕ್ಷ ವೀರೇಶ್ ಎಸ್.ಒಡೇನಪುರ ಮಾತನಾಡಿ, ಸಿ ಅಂಡ್ ಆರ್ ತಿದ್ದುಪಡಿ ಅಗತ್ಯವಿದೆ. ಸರ್ಕಾರಿ ನೌಕರರ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸುವ ಅವಶ್ಯವಿದೆ. ಜನಪ್ರತಿನಿಧಿಗಳು ಸಹ ನೌಕರರ ಪರ ನಿಲ್ಲುತ್ತಾರೆಂಬ ವಿಶ್ವಾಸ ನಮ್ಮದಾಗಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಮಾತನಾಡಿದರು.

ಸಂಘದ ರಾಜ್ಯ ಪದಾಧಿಕಾರಿಗಳಾದ ಶ್ರೀನಿವಾಸ ತಿಮ್ಮೇಗೌಡ, ಡಾ. ಎಸ್. ಸಿದ್ದರಾಮಣ್ಣ, ಮಲ್ಲಿಕಾರ್ಜುನ ಬಿ. ಬಳ್ಳಾರಿ, ಎಸ್. ಬಸವರಾಜು, ಜಿಲ್ಲಾ ಪದಾದಿಕಾರಿಗಳಾದ ಸಿ. ಗುರುಮೂರ್ತಿ, ಬಿ.ಆರ್. ತಿಪ್ಪೇಸ್ವಾಮಿ, ಬಿ.ಪಾಲಾಕ್ಷಿ, ಮಂಜಮ್ಮ ಶಿವಾನಂದ ದಳವಾಯಿ, ಸಿ. ಪರಶುರಾಮಪ್ಪ, ಸಿ.ಬಿ. ನಾಗರಾಜ್, ಎಂ.ಜೆ. ಶಶಿಧರ, ಎಸ್. ಸಂತೋಷ್, ಎಂ.ವಿ. ರವಿ, ವಿಜಯ ಮಹಾಂತೇಶ್, ಕೆ.ಎಂ. ಹೆಚ್. ಸ್ವಾಮಿ ಮತ್ತಿತರರು ಭಾಗವಹಿಸಿದ್ದರು.

ಇದೇ ವೇಳೆ ಸರ್ಕಾರಿ ನೌಕರರ ಮಕ್ಕಳು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಒಂದು ಸಾವಿರ ರೂ. ನಗದು ಹಾಗೂ ಪ್ರತಿಭಾ ಪುರಸ್ಕಾರ ನೀಡಲಾಯಿತು.

## ಸೆ. 2 ರವರೆಗೆ ಶ್ರಾವಣ ಮಾಸದ ಕಾರ್ಯಕ್ರಮ

ದಾವಣಗೆರೆ, ಆ. 28- ನಗರದ ಶಿಬಾರ ಶ್ರೀ ಮೈಲಾರ ಲಿಂಗೇಶ್ವರ ದೇವಸ್ಥಾನ ಟ್ರಸ್ಟ್ ವತಿಯಿಂದ ಶ್ರಾವಣ ಮಾಸದ ವಿಶೇಷ ಕಾರ್ಯಕ್ರಮಗಳು ನಡೆಯುತ್ತಲಿದ್ದು, ಸೆ. 2 ರಂದು 38 ನೇ ವರ್ಷದ ಶ್ರಾವಣ ಮಾಸದ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಮಲ್ಲೇಶ್ ಕಂಡ್ರಳ್ಳಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಆ. 5 ರಿಂದ ಪ್ರತಿ ನಿತ್ಯ ಬ್ರಾಹ್ಮೀ ಮುಹೂರ್ತದಲ್ಲಿ 4 ರಿಂದ 6 ರವರೆಗೆ ಶ್ರೀ ಸ್ವಾಮಿಯ ಮೂಲ ಮೂರ್ತಿಗೆ ಮತ್ತು 6 ಗಂಟೆಯಿಂದ ಉತ್ಸವ ಮೂರ್ತಿಗೆ ಅಭಿಷೇಕ ನಡೆಸುವುದರೊಂದಿಗೆ ಗಂಗಾದೇವಿ ಪೂಜೆ, ಬಿಲ್ವಾರ್ಚನೆ, ಅಷ್ಟೋತ್ತರ ಶ್ರಾವಣ ಮಾಸದ ಪೂಜೆಯನ್ನು ಏರ್ಪಡಿಸಲಾಗಿದೆ ಎಂದರು.

ಆ. 31 ರಂದು ಮಧ್ಯಾಹ್ನ 12.30 ಕ್ಕೆ ಶ್ರೀ ಸ್ವಾಮಿಗೆ ಹರಿಹರದ ತುಂಗಭದ್ರಾ ನದಿಯಲ್ಲಿ ಪ್ರಧಾನ ಅರ್ಚಕರಿಂದ ಹೊಳೆಪೂಜೆ, ಪಂಚಾಮೃತ ಅಭಿಷೇಕ, ಹೂವಿನ ಅಲಂಕಾರ, ನೈವೇದ್ಯ, ಮಹಾಮಂಗಳಾರತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಅಂದು ಸಂಜೆ 8.30 ರಿಂದ ಬೆಳಿಗ್ಗೆ 6 ರವರೆಗೆ ಶ್ರೀ ಶಿಬಾರ ಮೈಲಾರಲಿಂಗೇಶ್ವರ ಭಜನಾ ಸಂಘದಿಂದ ಅಖಂಡ ಭಜನಾ ಕಾರ್ಯಕ್ರಮ ನಡೆಯಲಿದೆ ಎಂದರು.

ಸೆ. 1 ರಂದು ಬೆಳಿಗ್ಗೆ 10.30 ರಿಂದ 11 ರವರೆಗೆ ನಗರದ ಪ್ರಮುಖ ರಾಜಬೀದಿಗಳಲ್ಲಿ ಮುತ್ತೈದೆಯರಿಂದ ಕುಂಭ ಮತ್ತು ಕಳಸದ ಆರತಿ, ಬಿರುದಾವಳಿ, ಚಾಮರ ಕರಡಿ, ಗೊರವರ ಕುಣಿತ ಮುಂತಾದ ವಾದ್ಯಗಳೊಂದಿಗೆ ಶ್ರೀ ಸ್ವಾಮಿಯ ಮೆರವಣಿಗೆ ನಡೆಯಲಿದ್ದು, ಶ್ರೀ ಮುರುಳೀಧರ ಸ್ವಾಮೀಜಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆಂದರು.

ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಮತ್ತಿತರರು ಭಾಗವಹಿಸಲಿದ್ದಾರೆಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಪದಾಧಿಕಾರಿಗಳಾದ ಜಯಣ್ಣ ಬಳ್ಳಾರಿ, ಗೋಪಾಲರಾವ್ ಸಾವಂತ್, ಪರಮೇಶ್ವರಪ್ಪ, ಜಗದೀಶ್, ಹೆಚ್.ಜೆ. ವೀರಣ್ಣ ಮತ್ತಿತರರು ಉಪಸ್ಥಿತರಿದ್ದರು.

## ನಗರಗಳಲ್ಲಿ ಎಫ್‌ಎಂ

**(1ನೇ ಪುಟದಿಂದ)** ಇರಲಿಲ್ಲ.

ಕೇಂದ್ರದ ತೀರ್ಮಾನದಿಂದಾಗಿ, ಇನ್ನೂ ಖಾಸಗಿ ಎಫ್‌ಎಂ ರೇಡಿಯೋ ಪ್ರಸಾರದಿಂದ ವಂಚಿತ ಪ್ರದೇಶಗಳಲ್ಲಿ ಮತ್ತು ಹೊಸ / ಸ್ಥಳೀಯ ವಿಷಯವನ್ನು ಮಾತೃಭಾಷೆಯಲ್ಲಿ ಪ್ರಸಾರ ಮಾಡುವ ಅವಕಾಶ ಲಭ್ಯವಾಗಲಿದೆ. ಇದು ಹೆಚ್ಚಿನ ಉದ್ಯೋಗ ಸೃಷ್ಟಿಗೆ ಕಾರಣವಾಗುತ್ತದೆ. ಸ್ಥಳೀಯ ಮಾತೃ/ ಆಡುಭಾಷೆ ಮತ್ತು ಸಂಸ್ಕೃತಿಗೆ ಉತ್ತೇಜನ ನೀಡುತ್ತದೆ. ದೇಶದಲ್ಲಿ ಎಫ್‌ಎಂ ವಾಹಿನಿಗಳ ವಿಸ್ತರಣೆಗೆ ನೆರವಾಗಲಿದೆ ಎಂದು ಮಾಹಿತಿ ಮತ್ತು ಪ್ರಸಾರ ಸಚಿವಾಲಯ ತಿಳಿಸಿದೆ.

ಬಾಗಲಕೋಟೆ (3 ಎಫ್‌ಎಂ ಚಾನೆಲ್‌ಗಳು), ಬೆಳಗಾವಿ (4), ಬಳ್ಳಾರಿ (4), ಬೀದರ್ (3), ವಿಜಯಪುರ (4), ಚಿಕ್ಕಮಗಳೂರು (3), ಚಿತ್ರದುರ್ಗ (3), ದಾವಣಗೆರೆ (4) ಗದಗ ಬೆಟಗೇರಿ (3), ಹಾಸನ (3), ಹೊಸಪೇಟೆ (3), ಕೋಲಾರ (3), ರಾಯಚೂರು (3), ಶಿವಮೊಗ್ಗ (4), ತುಮಕೂರು (3) ಮತ್ತು ಉಡುಪಿ (3) ಈ ನಗರಗಳು ಚಾನಲ್ ಹೊಂದಲಿವೆ.

## ನಗರದಲ್ಲಿಂದು ದತ್ತಿ ಕಾರ್ಯಕ್ರಮ, ಚಿಂತನ ಗೋಷ್ಠಿ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು (ಮೈಸೂರು), ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಹಾಗೂ ಜಿಲ್ಲಾ ಕದಳಿ ಮಹಿಳಾ ವೇದಿಕೆ ವತಿಯಿಂದ ಇಂದು ಬೆಳಿಗ್ಗೆ 10 ಗಂಟೆಗೆ ಡಿಆರ್‌ಎಂ ಸೈನ್ಸ್ ಪಿಯು ಕಾಲೇಜಿನಲ್ಲಿ ಪರಿಷತ್ತಿನ ಸಂಸ್ಥಾಪಕರ ದಿನಾಚರಣೆ, ಲಿಂ. ಸಣ್ಣಮ್ಮ ಮತ್ತು ಲಿಂ. ಸೊಕ್ಕೆ ಕಶೆಟ್ಟರ ದತ್ತಿ ಕಾರ್ಯಕ್ರಮ ಹಾಗೂ ಶರಣ ಚಿಂತನ ಗೋಷ್ಠಿ ನಡೆಯಲಿದೆ.

ಜಿಲ್ಲಾ ಕದಳಿ ಮಹಿಳಾ ವೇದಿಕೆ ಅಧ್ಯಕ್ಷರಾದ ಗಾಯತ್ರಿ ವಸ್ತ್ರದ್ ಕಾರ್ಯಕ್ರಮ ಉದ್ಘಾಟಿಸುವರು. ಡಿ.ಆರ್.ಎಂ. ಸೈನ್ಸ್ ಕಾಲೇಜಿನ ಪ್ರಾಚಾರ್ಯ ಜೆ. ಶಿವಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಶರಣರ ಜೀವನ ದೃಷ್ಟಿ ಕುರಿತು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಕಾರ್ಯಕಾರಿ ಸಮಿತಿ ಸದಸ್ಯ ಪ್ರೊ. ಡಾ.ಜೆ.ಕೆ. ಮಲ್ಲಿಕಾರ್ಜುನಪ್ಪ ಅನುಭಾವ ನುಡಿಗಳನ್ನಾಡುವರು. ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷಕೆ.ಬಿ. ಪರಮೇಶ್ವರಪ್ಪ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ.

## 12 ಕೈಗಾರಿಕಾ ಸ್ಥಾಪನೆಗೆ ಒಪ್ಪಿಗೆ

**(1ನೇ ಪುಟದಿಂದ)** ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ ಯೋಜನೆ (ಎನ್.ಐ.ಸಿ.ಡಿ.ಪಿ.) ಅನ್ವಯ ಈ ನಗರಗಳನ್ನು ಸ್ಥಾಪಿಸಲಾಗುವುದು. ಈ ನಗರಗಳ ಸ್ಥಾಪನೆಯಿಂದ 10 ಲಕ್ಷ ಜನರಿಗೆ ನೇರವಾಗಿ ಹಾಗೂ 30 ಲಕ್ಷ ಜನರಿಗೆ ಪರೋಕ್ಷವಾಗಿ ಉದ್ಯೋಗಗಳು ಸಿಗುವ ನಿರೀಕ್ಷೆ ಇದೆ. ಈ ಯೋಜನೆಯಿಂದ 1.52 ಲಕ್ಷ ಕೋಟಿ ರೂ.ಗಳ ಹೂಡಿಕೆ ದೊರೆಯುವ ನಿರೀಕ್ಷೆ ಇದೆ.

ರಾಜ್ಯಗಳು ಹಾಗೂ ಖಾಸಗಿ ಸಹಭಾಗಿತ್ವದಲ್ಲಿ 100 ನಗರಗಳಲ್ಲಿ ಕೈಗಾರಿಕಾ ಪಾರ್ಕ್ ಸ್ಥಾಪನೆ ಮಾಡಲಾಗುವುದು ಎಂದು ಕೇಂದ್ರ ಬಜೆಟ್‌ನಲ್ಲಿ ತಿಳಿಸಲಾಗಿತ್ತು.

ಈಗಾಗಲೇ 8 ನಗರಗಳಲ್ಲಿ ಇದೇ ರೀತಿಯ ಯೋಜನೆ ಜಾರಿಯಾಗುತ್ತಿದೆ. ಕೇಂದ್ರ ಸರ್ಕಾರದ ಘೋಷಣೆಯೊಂದಿಗೆ ಕೈಗಾರಿಕಾ ನಗರಗಳ ಸಂಖ್ಯೆ 20ಕ್ಕೆ ಏರಿಕೆಯಾದಂತಾಗಿದೆ.

## ಆನೆಕೊಂಡದ ಎಂ. ಕೃಷ್ಣಪ್ಪ ನಿಧನ



ದಾವಣಗೆರೆ ಸಿಟಿ ಬೇತೂರು ರಸ್ತೆ ಆನೆಕೊಂಡ ವಾಸಿಯಾದ ಯರಬಳ್ಳಿ ಮಂಜಪ್ಪನವರ ಕಿರಿಯ ಮಗನಾದ ನಿವೃತ್ತ ಶಿಕ್ಷಕರಾದ ಎಂ. ಕೃಷ್ಣಪ್ಪನವರು (84) ಇವರು ದಿನಾಂಕ : 28.8.2024ರ ಬುಧವಾರ ಸಂಜೆ 7.15ಕ್ಕೆ ದೈವಧೀನರಾಗಿರುತ್ತಾರೆ. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ದಿನಾಂಕ : 29.8.2024ರ ಗುರುವಾರ ಮಧ್ಯಾಹ್ನ 1 ಗಂಟೆಗೆ ಹರಿಹರ ರಸ್ತೆಯ ವೈಕುಂಠ ಧಾಮದಲ್ಲಿ ನೆರವೇರಿಸಲಾಗುವುದು.

## ಹರಿಹರ ; 12 ಲಕ್ಷ ರೂ. ತಾಮ್ರದ ತಂತಿ ಕಳ್ಳತನ : ಓಮ್ನಿ, 2 ಬೈಕ್‌ಗಳು ವಶ

ಹರಿಹರ, ಆ. 28 - ಪೈಪ್ಸ್ ಮತ್ತು ಸ್ಪಿಂಕ್ಲರ್ ತಯಾರಿಕಾ ಘಟಕದಲ್ಲಿ ತಾಮ್ರದ ತಂತಿ ಮತ್ತು ಎಲೆಕ್ಟ್ರಿಕಲ್ ಸಾಮಗ್ರಿಗಳನ್ನು ಕಳ್ಳತನ ಮಾಡಿದ ಆರೋಪಿತರಿಂದ 12 ಲಕ್ಷ ರೂ. ಮೌಲ್ಯದ ತಾಮ್ರದ ತಂತಿ ಮತ್ತು ಎಲೆಕ್ಟ್ರಿಕಲ್ ಸಾಮಗ್ರಿಗಳು ಹಾಗೂ ಓಮಿನಿ ಮತ್ತು 2 ಬೈಕ್‌ಗಳನ್ನು ಜಪ್ತಿ ಮಾಡಿ ಆರೋಪಿಯನ್ನು ಬಂಧಿಸಲಾಗಿದೆ ವೃತ್ತ ಪೊಲೀಸ್ ನಿರೀಕ್ಷಕ ಸುರೇಶ್ ಸರಗಿ ಹೇಳಿದರು.

ಗುತ್ತೂರು ಪೊಲೀಸ್ ಠಾಣೆಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಇದೇ ದಿನಾಂಕ 20ರಂದು ಹನಗವಾಡಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಇರುವ ಗ್ರೀನ್ ರಾಯಲ್ ಪೈಪ್ಸ್ ಮತ್ತು ಡ್ರಿಪ್ಸ್ ಹಾಗು ಸ್ಪಿಂಕ್ಲರ್ ತಯಾರಿಕಾ ಘಟಕದಲ್ಲಿ ಮಿಷನರಿಗೆ ಬಳಸಿದ್ದ ಪವರ್ ಸಪ್ಲೈ ಮತ್ತು ಕಾಪರ್ ಕೇಬಲ್ ಹಾಗೂ ಸಲಕರಣೆಗಳನ್ನು ಕಳ್ಳತನವಾದ ಬಗ್ಗೆ ಕೊಟ್ರೇಶ್ ನಾಯ್ಕ್ ಗುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಕಳ್ಳತನ ಮಾಡಿದ ಸೈಯದ್ ನೂರುದ್ದಿನ್, ಮಹಮ್ಮದ್ ಆಸೀಫ್, ಇರ್ಷಾದ್ ಎಂಬುವವರಗಳನ್ನು ಬಂಧಿಸಲಾಗಿದೆ ಎಂದು ಹೇಳಿದರು.

ಆರೋಪಿ ಸೈಯದ್ ನೂರುದ್ದೀನ್ ಈತನ ಮೇಲೆ ಹಾಲಿ ಹರಿಹರ ಗ್ರಾಮಾಂತರ ಠಾಣೆ ಸೇರಿದಂತೆ ಬೆಂಗಳೂರಿನ ಜಾಲಹಳ್ಳಿ ಪೊಲೀಸ್ ಠಾಣೆಯಲ್ಲಿ 2016 ರಲ್ಲಿ , ಹರಿಹರ ನಗರ ಠಾಣೆಯಲ್ಲಿ 2010 ರಲ್ಲಿ ದಾಖಲಾಗಿರುವ ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದು ಹಾಗೂ ಆರೋಪಿತ ಮೊಹ್ಮದ್ ಆಸೀಫ್ ಮೇಲೆ ಹಾಲಿ ಹರಿಹರ ಗ್ರಾಮಾಂತರ ಠಾಣೆಯಲ್ಲಿ ಸೇರಿದಂತೆ 2021 ರಲ್ಲಿ ಹರಿಹರ ನಗರ ಠಾಣೆ, 2022 ರಲ್ಲಿ ಬಸವಾಪಟ್ಟಣ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದಾನೆ.

## ಗುಜರಾತ್ : ಮಳೆ ಅವಘಡಗಳಲ್ಲಿ 19 ಸಾವು

ಅಹಮದಾಬಾದ್, ಆ. 29 - ಗುಜರಾತ್‌ನಲ್ಲಿ ಮಳೆ ಸಂಬಂಧದ ಘಟನೆಗಳಲ್ಲಿ 19 ಜನ ಸಾವನ್ನಪ್ಪಿದ್ದಾರೆ. ಕಳೆದ ಮೂರು ದಿನಗಳಲ್ಲಿ ಮಳೆ ಸಂಬಂಧದ ಅವಘಡಗಳಿಂದ 26 ಜನರು ಸಾವನ್ನಪ್ಪಿದ್ದಾರೆ. ಸತತ ನಾಲ್ಕು ದಿನಗಳಿಂದ ರಾಜ್ಯದಲ್ಲಿ ಧಾರಾಕಾರ ಮಳೆ ಸುರಿಯುತ್ತಿದೆ. 17,800 ಜನರನ್ನು ಸುರಕ್ಷಿತ ಸ್ಥಳಗಳಿಗೆ ರವಾನಿಸಲಾಗಿದೆ.

# ದಾವಣಗೆರೆ ಸಂಸದೆ ಡಾ. ಪ್ರಭಾಗೆ ನೋಟಿಸ್



ದಾವಣಗೆರೆ, ಆ.28- ಲೋಕಸಭಾ ಚುನಾವಣೆಯಲ್ಲಿ ಅಕ್ರಮ ನಡೆಸಿ ಆಯ್ಕೆಯಾಗಿ ದ್ದಾರೆಂದು ಆರೋಪಿಸಿ ಸಲ್ಲಿಸಿರುವ ತಕರಾರು ಅರ್ಜಿ ಸಂಬಂಧ ಹೈಕೋರ್ಟ್, ದಾವಣಗೆರೆ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್‌ಗೆ ನೋಟಿಸ್ ಜಾರಿಗೊಳಿಸಿದೆ.

ಡಾ. ಪ್ರಭಾ ಮಲ್ಲಿಕಾರ್ಜುನ್ ಆಯ್ಕೆ ಅಸಿಂಧುಗೊಳಿಸಬೇಕೆಂದು ಪರಾಜಿತ ಅಭ್ಯರ್ಥಿ ಜಿ.ಎಸ್. ಗಾಯತ್ರಿ ಸಿದ್ದೇಶ್ವರ್ ಹಾಗೂ ದಾವಣಗೆರೆಯ ಸುಭಾನ್ ಖಾನ್ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯು ನ್ಯಾಯಮೂರ್ತಿ ಎಂ.ಐ. ಅರುಣ್ ಅವರಿದ್ದ ಏಕ ಸದಸ್ಯ ಪೀಠದ ಮುಂದೆ ಮಂಗಳವಾರ ವಿಚಾರಣೆಗೆ ಬಂದಿದ್ದವು. ಕೆಲಕಾಲ ವಾದಲಿಸಿದ ನ್ಯಾಯಪೀಠ, ಪ್ರಭಾ ಮಲ್ಲಿಕಾರ್ಜುನ್ ಸೇರಿ ದಾವಣಗೆರೆ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದ ಅಭ್ಯರ್ಥಿಗಳು ಹಾಗೂ ಇತರೆ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿ, ಅರ್ಜಿ ಸಂಬಂಧ ಆಕ್ಷೇಪಣೆ ಸಲ್ಲಿಸಲು ಸೂಚಿಸಿ ವಿಚಾರಣೆಯನ್ನು ಸೆ. 19ಕ್ಕೆ ಮುಂದೂಡಿತು.

ಪ್ರಭಾ ಮಲ್ಲಿಕಾರ್ಜುನ್ ಗ್ಯಾರಂಟಿ ಕಾರ್ಡ್ ವಿತರಿಸಿ ಮತದಾರರಿಗೆ ಆಮಿಷವೊಡ್ಡಿರುವುದಲ್ಲದೇ, ಮಹಿಳೆಯರಿಗೆ 1 ಲಕ್ಷ ರೂ. ನೀಡುವುದಾಗಿ ಭರವಸೆ ನೀಡಿದ್ದರು.

ಇದು ಪ್ರಜಾಪ್ರತಿನಿಧಿ ಕಾಯ್ದೆಗೆ ವಿರುದ್ಧವಾಗಿದ್ದು, ಮತದಾರರಿಗೆ ಲಂಚದ ಆಮಿಷ ಒಡ್ಡಿದ್ದಾರೆ ಮತ್ತು ಚುನಾವಣಾ ಅಕ್ರಮಗಳನ್ನು ನಡೆಸಿ ಅವರು ಆಯ್ಕೆಯಾಗಿದ್ದಾರೆ. ಆದ್ದರಿಂದ ಅವರ ಆಯ್ಕೆ ಅಸಿಂಧುವೆಂದು ಘೋಷಿಸಲು ಅರ್ಜಿದಾರರು ಮನವಿ ಮಾಡಿದ್ದಾರೆ.

## ಐಟಿಐ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ ಆ.28 - ಐಟಿಐ ಪ್ರವೇಶಕ್ಕಾಗಿ ಆಫ್‌ಲೈನ್ ಮುಖಾಂತರ ಪ್ರವೇಶ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.

ಆಗಸ್ಟ್ 31 ಅರ್ಜಿ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಮಾಹಿತಿಗಾಗಿ ಆಯಾ ಸಂಸ್ಥೆಯ ಪ್ರಾಚಾರ್ಯರರನ್ನು ಸಂಪರ್ಕಿಸಬಹುದಾಗಿದೆ.

# ಸಿಎಂ ವಿರುದ್ಧ ಪ್ರಾಸಿಕ್ಯೂಷನ್ ಅನುಮತಿ : ಇಂದು ವಿಚಾರಣೆ

ಬೆಂಗಳೂರು, ಆ.28 - ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ತಮ್ಮ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದನ್ನು ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿರುವ ಅರ್ಜಿಯ ಮುಂದುವರೆದ ವಿಚಾರಣೆಯನ್ನು ಹೈಕೋರ್ಟ್ ಕೈಗೆತ್ತಿಕೊಳ್ಳಲಿದೆ.

ನ್ಯಾಯಾಲಯ ಯಾವ ತೀರ್ಪು ನೀಡಲಿದೆ ಎಂಬುದರ ಬಗ್ಗೆ ಇಡೀ ರಾಜ್ಯವೇ ತೀವ್ರ ಕುತೂಹಲದಿಂದ ನೋಡುತ್ತಿದೆ. ಅದರಲ್ಲೂ ಆಡಳಿತಾರೂಢ ಕಾಂಗ್ರೆಸ್ ನಲ್ಲಿ ಏನಾಗುತ್ತದೆಯೋ ಎಂಬ ಆತಂಕ ಕಾಡಿದೆ.

ತೀರ್ಪು ಮುಖ್ಯಮಂತ್ರಿ ವಿರುದ್ಧ ಬಂದರೆ ಅದನ್ನು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಸಿದ್ದರಾಮಯ್ಯ ಪರ ವಕೀಲರು ಸಿದ್ಧತೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.

ಮತ್ತೊಂದೆಡೆ ಕಾಂಗ್ರೆಸ್ ವರಿಷ್ಠರು ಪಕ್ಷದ ಸರ್ಕಾರವನ್ನು ಉಳಿಸಿಕೊಳ್ಳಲು ಒಂದೆಡೆ ಕಾನೂನು ಹೋರಾಟದ ಜೊತೆಗೆ ಪರ್ಯಾಯ ನಾಯಕತ್ವದ ಬಗ್ಗೆಯೂ ಕಸರತ್ತು ಆರಂಭಿಸಿದೆ.

ನ್ಯಾಯಾಲಯದ ಮುಂದುವರೆದ ವಿಚಾರಣೆಗೂ ಮುನ್ನವೇ ಎಐಸಿಸಿ ವರಿಷ್ಠರು ಮುಖ್ಯಮಂತ್ರಿ ಹಾಗೂ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರನ್ನು ಕರೆಸಿ ಸಮಾಲೋಚನೆ ಮಾಡಿದ್ದಾರೆ.

ನೀವು ನಡೆಸುವ ಕಾನೂನು ಹೋರಾಟಕ್ಕೆ ನಮ್ಮ ಬೆಂಬಲವಿದೆ ಎಂದು ಹೇಳಿದೆಯಾದರೂ ಸಂಕಷ್ಟ ಸ್ಥಿತಿ ಎದುರಾದರೆ ಸರ್ಕಾರವನ್ನು ಉಳಿಸಿಕೊಳ್ಳಲು ಪರ್ಯಾಯ ಮಾರ್ಗದ ಬಗ್ಗೆ ಯೋಚನೆ ಮಾಡಿದೆ. ಈ ಉದ್ದೇಶದಿಂದಲೇ ಗೃಹಸಚಿವ ಡಾ.ಜಿ.ಪರಮೇಶ್ವರ್ ಅವರನ್ನು ದೆಹಲಿಗೆ ಕರೆಸಿಕೊಂಡಿದ್ದ ವರಿಷ್ಠರು ಅವರೊಂದಿಗೆ ಪ್ರತ್ಯೇಕವಾಗಿ ಮಾತನಾಡಿದ್ದಾರೆ.

ದೆಹಲಿ ಭೇಟಿಯ ಬಗ್ಗೆ ಇಂದು ಸುದ್ದಿಗಾರರೊಂದಿಗೆ ಮಾಹಿತಿ ಹಂಚಿಕೊಂಡ ಪರಮೇಶ್ವರ್, ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಅವರು ಪ್ರತ್ಯೇಕವಾಗಿ ಹಲವು ವಿಚಾರಗಳ ಬಗ್ಗೆ ಮಾತನಾಡಿದ್ದಾರೆ. ಇದರಲ್ಲಿ



ಪಕ್ಷ ಸಂಘಟನೆ ವಿಚಾರವೂ ಪ್ರಸ್ತಾಪವಾಗಿದೆ ಎಂದು ಹೇಳಿದರು.

ರಾಜ್ಯಪಾಲರ ನಿರ್ಣಯದ ವಿರುದ್ಧ ವರಿಷ್ಠರು ಮುಖ್ಯಮಂತ್ರಿ ಪರ ನಿಂತಿದ್ದಾರೆ. ನಾನು ಕಾಂಗ್ರೆಸ್ ನ ಶಿಸ್ತಿನ ಸಿಪಾಯಿ. ಪಕ್ಷದಲ್ಲಿ ಯಾವುದೇ ಕೆಲಸ-ಕಾರ್ಯ ವಹಿಸಿದರೂ ಪ್ರಾಮಾಣಿಕವಾಗಿ ಮಾಡಿದ್ದೇನೆ. ಮುಂದೆಯೂ ಮಾಡುತ್ತೇನೆ ಎಂದು ಅವರು ತಿಳಿಸಿದ್ದಾರೆ.

ನಮ್ಮ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಮಾತನಾಡಿರುವ ಎಲ್ಲಾ ವಿಚಾರವನ್ನು ಬಹಿರಂಗವಾಗಿ ಹೇಳಲಾಗದು. ಅದು ಪಕ್ಷದ ಆಂತರಿಕ ವಿಚಾರ ಎಂದು ಹೇಳಿ ಮುನ್ನಡೆದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ತಮ್ಮ ಕುಟುಂಬಕ್ಕೆ 14 ನಿವೇಶನ ಪಡೆದಿರುವುದು ಅಧಿಕಾರ ದುರುಪಯೋಗ ಮತ್ತು ಭ್ರಷ್ಟಾಚಾರ ಕಾಯ್ದೆಯಡಿ ಮುಖ್ಯಮಂತ್ರಿ ವಿರುದ್ಧ ರಾಜ್ಯಪಾಲರು ನೀಡಿರುವ ಅಭಿಯೋಜನೆಯನ್ನು ಪ್ರಶ್ನಿಸಿರುವ ಅರ್ಜಿಯು ಹೈಕೋರ್ಟ್ ನ ಜನಪ್ರತಿನಿಧಿಗಳ ನ್ಯಾಯಾಲಯದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಮುಂದಿದೆ.

ಅರ್ಜಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನ ಹಿರಿಯ ವಕೀಲರ ಜೊತೆಗೆ ರಾಜ್ಯದ ಘಟಾನುಘಟಿ ನ್ಯಾಯವಾದಿಗಳು ಮುಖ್ಯಮಂತ್ರಿಗಳ ಪರ ಮತ್ತು ವಿರೋಧವಾಗಿ ವಾದ ಮಾಡಿದ್ದಾರೆ.

ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಪರವಾಗಿ ಸಾಲಿಸಿಟರ್ ಜನರ್ ತುಷಾರ್ ಮೆಹ್ತಾ ಅವರು ಇನ್ನೂ ವಾದ ಮಾಡಬೇಕಿದೆ.

ಮುಖ್ಯಮಂತ್ರಿ ಅವರ ಪರ ಸುಪ್ರೀಂ ಕೋರ್ಟಿನ ಹಿರಿಯ ವಕೀಲ ಅಭಿಷೇಕ್ ಮನುಸಿಂಘ್ವಿ ಅವರು ತಮ್ಮ ಪ್ರಾಸ್ತಾವಿಕ ವಾದ ಮಂಡಿಸಿದ್ದಾರೆ. ಇವರ ಜೊತೆಗೆ ಅರ್ಜಿದಾರರ ಪರವಾಗಿ ಮಾಜಿ ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವಡಗಿ, ಲಕ್ಷ್ಮಿ ಅಯ್ಯಂಗಾರ್, ರಂಗನಾಥರೆಡ್ಡಿ ಅವರು ವಾದ ಮಾಡಬೇಕಿದೆ.

ವಾದ ಮತ್ತು ಪ್ರತಿ ವಾದವು ನಾಳಿನ ವಿಚಾರಣೆ ಸಂದರ್ಭದಲ್ಲಿ ಮುಗಿದರೆ ನ್ಯಾಯಮೂರ್ತಿಗಳು ಅಂದೇ ತೀರ್ಪು ಪ್ರಕಟಿಸಲಿದ್ದಾರೆಯೇ ಎಂಬುದನ್ನು ಕಾದು ನೋಡಬೇಕಿದೆ. ಒಂದು ವೇಳೆ ವಾದ ಮತ್ತು ಪ್ರತಿವಾದಗಳು ಮುಗಿಯದಿದ್ದರೆ, ನ್ಯಾಯಮೂರ್ತಿಗಳು ಮತ್ತೆ ಮುಂದೂಡುವ ಸಾಧ್ಯತೆ ಇರುತ್ತದೆ.

ತೀರ್ಪು ಹೊರ ಬರುವ ಮುನ್ನವೇ ಪ್ರದೇಶ ಕಾಂಗ್ರೆಸ್ ತಮ್ಮ ಪಕ್ಷದ ಶಾಸಕರು, ಸಂಸದರು, ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ನೇತೃತ್ವದಲ್ಲಿ ಆ.31ಕ್ಕೆ ರಾಜಭವನ ಚಲೋ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.



# ಸೃಜನಶೀಲ ಸಾಹಿತ್ಯ ಕಲಿಕೆ ನಿರಂತರ: ಸೊರಟೂರ

ದಾವಣಗೆರೆ, ಆ.28 - ದಾವಣಗೆರೆ ವಿಶ್ವವಿದ್ಯಾನಿಲಯ ಕನ್ನಡ ಅಧ್ಯಯನ ವಿಭಾಗದ ವತಿಯಿಂದ ಸ್ವಾತಂತ್ರ್ಯೋತ್ಸವದ ಅಂಗವಾಗಿ ಬುಧವಾರ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಕ್ಯಾಂಪಸ್ ಕವಿಗೋಷ್ಠಿಯನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕವಿ, ಕಥೆಗಾರ ಸದಾಶಿವ ಸೊರಟೂರ ಅವರು ವಿದ್ಯಾರ್ಥಿಗಳೊಂದಿಗೆ ಕಾವ್ಯ ಸಂವಾದ ನಡೆಸಿ ಕೊಟ್ಟರು. ಕವಿಗೋಷ್ಠಿಯು ವಿದ್ಯಾರ್ಥಿಗಳಲ್ಲಿ ಸೃಜಶೀಲ ಸಾಹಿತ್ಯಿಕ ಮನೋಭಾವನೆಗಳನ್ನು ಬೆಳೆಸಲು ಮತ್ತು ಭಾಷಾ ಪ್ರೌಢಿಮೆಯನ್ನು ಹೆಚ್ಚಿಸಿಕೊಳ್ಳಲು ಸಹಕಾರಿಯಾಗುವುದು. ವಿದ್ಯಾರ್ಥಿಗಳಲ್ಲಿ ಓದುವ, ಬರೆಯುವ, ಕ್ರಿಯಾಶೀಲ ಮನಸ್ಥಿತಿಯನ್ನು ಬೆಳೆಸಲು ಪೂರಕವಾಗಿದೆ ಎಂದರು.

ವಿದ್ಯಾರ್ಥಿಗಳ ಕವನಗಳ ಶೈಲಿ, ಬದಲಾವಣೆಯ ಕುರಿತು ಸಲಹೆ ನೀಡಿದರು. ಕಾವ್ಯ, ಕಾವ್ಯಶೈಲಿ, ವಸ್ತು ಆಯ್ಕೆ, ಸ್ವರೂಪ, ವಾಚನದ ಲಯ ಮತ್ತಿತರೆ ಅಂಶಗಳ ಕುರಿತು ಸಲಹೆ ನೀಡಿದರು.

ಗೋಷ್ಠಿಯ ಅಧ್ಯಕ್ಷತೆಯನ್ನು, ವಿಭಾಗದ ಅಧ್ಯಕ್ಷ ಡಾ.ವಿ. ಜಯರಾಮಯ್ಯ ವಹಿಸಿದ್ದರು. ಸೃಜನಶೀಲ ಸಾಹಿತ್ಯ ರಚನೆಗೆ ಆದಿ-ಅಂತ್ಯ ಎಂಬುದಿಲ್ಲ. ಕಲಿಕೆ ನಿರಂತರವಾಗಿರುವುದರಿಂದ ವಿದ್ಯಾರ್ಥಿಗಳು ಪ್ರತಿ ದಿನವೂ ಹೊಸತನ್ನು ಕಲಿಯಲು ಆಸಕ್ತಿ ವಹಿಸಬೇಕು ಎಂದು ತಿಳಿಸಿದರು. ವಿದ್ಯಾರ್ಥಿಗಳು ಕವನ ವಾಚಿಸಿದರು. ಕಾರ್ಯಕ್ರಮದ ಸಂಯೋಜಕ ಡಾ. ಮಹಾಂತೇಶ ಪಾಟೀಲ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.

# ಸೆ. 14ರಂದು ರಾಷ್ಟ್ರೀಯ ಲೋಕ ಅದಾಲತ್

ದಾವಣಗೆರೆ, ಆ.28 - ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಸೆಪ್ಟೆಂಬರ್ 14 ರಂದು ರಾಷ್ಟ್ರೀಯ ಲೋಕ್ ಅದಾಲತ್ ಆಯೋಜಿಸಲಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರಣ್ಣವರ್ ತಿಳಿಸಿದ್ದಾರೆ.

ಅದಾಲತ್ ಮೂಲಕ ಅತಿ ಹೆಚ್ಚು ಪ್ರಕರಣಗಳನ್ನು ವಿಲೇವಾರಿ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಉದ್ದೇಶಿಸಲಾಗಿದೆ. ಇದರ ಅಂಗವಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಜಿಲ್ಲೆಯಲ್ಲಿರುವ ಎಲ್ಲಾ ನ್ಯಾಯಾಲಯಗಳ ವ್ಯಾಪ್ತಿಯಲ್ಲಿ ಲೋಕ್ ಅದಾಲತ್ತನ್ನು ಆಯೋಜಿಸಲಿವೆ. ಸಾರ್ವಜನಿಕರು ಅದಾಲತ್‌ನ ಸಂಪೂರ್ಣ ಸದುಪಯೋಗ ಪಡೆದುಕೊಳ್ಳಬೇಕು. ಈ ಅದಾಲತ್‌ನಲ್ಲಿ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಕಡಿಮೆ ಖರ್ಚಿನಲ್ಲಿ ಶೀಘ್ರವಾಗಿ ಪರಿಹರಿಸಿಕೊಳ್ಳಲು ಸಾರ್ವಜನಿಕರಿಗೆ ಅವಕಾಶ ನೀಡಲಾಗಿದೆ. ರಾಜಿಯಾಗಬಲ್ಲ ಎಲ್ಲಾ ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣಗಳು, ಮೋಟಾರ್ ವಾಹನ ಅಪಘಾತ ಪರಿಹಾರ ಪ್ರಕರಣಗಳು, ಚೆಕ್ ಅಮಾನ್ಯ ಪ್ರಕರಣಗಳು, ಭೂಸ್ವಾಧೀನ ಪರಿಹಾರ ಪ್ರಕರಣಗಳು, ಬ್ಯಾಂಕ್ ಸಾಲ ವಸೂಲಾತಿ ಪ್ರಕರಣಗಳು, ಎಂ.ಎಂ.ಡಿ.ಆರ್. ಕಾಯ್ದೆಯಡಿಯ ಪ್ರಕರಣಗಳನ್ನು ಪರಿಹರಿಸಿಕೊಳ್ಳಬಹುದು. ಕೌಟುಂಬಿಕ ನ್ಯಾಯಾಲಯದ ಪ್ರಕರಣಗಳು (ವಿಚ್ಛೇದನ ಹೊರತುಪಡಿಸಿ), ಪಿಂಚಣಿ ಪ್ರಕರಣಗಳು, ವೇತನ ಭತ್ಯೆ ಸಂಬಂಧಿಸಿದ ಪ್ರಕರಣಗಳು, ವಿದ್ಯುತ್ ಹಾಗೂ ನೀರಿನ ಶುಲ್ಕ, ಕೈಗಾರಿಕಾ ಕಾರ್ಮಿಕರ ವೇತನ, ಕಾರ್ಮಿಕ ವಿವಾದ ಇತ್ಯಾದಿ ಪ್ರಕರಣಗಳನ್ನು ಪರಸ್ಪರ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳ ಬಹುದು.

ಹೆಚ್ಚಿನ ಮಾಹಿತಿಗಾಗಿ ನಗರದ ಹಳೆಯ ನ್ಯಾಯಾಲಯ ಸಂಕೀರ್ಣದಲ್ಲಿರುವ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ದೂ.08192-296364, ತಾಲ್ಲೂಕು ಕಾನೂನು ಸೇವಾ ಸಮಿತಿಗಳಾದ ಹರಿಹರ ದೂ. 08192-296885, ಹೊನ್ನಾಳಿ ದೂ. 08188-251732, ಚನ್ನಗಿರಿ ದೂ. 08189-229195 ಮತ್ತು ಜಗಳೂರು ದೂ. 08196-227600 ಸಂಪರ್ಕಿಸುವಂತೆ ಅವರು ತಿಳಿಸಿದ್ದಾರೆ.

# ಕಡಬಗೇರಿಯ ಸರ್ಕಾರಿ ಶಾಲೆಗೆ ಸಮಗ್ರ ಪ್ರಶಸ್ತಿ



ಹರಪನಹಳ್ಳಿ, ಆ.28 - ತಾಲೂಕಿನ ಕಡಬಗೇರಿಯ ಹಿರಿಯ ಪ್ರಾಥಮಿಕ ಶಾಲೆಗೆ ಸಾಸ್ವೇಹಳ್ಳಿಯ ವಲಯ ಮಟ್ಟದ ಕ್ರೀಡಾ ಕೂಟದಲ್ಲಿ ಸಮಗ್ರ ಪ್ರಶಸ್ತಿ ಲಭಿಸಿದೆ. ಬಾಲಕಿಯರ ವಿಭಾಗದಲ್ಲಿ ಖೋಖೋ ಪ್ರಥಮ, ರಿಲೇ ಪ್ರಥಮ, ಕಬಡ್ಡಿ ಪ್ರಥಮ ಸ್ಥಾನ ಪಡೆದಿದ್ದಾರೆ. ಬಾಲಕರ ವಿಭಾಗದಲ್ಲಿಯೂ ಖೋಖೋ ಪ್ರಥಮ, ರಿಲೇ ಪ್ರಥಮ ಹಾಗೂ ಕೆಲ ಆಟೋಟಗಳಲ್ಲಿ ಕೂಡ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದಿದ್ದಾರೆ.

ವಿಜೇತ ವಿದ್ಯಾರ್ಥಿಗಳನ್ನು ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಎ.ಅಶೋಕ್, ಗ್ರಾಮ ಪಂಚಾಯತಿ ಅಧ್ಯಕ್ಷರು ಮತ್ತು ಸದಸ್ಯರು, ಪೋಷಕರು, ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರು ಮತ್ತು ಹಳೆಯ ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.

# ದಾವಣಗೆರೆ ಅರ್ಬನ್ ಬ್ಯಾಂಕ್‌ಗೆ ರಾಷ್ಟ್ರ ಪ್ರಶಸ್ತಿ



**(1ನೇ ಪುಟದಿಂದ)** ಪ್ರೋತ್ಸಾಹ ಕೊಡುವುದರೊಂದಿಗೆ ಸಮಾಜದ ಮುಖ್ಯವಾಹಿನಿಗೆ ಬರುವಂತಾಗುವ ನಿಟ್ಟಿನಲ್ಲಿ ಸಹಕಾರ ನೀಡುವುದರ ಜೊತೆಗೆ ಬ್ಯಾಂಕಿಗೂ ಶ್ರೇಯಸ್ಸು ಸಿಕ್ಕಂತಾಗಿದೆ ಎಂದು ಉಮಾಪತಿ ಅಭಿಪ್ರಾಯಪಟ್ಟರು.

ಸಾಲ ವಸೂಲಾತಿ ಕಾರ್ಯವನ್ನು ಯೋಜನಾ ಬದ್ಧವಾಗಿ ನಡೆಸಿದ್ದರಿಂದ ಅನುತ್ಪಾದಕ ಸಾಲಗಳ ಪ್ರಮಾಣವನ್ನು ಗಣನೀಯವಾಗಿ ಕಡಿಮೆ ಮಾಡಲು ಸಾಧ್ಯವಾಗಿದೆ. ಇದು, ಬ್ಯಾಂಕಿನ ಪ್ರಶಂಸಾರ್ಹ ಪ್ರಗತಿಗೆ ಕಾರಣವಾಗಿದೆ. ಕಟ್ಟುಬಾಕಿ ಪ್ರಮಾಣ ಶೇ. 0.89 ರಷ್ಟಿದ್ದು, ಬ್ಯಾಂಕು ಸತತವಾಗಿ ಶೇ. ಶೂನ್ಯ ನಿವ್ವಳ ಎನ್‌ಪಿಎ (ಅನುತ್ಪಾದಕ ಆಸ್ತಿ) ಹೊಂದಿ ರುವುದು ಬ್ಯಾಂಕಿನ ಮತ್ತೊಂದು ಸದೃಢತೆಯನ್ನು ಪ್ರತಿಬಿಂಬಿಸುತ್ತದೆ ಎಂದು ಹರ್ಷ ವ್ಯಕ್ತಪಡಿಸಿದರು.

13.55 ಕೋಟಿ ರೂ. ನಿವ್ವಳ ಲಾಭ ಗಳಿಸಿದ್ದು, ಆದಾಯ ತೆರಿಗೆ ಹಾಗೂ ಇತರೆ ಅವಕಾಶಗಳನ್ನು ಕಲ್ಪಿಸಿದ ನಂತರ 8.51 ಕೋಟಿ ರೂ. ನಿವ್ವಳ ಲಾಭ ಗಳಿಸಿದೆ ಎಂದು ವಿವರಿಸಿದ ಅವರು, ಬ್ಯಾಂಕಿನ ಸದಸ್ಯರಿಗೆ ಶೇ. 15ರಂತೆ ಲಾಭಾಂಶ ನೀಡಲು ಬ್ಯಾಂಕಿನ ಆಡಳಿತ ಮಂಡಳಿ ತೀರ್ಮಾನಿಸಿದೆ ಎಂದು ಸಭೆಯಲ್ಲಿ ಹಾಜರಿದ್ದ ಎಲ್ಲಾ ಷೇರುದಾರರ ಚಪ್ಪಾಳೆಗಳ ಮಧ್ಯೆ ಘೋಷಿಸಿದರು.

ಬ್ಯಾಂಕಿನ ಪ್ರಗತಿ ಕುರಿತಂತೆ ಸದಸ್ಯರು ಕೊಟ್ಟ ಸಲಹೆ-ಸೂಚನೆಗಳನ್ನು ಆಲಿಸಿದ ಉಮಾಪತಿ ಅವರು, ಕೆಲವರಿಂದ ಕೇಳಿ ಬಂದ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಿದರು.

**ಕೃತಜ್ಞತೆ :** ಬ್ಯಾಂಕಿನ ಉಪಾಧ್ಯಕ್ಷ ಟಿ.ಎಸ್. ಜಯರುದ್ರೇಶ್ ಮಾತನಾಡಿ, ಬ್ಯಾಂಕಿನ ಹಿತೈಷಿಗಳ ಶುಭಾಶೀರ್ವಾದ, ಷೇರುದಾರರ-ಗ್ರಾಹಕರ ಪ್ರೋತ್ಸಾಹ-ಸಹಕಾರ, ಆಡಳಿತ ಮಂಡಳಿಯವರ ಇಚ್ಛಾಶಕ್ತಿ, ಸಿಬ್ಬಂದಿ ವರ್ಗದವರ ಪರಿಶ್ರಮ-ಕಾಳಜಿಯಿಂದಾಗಿ ತಮ್ಮ ಬ್ಯಾಂಕ್ ಪ್ರಗತಿಯ ಮುಂಚೂಣಿಯಲ್ಲಿದೆ ಎಂದು ತಿಳಿಸಿದರಲ್ಲದೇ, ಸಹಕಾರ ನೀಡುತ್ತಿರುವ ಪ್ರತಿಯೊಬ್ಬರನ್ನೂ ಸ್ಮರಿಸಿ, ಕೃತಜ್ಞತೆ ಸಲ್ಲಿಸಿದರು.

**ವಿಷಯ ಮಂಡನೆ :** ಕಳೆದ ಸಾಲಿನ ಮಹಾಸಭೆ ಯಲ್ಲಿ ಕೈಗೊಂಡ ನಿರ್ಣಯಗಳನ್ನು ಹಿರಿಯ ನಿರ್ದೇಶಕ ಅಜ್ಜಂಪುರ ಶೆಟ್ರು ವಿಜಯ ಕುಮಾರ್ ಸಭೆಗೆ ತಿಳಿಸಿದರು. ಕಾರ್ಯನಿರ್ವಾಹಕ ಮಂಡಳಿಯು ತಯಾರಿಸಿದ ವಾರ್ಷಿಕ ವರದಿಯ ಮಾಹಿತಿಯನ್ನು ಲೆಕ್ಕ ಪರಿಶೋಧಕರೂ ಆಗಿರುವ ವೃತ್ತಿಪರ ನಿರ್ದೇಶಕ ಮುಂಡಾಸ್ ವೀರೇಂದ್ರ ವಿವರಿಸಿದರು. ನಿರ್ದೇಶಕ ಮಂಡಳಿಯು ನೂತನ ಸಾಲಿಗೆ ರೂಪಿಸಿದ ಕಾರ್ಯ ಚಟುವಟಿಕೆಗಳನ್ನು ನ್ಯಾಯವಾದಿಯೂ ಆಗಿರುವ ವೃತ್ತಿಪರ ನಿರ್ದೇಶಕ ಮಲ್ಲಿಕಾರ್ಜುನ ಕಣವಿ ಸಭೆಯ ಗಮನಕ್ಕೆ ತಂದರು.

ಇದೇ ಸಂದರ್ಭದಲ್ಲಿ ದಾವಣಗೆರೆ ಕೇಂದ್ರ ಸಹಕಾರ ಬ್ಯಾಂಕ್ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಬ್ಯಾಂಕಿನ ನಿಕಟಪೂರ್ವ ಅಧ್ಯಕ್ಷರೂ ಆಗಿರುವ ಹಿರಿಯ ನಿರ್ದೇಶಕ ಕೋಗುಂಡಿ ಬಕ್ಕೇಶಪ್ಪ ಅವರನ್ನು ಬ್ಯಾಂಕ್ ವತಿಯಿಂದ ಸನ್ಮಾನಿಸಿ, ಗೌರವಿಸಲಾಯಿತು.

ದೂಡಾ ಮಾಜಿ ಸದಸ್ಯ ಮೋತಿ ಟಿ. ಶಂಕ್ರಪ್ಪ ಮಾತನಾಡಿ, ಬ್ಯಾಂಕಿನ ಪ್ರಗತಿಯನ್ನು ಮೆಲುಕು ಹಾಕಿದರು. ಬಿ.ಹೆಚ್. ಪರಶುರಾಮಪ್ಪ, ವೀರಶೈವ ಸಮಾಜದ ಹಿರಿಯ ಮುಖಂಡ ಜೆ. ಸೋಮನಾಥ್, ಪಲ್ಲಾಗಟ್ಟೆ ವೀರಣ್ಣ, ಹಿರಿಯ ಪತ್ರಕರ್ತ ಬಕ್ಕೇಶ್ ನಾಗನೂರು, ಬಾದಾಮಿ ಮಲ್ಲಿಕಾರ್ಜುನ್, ಟಿ.ಎಂ. ಪರಮೇಶ್ವರಯ್ಯ, ಸಿದ್ದಲಿಂಗೇಶ್, ಮಾಗಿ ಜಯಪ್ರಕಾಶ್, ಎಂ. ಎನ್. ನಾಗರಾಜ್, ಅರುಣಾಚಲ ಶೆಟ್ಟಿ, ಕೋಗುಂಡಿ ಅಖಿಲೇಶ್, ಗುರುಶಾಂತೇಶ್ ವಿ. ಸೋಗಿ, ಲಿಂಗರಾಜ್, ಐನಳ್ಳಿ ನಿಧಿರಾಜ್, ಯಾಸೀನ್ ಪಿ. ರಜ್ವಿ ಮತ್ತಿತರರು ಸಲಹೆ-ಸೂಚನೆ ನೀಡಿದರಲ್ಲದೇ, ಹಲವಾರು ಪ್ರಶ್ನೆಗಳನ್ನು ಕೇಳಿದರು.

ನಿರ್ದೇಶಕರುಗಳಾದ ಅಂದನೂರು ಮುಪ್ಪಣ್ಣ, ಪಲ್ಲಾಗಟ್ಟೆ ಶಿವಾನಂದಪ್ಪ, ಕಂಚಿಕೇರಿ ಮಹೇಶ್, ವಿ. ವಿಕ್ರಮ್, ಶ್ರೀಮತಿ ಅರ್ಚನಾ ಡಾ. ಅಂದನೂರು ರುದ್ರಮುನಿ, ಸೋಗಿ ಮುರುಗೇಶ್ ಅವರುಗಳು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀಮತಿ ಎಂ. ಅನುಶ್ರೀ ಮತ್ತು ಶ್ರೀಮತಿ ತೇಜಸ್ವಿನಿ ಅವರಿಂದ ಪ್ರಾರ್ಥನೆಯ ನಂತರ ನಿರ್ದೇಶಕ ಹೆಚ್.ಎಂ. ರುದ್ರಮುನಿಸ್ವಾಮಿ ಸ್ವಾಗತಿಸಿದರು. ಹಿರಿಯ ನಿರ್ದೇಶಕ ಎಂ. ಚಂದ್ರಶೇಖರ್ ಅವರಿಂದ ವಂದನಾರ್ಪಣೆ, ನಿರ್ದೇಶಕ ಇ.ಎಂ. ಮಂಜುನಾಥ ಅವರಿಂದ ಕಾರ್ಯಕ್ರಮ ನಿರೂಪಣೆ ನಡೆಯಿತು.

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಬಿ.ಎಸ್. ಮಲ್ಲೇಶ್, ಉಪ ಪ್ರಧಾನ ವ್ಯವಸ್ಥಾಪಕ ಆರ್.ಎ. ಪ್ರಸನ್ನ ಅವರುಗಳು ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

ಬ್ಯಾಂಕಿನ ಪ್ರಧಾನ ಕಛೇರಿ ವ್ಯವಸ್ಥಾಪಕ ಕೆ.ಎಸ್. ಮಹೇಶ್, ಚೌಕಿಪೇಟೆ ಶಾಖೆ ವ್ಯವಸ್ಥಾಪಕ ಜಿ.ಕೆ. ವಿಜಯಕುಮಾರ್, ಎನ್. ಆರ್. ರಸ್ತೆ ಶಾಖೆ ವ್ಯವಸ್ಥಾಪಕ ಹೆಚ್.ವಿ. ರುದ್ರೇಶ್, ಪಿ.ಜೆ. ಬಡಾವಣೆ ಶಾಖಾ ವ್ಯವಸ್ಥಾಪಕರಾದ ಶ್ರೀಮತಿ ಎಲ್.ಎಸ್. ಗೀತಾ, ಡಿ. ದೇವರಾಜ ಅರಸು ಬಡಾವಣೆ ವ್ಯವಸ್ಥಾಪಕ ಸಾನಂದ ಗಣೇಶ್, ಹೊನ್ನಾಳಿ ಶಾಖೆ ಪ್ರಭಾರ ವ್ಯವಸ್ಥಾಪಕ ಹೆಚ್. ಕುಮಾರ್, ಆಡಳಿತ ಕಛೇರಿ ಡಿಬಿಎ ಬಿ.ಎಸ್. ಪ್ರಶಾಂತ್ ಅವರುಗಳು ಕಾರ್ಯಕ್ರಮದ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸಿದರು.

ಜಾನಪದ ಗಾಯಕರಾದ ದಾವಣಗೆರೆ ತಾಲ್ಲೂಕಿನ ಚಿನ್ನಸಮುದ್ರದ ಸಿ. ಉಮೇಶ್ ನಾಯಕ್ ಅವರು ಕಾರ್ಯಕ್ರಮದಲ್ಲಿ ಜಾನಪದ ಗೀತೆಗಳನ್ನು ಹಾಡಿ ಪ್ರೇಕ್ಷಕರನ್ನು ರಂಜಿಸಿದರು.

# ಹಬ್ಬಗಳಲ್ಲಿ ಸೌಹಾರ್ದತೆ ಇರಲಿ

**(1ನೇ ಪುಟದಿಂದ)** ರೋಡ್ ಬ್ಲಾಕ್ ಸಮಸ್ಯೆ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪೊಲೀಸ್ ಅಧೀಕ್ಷಕಿ ಉಮಾ ಪ್ರಶಾಂತ್ ಪ್ರಾಸ್ತಾವಿಕ ಮಾತನಾಡಿ, ಸಾರ್ವಜನಿಕ ಗಣಪತಿ ಕೂರಿಸಲು ಅನುಮತಿಗಾಗಿ ಏಕಗವಾಕ್ಷಿ (ಸಿಂಗಲ್ ವಿಂಡೋ) ಮಾದರಿ ತೆರೆಯಲಾಗಿದೆ. ಬಂಟಿಂಗ್ಸ್ ಹಾಗೂ ಬ್ಯಾನರ್ ಕಟ್ಟಲು ಎಲ್ಲರೂ ಕಡ್ಡಾಯವಾಗಿ ಪ್ರಾಧಿಕಾರ ಮತ್ತು ಪೊಲೀಸ್ ಇಲಾಖೆಯ ಅನುಮತಿ ಪಡೆಯಬೇಕು ಎಂದು ಹೇಳಿದರು. ಗಣೇಶ ಹಬ್ಬ ಹಾಗೂ ಈದ್ ಮಿಲಾದ್ ಜೊತೆಯಾಗಿ ಬಂದಿದ್ದರಿಂದ ಬಂಟಿಂಗ್ಸ್ ಕಟ್ಟುವ ವಿಚಾರದಲ್ಲಿ ಸೌಹಾರ್ದತೆ ಕಾಪಾಡಿಕೊಂಡು ಹಬ್ಬ ಆಚರಿಸುವಂತೆ ಹೇಳಿದರು.

ಗಣಪತಿ ಕೂರಿಸುವ ಆಯೋಜಕರು ಸೂಕ್ತ ಲೈಟಿಂಗ್ ವ್ಯವಸ್ಥೆಯ ಜತೆಗೆ ಸಿಸಿಟಿವಿ ಅಳವಡಿಸಿಕೊಳ್ಳಬೇಕು ಮತ್ತು ಅವರೇ ಸಂಪೂರ್ಣ ಜವಾಬ್ದಾರಿ ಹೊಂದಬೇಕು. ನ್ಯಾಯಾಲಯದ ಸೂಚನೆಯಂತೆ ಸೌಂಡ್ ಸಿಸ್ಟಮ್ ಬಳಕೆಯನ್ನು ನಿಗದಿತ ಸಮಯದೊಳಗೆ ಬಂದ್ ಮಾಡಬೇಕು. ಕೋಮು ಪ್ರಚೋದಿತ ಹಾಡು ಬಳಸದಂತೆ ತಿಳಿಸಿದರು.

ಪೊಲೀಸ್ ಇಲಾಖೆ ಹಾಕಿದ ಮೆರವಣಿಗೆ ರಸ್ತೆ ಮಾರ್ಗ ಪಾಲಿಸಬೇಕು. ಬದಲಾವಣೆಗಾಗಿ ಉಪವಿಭಾಗಾಧಿಕಾರಿಗಳನ್ನು ಸಂಪರ್ಕಿಸಬೇಕು ಎಂದರು.

ಹರಿಹರದಲ್ಲಿ ಈದ್ ಮಿಲಾದ್ ಹಾಗೂ ಗಣಪತಿ ಹಬ್ಬವನ್ನು ಶಾಂತಿಯುತವಾಗಿ ಆಚರಿಸಿಕೊಂಡು ಬಂದಿದ್ದೇವೆ ಎಂದು ಹರಿಹರದ ಮಹಮ್ಮದ್ ಫೈರೋಜ್ ಅನಿಸಿಕೆ ತಿಳಿಸಿದರು.

ರಾಷ್ಟ್ರ ಭಕ್ತಿಗಾಗಿ ಗಣೇಶೋತ್ಸವ ಆಚರಿಸೋಣ.

ಪರಿಸರದ ರಕ್ಷಣೆ ದೃಷ್ಟಿಯಿಂದ ಹರಿಹರದ ನದಿ ಬಳಿ ಗಣಪತಿ ವಿಸರ್ಜನೆಗೆ ದೊಡ್ಡ ಗುಂಡಿ ತೆರೆಸುವಂತೆ ಸತೀಶ್ ಪೂಜಾರ್ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದರು.

ಸಾಸ್ವಿಹಳ್ಳಿಯಲ್ಲಿ 13ನೇ ದಿನಕ್ಕೆ ಗಣಪತಿ ವಿಸರ್ಜನೆ ಮಾಡುತ್ತೇವೆ. ಇದಾದ ಬಳಿಕ ಮಿಲಾದ್ ಮೆರವಣಿಗೆ ನಡೆಯುತ್ತದೆ. ಯಾವ ಸಮಸ್ಯೆಯು ಇಲ್ಲದಂತೆ ಶಾಂತಿಯುತವಾಗಿ ಹಬ್ಬ ಮಾಡುತ್ತೇವೆ ಎಂದು ನರಸಿಂಹಪ್ಪ ಅನಿಸಿಕೆ ತಿಳಿಸಿದರು.

ಪ್ರತಿಯೊಂದು ಗಣಪತಿ ಮೆರವಣಿಗೆಗೂ ಪೊಲೀಸ್ ಇಲಾಖೆ ಬಿಗಿ ಬಂದೋಬಸ್ತ್ ನೀಡಬೇಕು. ನಗರದ ಬಸವರಾಜ ಪೇಟೆಯಲ್ಲಿ ಮೆರವಣಿಗೆಗೆ ಅವಕಾಶ ಕಲ್ಪಿಸಬೇಕೆಂದು ರಾಜನಹಳ್ಳಿ ಶಿವಕುಮಾರ್ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದರು.

ಗಾಂಜಾ, ಮದ್ಯಪಾನ ಸೇವಿಸಿ ಹಬ್ಬ ಮಾಡುವುದರಿಂದ ಅನಾಹುತ ಸಂಭವಿಸಲಿವೆ. ಹಾಗಾಗಿ ಅಂದು ಮಾದಕ ವಸ್ತು ಮಾರಾಟ ನಿಷೇಧ ಮಾಡುವಂತೆ ಸೈಯದ್ ರಿಯಾಜ್ ಅನಿಸಿಕೆ ಹಂಚಿಕೊಂಡರು. ಆವರಗೆರೆ ಉಮೇಶ್, ಹಳೇ ಬಾತಿ ಸಿದ್ದೇಶ್, ಜೊಳ್ಳಿಗುರು, ಸಿದ್ದೇಶ್, ಗೌಡ್ರ ಚನ್ನಬಸಪ್ಪ ಸೇರಿದಂತೆ ಇತರರು ಅನಿಸಿಕೆ ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್, ಉಪ ವಿಭಾಗಾಧಿಕಾರಿ ಸಂತೋಷ ಪಾಟೀಲ್, ಗ್ರಾಮಾಂತರ ಡಿವೈಎಸ್ಪಿ ಬಸವರಾಜ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ವಿಜಯ್‌ಕುಮಾರ್ ಎಂ. ಸಂತೋಷ್, ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಮಂಜುನಾಥ್, ಪೊಲೀಸ್ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಇದ್ದರು.

**ಮನೆಗಳಲ್ಲಿನ ಚಿಕ್ಕ ಗಣೇಶ ವಿಗ್ರಹಗಳನ್ನು ವಿಸರ್ಜಿಸಲು ಪ್ರಮುಖ ಸರ್ಕಲ್‌ಗಳಲ್ಲಿ 30 ಮೊಬೈಲ್ ಟ್ಯಾಂಕರ್‌ಗಳನ್ನು ಅಳವಡಿಸಲಾಗುವುದು. ದೊಡ್ಡ ಗಣೇಶ ವಿಗ್ರಹಗಳನ್ನು ವಿಸರ್ಜಿಸಲು ಶಿರಮಗೊಂಡನಹಳ್ಳಿಯಲ್ಲಿ ಟ್ಯಾಂಕರ್‌ಗಳನ್ನು ಅಳವಡಿಸಲಾಗಿದೆ. ಪಾಲಿಕೆ ಯಲ್ಲಿ ಮೂವರು ಅಧಿಕಾರಿಗಳನ್ನು ನೇಮಿಸಿ, ಗಣೇಶ ಮೂರ್ತಿ ಪ್ರತಿಷ್ಠಾಪಿಸಲು ಬೇಕಾದ ಎನ್.ಓ.ಸಿ ಕೊಡುವ ವ್ಯವಸ್ಥೆ ಮಾಡಲಾಗಿದೆ ಎಂದು ಪಾಲಿಕೆ ಆಯುಕ್ತೆ ರೇಣುಕಾ ತಿಳಿಸಿದರು.**

## ಗುಡುಗಿದ ಜಿಲ್ಲಾಧಿಕಾರಿ..!

**ಸಭೆಯಲ್ಲಿ ವ್ಯಕ್ತಿಯೋರ್ವ 'ಬನಾಯೆಂಗೆ ಮಂದಿರ್' ಹಾಡು ಬಳಸದಂತೆ ಮನವಿ ಮಾಡಿದಾಗ ಸಭೆಯಲ್ಲಿ ವಾಗ್ವಾದ ಶುರುವಾಯಿತು. ಈ ವೇಳೆ ಜಿಲ್ಲಾಧಿಕಾರಿಗಳು ಮಧ್ಯಪ್ರವೇಶಿಸಿ ಆ ವ್ಯಕ್ತಿಗೆ ಎಚ್ಚರಿಕೆ ನೀಡುವ ಮೂಲಕ ಸಭೆಯ ಶಾಂತಿ ಕಾಪಾಡಿದರು.**

**ಸಾಮಾಜಿಕ ಜಾಲತಾಣಗಳಲ್ಲಿ ಕೋಮು ಪ್ರಚೋದಿತ ಪೋಸ್ಟ್ ಹಾಕಬಾರದು. ಸಮಾಜದ ಶಾಂತಿ ಕದಡಿ ಕಾನೂನು ಕೈಗೆತ್ತಿಕೊಳ್ಳುವವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು.**

**- ಎಸ್ಪಿ ಉಮಾ ಪ್ರಶಾಂತ್**


## ಖಾಲಿ ನಿವೇಶನ ಸ್ವಚ್ಛಗೊಳಿಸದಿದ್ದರೆ ದಂಡ

ದಾವಣಗೆರೆ, ಆ.28- ಜಿಲ್ಲೆಯಲ್ಲಿ ಡೆಂಗ್ಯೂ ನಿಯಂತ್ರಣಕ್ಕಾಗಿ ಮಹಾನಗರ ಪಾಲಿಕೆಯು ಖಾಲಿ ನಿವೇಶನಗಳ ಹಾಗೂ ನಿರ್ಮಾಣ ಹಂತದಲ್ಲಿರುವ ಕಟ್ಟಡ ಮಾಲೀಕರಿಗೆ ತಮ್ಮ ಆಸ್ತಿ ಸ್ವತ್ತುಗಳಲ್ಲಿ ನೀರು ನಿಲ್ಲದಂತೆ ಮತ್ತು ಸೊಳ್ಳೆ ಉತ್ಪತ್ತಿಯಾಗದಂತೆ ಸ್ವಚ್ಛವಾಗಿಟ್ಟುಕೊಳ್ಳಲು ಎಚ್ಚರಿಕೆ ನೀಡಿದೆ. ಸ್ವತ್ತುಗಳನ್ನು ಸ್ವಚ್ಛವಾಗಿರಿಸಿಕೊಳ್ಳಲು ಪಾಲಿ ಕೆಯು 7ದಿನಗಳ ಗಡುವು ನೀಡಿದ್ದು, ಒಂದು ವೇಳೆ ಖಾಲಿ ನಿವೇಶನ ಹಾಗೂ ಕಟ್ಟಡ ನಿರ್ಮಾ ಣದ ನಿವೇಶನಗಳಲ್ಲಿ ನೀರು ನಿಂತು ಸೊಳ್ಳೆಯ ಲಾರ್ವಾ ಕಂಡುಬಂದಲ್ಲಿ ಪಾಲಿಕೆ ಅಧಿನಿಯಮ 1976ರ ಸೆಕ್ಷನ್ 328 ಹಾಗೂ 333ರ ಉಲ್ಲಂಘನೆಗಾಗಿ ದಂಡ ವಿಧಿಸುವುದರೊಂದಿಗೆ ಪಾಲಿಕೆಯಿಂದ ನಿವೇಶನ ಸ್ವಚ್ಛಗೊಳಿಸಲು ಕ್ರಮವ ಹಿಸಿ, ಅದಕ್ಕೆ ತಗಲುವ ವೆಚ್ಚವನ್ನು ಆಸ್ತಿ ತೆರಿಗೆ ಬಾಕಿ ರೂಪದಲ್ಲಿ ವಸೂಲು ಮಾಡಲು ಕ್ರಮ ವಹಿಸಲಿದ್ದೇವೆ ಎಂದು ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

## ಪರೀಕ್ಷೆ ತರಬೇತಿಗೆ ಅರ್ಜಿ

ದಾವಣಗೆರೆ, ಆ. 28- ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ಐಎಎಸ್, ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ ನೀಡಲು ಅರ್ಜಿ ಸಲ್ಲಿಸುವ ಅವಧಿಯನ್ನುನಾಡಿದ್ದು ದಿನಾಂಕ 31ರವರೆಗೆ ವಿಸ್ತರಿಸಲಾಗಿದೆ.

ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ
Numero Astrologer & palmistry



ವಂಶಪಾರಂಪರಿಕ ಮಾಂತ್ರಿಕ ಜ್ಯೋತಿಷ್ಯರು, ವಶೀಕರಣ ಸ್ಪೆಷಾಲಿಸ್ಟ್. ನೀವು ಇಷ್ಟಪಟ್ಟವರು ನಿಮ್ಮಂತಾಗಲು
ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಕುಜ ದೋಷ ಮತ್ತು ನಾಗ ದೋಷ, ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಮಾನಸಿಕ ಚಿಂತೆ, ಹೋಮ ಹವನದಿಂದ
ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 11 ದಿನದೊಳಗೆ ಪರಿಹಾರ ಮಾಡುತ್ತಾರೆ. ಇಂದೇ ಬೇಟಿ ನೀಡಿ.
ಮನೆ ವಿಳಾಸ : ಪಂಡಿತ್. ಜಿ.ವಿ. ಭಟ್ಟರ್
ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತ, ಹದಡಿ ರಸ್ತೆ, ದಾವಣಗೆರೆ
ಮೊ : 89716 99826, 99644 84508

## ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

**ಎಫ್.ಡಿ.ಪಿ. ಸಂಖ್ಯೆ : 3/2024**

ಅರ್ಜಿದಾರರು : ಶ್ರೀ ಡಾ|| ಹೆಚ್.ಎಂ. ಮಾಲತೇಶ್ ಮತ್ತು ಇತರರು ವಿರುದ್ಧ /-
ಎದುರುದಾರರು : 1) ಶ್ರೀಮತಿ ರಂಗಮ್ಮ ಮತ್ತು ಇತರರು 2) ಶ್ರೀಮತಿ ಹೆಚ್.ಎಂ. ದ್ರಾಕ್ಷಾಯಣಿ ಕೋಂ. ಲಿಂಗರಾಜ್, ವಯಸ್ಸು : 45 ವರ್ಷ, ವಾಸ : ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಎದುರು, ಹದಡಿ ಗ್ರಾಮ, ದಾವಣಗೆರೆ ತಾಲ್ಲೂಕು.

**ಆದೇಶ 5 ನಿಯಮ 20ರ ವ್ಯವಹಾರ ಪ್ರಕ್ರಿಯಾ ಸಂಹಿತೆ ಪ್ರಕಾರ 2ನೇ ಎದುರುದಾರರಿಗೆ ಕೋರ್ಟ್ ನೋಟಿಸ್**

ಈ ಮೇಲ್ಕಂಡ ದಾವೆಯನ್ನು ಅರ್ಜಿದಾರರು ಅಂತಿಮ ಡಿಕ್ರಿಯನ್ನು ಕೋರಿ ನಿಮ್ಮಗಳ ವಿರುದ್ಧ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಯಲ್ಲಿ ನಿಮ್ಮ ಹಾಜರಾತಿಗಾಗಿ ಘನ ನ್ಯಾಯಾಲಯವು ದಿನಾಂಕ : 9.10.2024 ರಂದು ಮುದ್ದತ್ತು ನಿಗದಿಪಡಿಸಿರುತ್ತದೆ. ಆದ್ದರಿಂದ ಸದರಿ ತಾರೀಖಿನಂದು ನೀವು ಖುದ್ದಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಬೆಳಿಗ್ಗೆ 11.00 ಗಂಟೆಗೆ ಹಾಜರಾಗಿ ನಿಮ್ಮ ತಕರಾರು ಇದ್ದರೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಮೇಲ್ಕಂಡ ಅರ್ಜಿಯನ್ನು ನಿಮ್ಮ ವಿರುದ್ಧ ಏಕಪಕ್ಷೀಯವಾಗಿ ತೀರ್ಮಾನ ಮಾಡಲಾಗುವುದು.

ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯೊಂದಿಗೆ ದಿನಾಂಕ : 27.08.2024 ರಂದು ನೀಡಲಾಗಿದೆ.

**ಸಹಿ /- ಅರ್ಜಿದಾರರ ಪರ ವಕೀಲರು, (ಎ.ಎಂ. ಹೆಗಡೆ)
ದಿನಾಂಕ : 22.8.2024**

**ನ್ಯಾಯಾಲಯದ ಆದೇಶದ ಮೇರೆಗೆ
ಸಹಿ /- ಶಿರಸ್ತೇದಾರರು**

# ಆಟೋಮೊಬೈಲ್ ಕ್ಷೇತ್ರದ ಕ್ರಾಂತಿಪುರುಷ ಗುರುಸಿದ್ದಯ್ಯ



ಕರ್ನಾಟಕದ ಕೇಂದ್ರ ಬಿಂದು ದಾವಣಗೆರೆ ನಗರವು ಒಂದು ಕಾಲದಲ್ಲಿ "ಕರ್ನಾಟಕದ ಮ್ಯಾಂಚೆಸ್ಟರ್" ಎಂಬ ಹೆಸರಿಗೆ ಪಾತ್ರವಾಗಿತ್ತು. ಹತ್ತಾರು ಹತ್ತಿಗಿ ರಣಿಗಳಿದ್ದು, ಹತ್ತಾರು ಸಾವಿರ ಜನ ಕಾರ್ಮಿಕರು ದುಡಿಯುತ್ತಿದ್ದ ಕಾಲವೂ ಇತ್ತು. ಕಾರಣಾಂತರಗಳಿಂದ ಒಂದೊಂದಾಗಿ ಹತ್ತಿ ಗಿರಣಿಗಳು ಸ್ಥಗಿತಗೊಂಡು, ಕಾರ್ಮಿಕರು ಬೀದಿ ಪಾಲಾದ ಕಥೆ - ವ್ಯಥೆ ತಂದಿತು.

ಇಂತಹ ಸಂದರ್ಭದಲ್ಲಿ ಕೈಗಾರಿಕಾ ನಗರವನ್ನು ಶೈಕ್ಷಣಿಕ ನಗರಿಯನ್ನಾಗಿ ಮಾಡಿದ ಕೀರ್ತಿ ಬಾಪೂಜಿ ವಿದ್ಯಾಸಂಸ್ಥೆಗೆ ಸೇರುತ್ತದೆ. ಲಕ್ಷಾಂತರ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಪಡೆದು ದೇಶ - ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ . ಕೈಗಾರಿಕಾ ಕ್ಷೇತ್ರದಲ್ಲಿ ದಾವಣಗೆರೆ ಹಿನ್ನಡೆ ಕಂಡರೂ ಆಟೋಮೊಬೈಲ್ ಕ್ಷೇತ್ರದಲ್ಲಿ ದೊಡ್ಡ ಸಾಧನೆಯಾಗಿದೆ, ದಾವಣಗೆರೆಯಲ್ಲಿ ಆಟೋಮೊಬೈಲ್ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ಕೀರ್ತಿ ಮಲ್ಲಿಕಾರ್ಜುನ ಮೋಟಾರ್ಸ್ ಮಾಲೀಕರಾದ ಎನ್.ಜೆ. ಗುರುಸಿದ್ದಯ್ಯ ಅವರಿಗೆ ಸಲ್ಲುತ್ತದೆ.

ಗುರುಸಿದ್ದಯ್ಯನವರು 1972ರಲ್ಲಿ ನಗರದ ಹಳೆಯ ಪ್ರವಾಸಿ ಮಂದಿರ ರಸ್ತೆಯಲ್ಲಿ ಸಣ್ಣ ಗ್ಯಾರೇಜ್ ಆರಂಭಿಸಿ, ದಿನದಿಂದ ದಿನಕ್ಕೆ ಬೆಳವಣಿಗೆ ಕಾಣುತ್ತಾ ಮಲ್ಲಿಕಾರ್ಜುನ ಮೋಟಾರ್ಸ್ ಸಂಸ್ಥೆ ಪ್ರಾರಂಭಿಸಿ ದ್ವಿಚಕ್ರ , ತ್ರಿಚಕ್ರ ಮತ್ತು ನಾಲ್ಕು ಚಕ್ರಗಳ ವಾಹನಗಳ ಮಾರಾಟದಲ್ಲಿ ಐತಿಹಾಸಿಕ ದಾಖಲೆಯನ್ನೇ ಮಾಡಿದ ವ್ಯಕ್ತಿಯಾದರು. ತುಂಬು ಜೀವನವನ್ನು ನಡೆಸಿ ತಮ್ಮ 80ನೇ ವರ್ಷದಲ್ಲಿ ( ದಿನಾಂಕ 21- 08 - 2024 ರಂದು ) ಇಹಲೋಕವನ್ನು ತ್ಯಜಿಸಿದರು, ಇಂದು ಅವರು ಜೀವಂತವಾಗಿ

ಇಲ್ಲದಿದ್ದರೂ, ಅವರು ಬೆಳೆಸಿದ ಸಂಸ್ಥೆಗಳು, ಮಾಡಿದ ಸಾಧನೆ ನಮ್ಮ ಕಣ್ಮುಂದೆ ಇದ್ದು, ಅವರ ಹೆಸರನ್ನು ಹೇಳುತ್ತೇವೆ .

ಹಿರಿಯ ಸಹಕಾರೀ ಧುರೀಣರೂ, ಸಹಕಾರ ರತ್ನ ಪ್ರಶಸ್ತಿ ವಿಜೇತರು, ದಾವಣಗೆರೆ - ಹರಿಹರ ಅರ್ಬನ್ ಸಹಕಾರಿ ಬ್ಯಾಂಕ್ ಮಾಜಿ ಅಧ್ಯಕ್ಷರಾದ ದಿ. ಎನ್.ಎಂ. ಜೆ.ಬಿ. ಆರಾಧ್ಯ ಅವರ ಸಹೋದರ ಎನ್.ಜೆ. ಗುರುಸಿದ್ದಯ್ಯ ಅವರು ದಾವಣಗೆರೆ ತಾಲ್ಲೂಕಿನ ನರಗನಹಳ್ಳಿಯಲ್ಲಿ ದಿನಾಂಕ 7 - 06 - 1944ರಲ್ಲಿ ಜಯದೇವಯ್ಯ - ಶಿವಲಿಂಗಮ್ಮ ದಂಪತಿಯ ಪುತ್ರರಾಗಿ ಜನಿಸಿದರು. ದಾವಣಗೆರೆಯ ಕೆಟಿಜೆ ನಗರದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ತಮ್ಮ ವಿದ್ಯಾಭ್ಯಾಸ ಮುಗಿಸಿ, ಡಿ ಇ ಎ ಶಾಲೆಯಲ್ಲಿ ಮಾಧ್ಯಮಿಕ ಶಿಕ್ಷಣ ಪೂರೈಸಿ, ಮುನಿಸಿಪಲ್ ಹೈಸ್ಕೂಲ್ ನಲ್ಲಿ ಓದಿ, ಮುಂದೆ ಧರಾಮ ಕಾಲೇಜಿನಲ್ಲಿ ಪದವಿ ಪೂರ್ವ ಕಾಲೇಜಿನಲ್ಲಿ ಶಿಕ್ಷಣ ಮುಗಿಸಿ, ಬೆಂಗಳೂರಿನ ಇಂಡಸ್ಟ್ರಿಯಲ್ ಕೋ - ಆಪರೇಟಿವ್ ಕಾಲೇಜಿನಲ್ಲಿ ಡಿಪ್ಲೋಮ ಪಡೆದರು.

ದಿನಾಂಕ 25 - 08 - 1969 ರಂದು ಗುರುಸಿದ್ದಯ್ಯನವರು ಶಕುಂತಲ ಅವರನ್ನು ಮದುವೆಯಾದರು. ಕೈಗಾರಿಕೋದ್ಯಮಿ ಯಾಗಿ ಹೆಸರು ಮಾಡಿದ ಗುರುಸಿದ್ದಯ್ಯನವರು ಶ್ರೀ ಮಲ್ಲಿಕಾರ್ಜುನ ಸಮೂಹ ಸಂಸ್ಥೆಯ ಸಂಸ್ಥಾಪಕರಾಗಿ, ಶ್ರೀ ಮಲ್ಲಿಕಾರ್ಜುನ ಮೋಟಾರ್ ಅಂಡ್ ಸ್ಕೂಟರ್ ಮಾರ್ಟ್, ಶ್ರೀ ಮಲ್ಲಿಕಾರ್ಜುನ ಟೆಂಪೋ ಸೇಲ್ಸ್ ಅಂಡ್ ಸರ್ವೀಸ್, ಚಂದ್ರು ಟ್ರಾನ್ಸ್ ಪೋರ್ಟ್ಸ್ ಮತ್ತು ಗುರು ಮೋಟಾರ್ಸ್ ಅಧ್ಯಕ್ಷರಾಗಿ ದಕ್ಷತೆಯಿಂದ ಮುನ್ನಡೆಸಿದರು. ಆಟೋಮೊಬೈಲ್ ಕ್ಷೇತ್ರದಲ್ಲಿ ತಮ್ಮ ಚಾಣಾಕ್ಷತೆ, ಶಿಸ್ತು, ಪ್ರಾಮಾಣಿಕತೆ, ಬದ್ಧತೆ, ನಿಷ್ಠೆ, ಪರಿಶ್ರಮದಿಂದ ಹೆಸರು ಗಳಿಸಿ ಜನಮೆಚ್ಚುಗೆ ಗಳಿಸಿದರು. ಅವರು ದೇಶದ ಹೆಸರಾಂತ ಕಂಪನಿಗಳಾದ ಆಟೋಮೊಬೈಲ್ ಪ್ರಾಡಕ್ಟ್ ಆಫ್ ಇಂಡಿಯಾ (ಮುಂಬೈ), ಕೈನೆಟಿಕ್ ಇಂಜಿನಿಯರಿಂಗ್ ಲಿಮಿಟೆಡ್ ಕಂಪನಿ (ಪೂನಾ), ಬಜಾಜ್ ಆಟೋ ಲಿಮಿಟೆಡ್ (ಮುಂಬೈ), ಮಹೇಂದ್ರ ಮತ್ತು ಮಹೇಂದ್ರ ದ್ವಿಚಕ್ರ ವಾಹನಗಳ ಕಂಪನಿ (ಮುಂಬೈ) ಮುಂತಾದ ಕಂಪನಿಗಳ ಡೀಲರ್ಸ್‌ಶಿಪ್ ಪಡೆದಿದ್ದರು.

ಗುರುಸಿದ್ದಯ್ಯನವರು ಕೇವಲ ತಮ್ಮ ವ್ಯವಹಾರಕ್ಕಷ್ಟೇ ಸೀಮಿತವಾಗದೆ ಬಹುಮುಖ ವ್ಯಕ್ತಿತ್ವವನ್ನೂ ಹೊಂದಿದ್ದರು. ಸಹಕಾರ, ಶಿಕ್ಷಣ, ಸಮಾಜಸೇವೆ ಮುಂತಾದ ರಂಗಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಸಿಟಿ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷರಾಗಿ, ದಾವಣಗೆರೆ ಆಟೋಮೊಬೈಲ್ ಡೀಲರ್ಸ್ ಸಂಘ, ಶ್ರೀ ಮಲ್ಲಿಕಾರ್ಜುನ ಎಜುಕೇಷನ್ ಟ್ರಸ್ಟ್ ಅಧ್ಯಕ್ಷರಾಗಿ, ದಾವಣಗೆರೆ ಜಿಲ್ಲಾ ಐಟಿಐ ಕಾಲೇಜುಗಳ ಸಮೂಹದ ನಾಮನಿರ್ದೇಶಕರಾಗಿ, ರೋಟರಿ ಕ್ಲಬ್ ನಿರ್ದೇಶಕರಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ಅವರು ಸಮಾಜಕ್ಕೆ ಸಲ್ಲಿಸಿರುವ ಸೇವೆಯನ್ನು ಗುರುತಿಸಿ, ಶ್ರೀ ರಂಭಾಪುರಿ ಜಗದ್ಗುರುಗಳಿಂದ 'ಗುರುಸೇವಾರತ್ನ' ಪ್ರಶಸ್ತಿಯನ್ನು ಪಡೆದಿದ್ದಾರೆ. ಭಾರತದಾದ್ಯಂತ ಅತ್ಯಂತ ಅಧಿಕ ಲೂನಾ ಮೊಪೆಡ್ಸ್ ವಾಹನಗಳನ್ನು ಮಾರಾಟ ಮಾಡಿದ್ದಕ್ಕಾಗಿ ಆಲ್ ಇಂಡಿಯಾ ನಂ. 1 ಡೀಲರ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡು, ಈ ಕಾರಣಕ್ಕಾಗಿ ಅಮೇರಿಕಾ ಪ್ರವಾಸವನ್ನೂ ಮಾಡಿದ್ದಾರೆ. ಇದೇ ರೀತಿ ಅನೇಕ ಕಂಪನಿಗಳಿಂದ ಪ್ರಶಸ್ತಿಗಳನ್ನು ಪಡೆದು, ಪತ್ನಿ ಸಮೇತರಾಗಿ ಜರ್ಮನಿ, ಅಮೇರಿಕಾ, ಸಿಂಗಾಪುರ, ಹಾಂಕಾಂಗ್, ಮೆಕಾವ್, ಆಸ್ಟ್ರೇಲಿಯಾ, ಯುರೋಪ್ ಪ್ರವಾಸ ಕೈಗೊಂಡಿದ್ದಾರೆ. ಕರ್ನಾಟಕ ಸರ್ಕಾರದ ವಾಣಿಜ್ಯ ಇಲಾಖೆಯಿಂದ ಪ್ರಾಮಾಣಿಕ 'ಕರದಾತ' ಪ್ರಶಸ್ತಿ ಪಡೆದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಒಬ್ಬ ಯಶಸ್ವೀ ಪುರುಷನ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ ಎಂಬಂತೆ ಗುರುಸಿದ್ದಯ್ಯನವರ ಸಾಧನೆಗೆ ಅವರ ಧರ್ಮಪತ್ನಿ ಶ್ರೀಮತಿ ಶಕುಂತಲ ಅವರದು ಸಿಂಹಪಾಲು ಎಂದರೆ ಅತಿಶಯೋಕ್ತಿಯಾಗಲಾರದು. ಮನೆಗೆದ್ದು ಮಾರುಗೆಲ್ಲು ಎಂಬಂತೆ ಮನೆಯ ಜವಾಬ್ದಾರಿಯ ಜೊತೆಗೆ ಪತಿ ಮತ್ತು ಮಕ್ಕಳ ಶ್ರೇಯೋಭಿವೃದ್ಧಿಗಾಗಿ ದುಡಿದಿದ್ದಾರೆ. ಬಾಪೂಜಿ ವಿದ್ಯಾ ಸಂಸ್ಥೆಗೆ ಸೇರಿದ ಅವರು ಕಾಲೇಜು ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಅತ್ಯುತ್ತಮವಾದ ಸೇವೆ ಸಲ್ಲಿಸಿ ನಿವೃತ್ತಿಯಾಗಿದ್ದಾರೆ. ಇಬ್ಬರು ಗಂಡು ಮಕ್ಕಳು ಚಂದ್ರಶೇಖರ್ ಮತ್ತು ಸಿದ್ದೇಶ್ ಇಬ್ಬರನ್ನೂ ಸುಸಂಸ್ಕೃತರನ್ನಾಗಿ ಮಾಡಿ ಅವರ ಕಾಲ ಮೇಲೆ ಅವರು ನಿಲ್ಲುವಂತೆ ಮಾಡಿದ್ದಾರೆ. ಸೊಸೆಯಂದಿರಾದ ಸಿರಿಗೌರಿ ಚಂದ್ರಶೇಖರ್, ಸುಮನ್ ಸಿದ್ದೇಶ್, ಮೊಮ್ಮಕ್ಕಳಾದ ನಿಕಿತ ಸಿರಿ, ವರುಣ್, ನಮ್ರುತ ಹಾಗೂ ಅಮೃತ ಇವರಿಗೂ ಸಂಸ್ಕಾರ - ಸಂಸ್ಕೃತಿಯನ್ನು ಹೇಳಿ ಕೊಟ್ಟಿದ್ದಾರೆ.

ಗುರುಸಿದ್ದಯ್ಯನವರು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ದಾವಣಗೆರೆ - ಹರಿಹರ ರಸ್ತೆಯಲ್ಲಿ ಶಂಕರ್ ಮಿಲ್ ವಿಶಾಲ ಜಾಗದಲ್ಲಿ ಐ ಟಿ ಐ ಕಾಲೇಜನ್ನು ಆರಂಭಿಸಿದರು. ಈಗ ಅವರ ಪತ್ನಿ ಶಕುಂತಲ ಅವರು ಐ ಟಿ ಐ ಕೇಂದ್ರವನ್ನು ನೋಡಿಕೊಳ್ಳುತ್ತಿದ್ದಾರೆ .

ಗುರುಸಿದ್ದಯ್ಯನವರು ಆಟೋಮೊಬೈಲ್ ಕ್ಷೇತ್ರದಲ್ಲಿ ಸಾಧನೆ ಮಾಡುವಲ್ಲಿ ಸಹೋದರರಾದ ಎನ್.ಎಂ.ಜೆ.ಬಿ. ಆರಾಧ್ಯ, ಸಹಕಾರಿ ಧುರೀಣರಾದ ಎಸ್.ಕೊಟ್ರಬಸಪ್ಪ, ಹಿರಿಯ ಮುತ್ಸದ್ದಿ ಶಾಮನೂರು ಶಿವಶಂಕರಪ್ಪ ಮತ್ತಿತರರು ನೀಡಿದ ಸಹಕಾರ, ಪ್ರೋತ್ಸಾಹವನ್ನು ಶ್ರೀಮತಿ ಶಕುಂತಲ ಅವರು ಸ್ಮರಿಸುತ್ತಾರೆ. ಗುರುಸಿದ್ದಯ್ಯನವರ ಬಗ್ಗೆ ಹಿರಿಯ ಸಾಹಿತಿ ದಿ. ಟಿ. ಗಿರಿಜಾ ಅವರು "ಹೆಜ್ಜೆಗಳು" ಎಂಬ ಅವಿಸ್ಮರಣೀಯ ಗ್ರಂಥವನ್ನು ಬರೆದಿದ್ದಾರೆ . ಗುರುಸಿದ್ದಯ್ಯನವರ ಕಾಯ ಅಳಿದಿದ್ದರೂ, ಅವರು ಮಾಡಿದ ಸತ್ಕಾರ್ಯದಿಂದ ಅವರ ನೆನಪು ಸದಾ ಹಸಿರಾಗಿರುತ್ತದೆ.

- ಬಕ್ಕೇಶ ನಾಗನೂರು,
ಹಿರಿಯ ಪತ್ರಕರ್ತರು, ದಾವಣಗೆರೆ

## ಉತ್ತರಪ್ರದೇಶದ ಹೊಸ ಡಿಜಿಟಲ್ ನೀತಿ : ಸರ್ಕಾರಿ ಪ್ರಚಾರಕ್ಕೆ ಇನ್‌ಫ್ಲುಯೆನ್ಸರ್ ಬಳಕೆ

ಲಖ್ನೌ, ಆ. 29 - ಉತ್ತರ ಪ್ರದೇಶ ಸರ್ಕಾರ ಹೊಸ ಡಿಜಿಟಲ್ ಮಾಧ್ಯಮ ರೀತಿಯನ್ನು ಪ್ರಕಟಿಸಿದ್ದು ಇದರ ಅನ್ವಯ ಸರ್ಕಾರಿ ಯೋಜನೆಗಳ ಪ್ರಚಾರ ಮಾಡುವ ಇನ್‌ಫ್ಲುಯನ್ಸರ್‌ಗೆ ತಿಂಗಳಿಗೆ 8 ಲಕ್ಷ ರೂ.ಗಳವರೆಗೆ ಹಣ ನೀಡಲಾಗುವುದು. ಇದೆ ವೇಳೆ ಆನ್‌ಲೈನ್‌ನಲ್ಲಿ ಆಕ್ಷೇಪಾರ್ಹ ಮಾಹಿತಿ ನೀಡುವವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಲಾಗಿದೆ.

ನೂತನ ನೀತಿಗೆ ಆಕ್ಷೇಪಿಸಿರುವ ವಿರೋಧ ಪಕ್ಷಗಳು, ರಾಜ್ಯ ಬಿಜೆಪಿ ಸರ್ಕಾರ ಅಭಿವ್ಯಕ್ತಿ ಸ್ವಾತಂತ್ರ್ಯ ಕುಂಠಿತಗೊಳಿಸಲು ಪ್ರಯತ್ನ ನಡೆಸುತ್ತಿದೆ ಎಂದು ಆರೋಪಿಸಿವೆ.

ಸರ್ಕಾರದ ಯೋಜನೆ ಹಾಗೂ ಸಾಧನೆಗಳನ್ನು ಪ್ರಚಾರ ಮಾಡಲು ಇನ್‌ಫ್ಲುಯನ್ಸರ್ ಬಳಕೆ ಮಾಡಲಾಗುವುದು. ಸಾಮಾಜಿಕ ಜಾಲತಾಣಗಳಲ್ಲಿ ಇನ್‌ಫ್ಲುಯೆನ್ಸರ್‌ಗಳು ಹೊಂದಿರುವ ಅನುಯಾಯಿಗಳು ಹಾಗೂ ಚಂದಾದಾರರನ್ನು ಆಧರಿಸಿ ತಿಂಗಳಿಗೆ 8 ಲಕ್ಷ ರೂ.ಗಳವರೆಗಿನ ಹಣ ನೀಡಲಾಗುವುದು.

## ನಗರದಲ್ಲಿಂದು ಪುಸ್ತಕ ಬಿಡುಗಡೆ ಕಾರ್ಯಕ್ರಮ

ಜಿಲ್ಲಾ ವಕೀಲರ ಸಂಘದ ವತಿಯಿಂದ ನಗರದ ಜಿಲ್ಲಾ ಕೋರ್ಟ್ ಭವನದಲ್ಲಿ ಇಂದು ಬೆಳಗ್ಗೆ 10.30ಕ್ಕೆ ಕೆ. ದಾದಾಪೀರ್ ಬರೆದಿರುವ 'ಲಾಯರ್ಸ್ ರೆಡಿ ರೆಕ್‌ನರ್' ಪುಸ್ತಕ ಬಿಡುಗಡೆ ಸಮಾರಂಭ ನಡೆಯಲಿದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ರಾಜೇಶ್ವರಿ ಎನ್.ಹೆಗಡೆ ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ವಕೀಲರ ಸಂಘದ ಜಿಲ್ಲಾಧ್ಯಕ್ಷ ಎಲ್.ಹೆಚ್.ಅರುಣ್ ಕುಮಾರ್ ಅಧ್ಯಕ್ಷತೆ ವಹಿಸುವರು.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಮಂಜಪ್ಪ ಹನುಮಂತಪ್ಪ ಅಣ್ಣಯ್ಯನವರ, 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಆರ್.ಎನ್. ಪ್ರವೀಣ್ ಕುಮಾರ್, ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಎಸ್‌ಟಿಎಫ್‌ಸಿಗಳಾದ ಶ್ರೀರಾಮ ನಾರಾಯಣ ಹೆಗಡೆ, ಕೌಟುಂಬಿಕ ನ್ಯಾಯಾಲಯದ ಜಿಲ್ಲಾ ನ್ಯಾಯಾಧೀಶ ಶಿವಪ್ಪ ಗಂಗಪ್ಪ ಸಲಗರೆ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶೆ ಟಿ.ಎಂ. ನಿವೇದಿತಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

# ಪ್ರತಿಭಾ ಕಾರಂಜಿ, ಕಲೋತ್ಸವ ಕಾರ್ಯಕ್ರಮ ಯಶಸ್ವಿ



ದಾವಣಗೆರೆ, ಆ.28- ನಗರದ ಭದ್ರಾ ಕಾಲೋನಿಯಲ್ಲಿ ಈಚೆಗೆ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಸರಸ್ವತಿ ನಗರದ ಎಸ್‌ಎಲ್‌ವಿ ಪಬ್ಲಿಕ್ ಶಾಲೆಯ ಆವರಣದಲ್ಲಿ ಕಲೋತ್ಸವ-2024-25ರ ಕಾರ್ಯಕ್ರಮ ನೆರವೇರಿತು.

ಮೌಂಟ್ ಎವರೆಸ್ಟ್ ವಿದ್ಯಾಲಯದ ಮುಖ್ಯ ಶಿಕ್ಷಕ ವೀರಭದ್ರಸ್ವಾಮಿ ಹಾಗೂ ಜ್ಞಾನದೀಪ ಪಬ್ಲಿಕ್ ಶಾಲೆಯ ಕಾರ್ಯದರ್ಶಿ ಡಾ.ಕೆ. ಬಸವರಾಜಪ್ಪ ವಿಜೇತರಿಗೆ ಪ್ರಶಸ್ತಿ ಪ್ರಮಾಣ ಪತ್ರ ವಿತರಿಸಿದರು.

ಪಾಲಿಕೆ ಸದಸ್ಯ ಕೆ.ಎಂ. ವೀರೇಶ್, ಪದವೀಧರ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಎನ್.ಎಂ ಕರಿಬಸಪ್ಪ, ಬಿಆರ್‌ಸಿ ಚೌಡಪ್ಪ ಹಾಗೂ ಸಿಆರ್‌ಪಿ ಭರತ್, ಸರ್ಕಾರಿ ಕಾಟನ್ ಮಾರ್ಕೆಟ್ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಶಿವಕುಮಾರ್, ಮಹೇಶ್ವರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಧನಂಜಯಪ್ಪ, ಎಸ್.ಎಸ್.ವಿ. ಕಾನ್ವೆಂಟಿನ ಕಾರ್ಯದರ್ಶಿ ರಾಜಶೇಖರ್, ಎಸ್‌ಜೆಎಂ. ಪಬ್ಲಿಕ್ ಶಾಲೆಯ ಕಾರ್ಯದರ್ಶಿ ಮಹೇಶ್ವರಪ್ಪ ಮತ್ತಿತರರಿದ್ದರು.

## 31 ರಂದು ನಗರದಲ್ಲಿ ಆರೋಗ್ಯ ಮೇಳ

ದಾವಣಗೆರೆ, ಆ. 28- ಶ್ರೀ ಧನ್ವಂತರಿ ಆಯುರ್ವೇದ ಔಷಧ ಪ್ರತಿನಿಧಿಗಳ ಸಂಘದ ವತಿಯಿಂದ ಇದೇ ದಿನಾಂಕ 31 ಮತ್ತು ಸೆ. 1 ರಂದು ಎರಡು ದಿನಗಳ ಕಾಲ ನಗರದ ಹದಡಿ ರಸ್ತೆಯಲ್ಲಿನ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸಮುದಾಯ ಭವನದಲ್ಲಿ 'ಆರೋಗ್ಯ ಮೇಳ-2024' ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಬಿ. ಮಧುಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಇಂದಿನ ಒತ್ತಡದ ಜೀವನ ಶೈಲಿಗೆ ಆಯುರ್ವೇದವೇ ಮದ್ದು ಎಂಬ ಸದುದ್ದೇಶದಿಂದ ಈ ಆರೋಗ್ಯ ಮೇಳವನ್ನು ಆಯೋಜಿಸಲಾಗಿದೆ. ಪ್ರತಿ ದಿನ ಬೆಳಿಗ್ಗೆ 9 ರಿಂದ ಸಂಜೆ 6 ರವರೆಗೆ ಎಲ್ಲಾ ರೀತಿಯ ಕಾಯಿಲೆಗಳ ಬಗ್ಗೆ ತಪಾಸಣೆ ಮಾಡಲಾಗುವುದು ಎಂದು ತಿಳಿಸಿದರು.

ಆ. 31 ರಂದು ಬೆಳಿಗ್ಗೆ 9 ಕ್ಕೆ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರಾದ ಎಂ.ಹೆಚ್. ಅಣ್ಣಯ್ಯ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ಮುಖ್ಯ ಅತಿಥಿಗಳಾಗಿ ಜಿಲ್ಲಾ ಆಯುಷ್ ಅಧಿಕಾರಿ ಯು.ಬಿ. ಯೋಗೇಂದ್ರ ಕುಮಾರ್ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆಂದರು.

ಪತ್ರಿಕಾಗೋಷ್ಠಿಯಲ್ಲಿ ಎನ್. ರಾಜೇಶ್, ಜಿ. ಅಮರೇಶ್, ರಾಜೇಶ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಕ್ಯಾಸಿನಕೆರೆ ಶ್ರೀ ವೀರಭದ್ರೇಶ್ವರ ಪ್ರೌಢಶಾಲೆ ತಾಲ್ಲೂಕು ಮಟ್ಟಕ್ಕೆ ಆಯ್ಕೆ

ಚನ್ನಗಿರಿ, ಆ. 28- ದಿನಾಂಕ 24.08.2024 ರಂದು ಹೊನ್ನಾಳಿ ಸ್ಟೇಡಿಯಂನಲ್ಲಿ ನಡೆದ ವಲಯ ಮಟ್ಟದ ಪ್ರೌಢಶಾಲಾ ಮಕ್ಕಳ ಕ್ರೀಡಾ ಕೂಟದಲ್ಲಿ ಕೆಂಗಾಪುರ ಶ್ರೀರಾಮಲಿಂಗೇಶ್ವರ ವಿದ್ಯಾ ಸಂಸ್ಥೆ(ರಿ) ಆಶ್ರಯದಲ್ಲಿ ನಡೆಯುತ್ತಿರುವ ಕ್ಯಾಸಿನಕೆರೆ ಗ್ರಾಮದ ಶ್ರೀ ವೀರಭದ್ರೇಶ್ವರ ಪ್ರೌಢ ಶಾಲೆಯ ಬಾಲಕ ಮತ್ತು ಬಾಲಕಿಯರ ತಂಡಗಳೆರಡೂ ವಲಯ ಮಟ್ಟದ ಕಬ್ಬಡ್ಡಿ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನದೊಂದಿಗೆ ಜಯಗಳಿಸಿ, ಚನ್ನಗಿರಿ ತಾಲ್ಲೂಕು ಮಟ್ಟಕ್ಕೆ ಆಯ್ಕೆ ಆಗಿದ್ದಾರೆ.

ವಿಜೇತ ಮಕ್ಕಳೆಲ್ಲರಿಗೂ ಹರನಹಳ್ಳಿ-ಕೆಂಗಾಪುರ ಮಠದ ಶ್ರೀ ರಾಮಲಿಂಗೇಶ್ವರ ಮಹಾ ಸ್ವಾಮೀಜಿ, ಸಂಸ್ಥೆಯ ಆಡಳಿತ ಮಂಡಳಿ, ಶಿಕ್ಷಕರು, ಸಿಬ್ಬಂದಿ ವರ್ಗ ಹಾಗೂ ಪೋಷಕರು ಅಭಿನಂದಿಸಿದ್ದಾರೆ.





# ಜಿಗಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ 12.90 ಕೋಟಿ ರೂ. ಕೆಸಿಸಿ ಸಾಲ ಸೌಲಭ್ಯ



ಮಲೇಬೆನ್ನೂರು, ಆ.28- ಜಿಗಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2023-24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಬುಧವಾರ ಸಂಘದ ಅಧ್ಯಕ್ಷ ಬಿ. ಎಸ್.ಕುಬೇರಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಂಘದ ಸಿಇಓ ಎನ್.ಎನ್. ತಳವಾರ್ ಅವರು, 2023 - 24ನೇ ಸಾಲಿನ ವಾರ್ಷಿಕ ವರದಿ ಮಂಡಿಸಿ ಮಾತನಾಡಿ, ಸಂಘವು 1954 ರಲ್ಲಿ ನೋಂದಣಿಯಾಗಿದ್ದು, 70 ವರ್ಷಗಳನ್ನು ಪೂರೈಸಿದೆ.

ಜಿಗಳಿ, ಜಿ.ಬೇವಿನಹಳ್ಳಿ, ಹಳ್ಳಿಹಾಳ್, ವಡೆಯರ ಬಸಾವಪುರ ಗ್ರಾಮಗಳ ವ್ಯಾಪ್ತಿ ಹೊಂದಿರುವ ಸಂಘವು ಈ ವರ್ಷ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ 12.90 ಕೋಟಿ ರೂ. ಕೆಸಿಸಿ ಸಾಲ ಮತ್ತು 1.48 ಕೋಟಿ ರೂ. ತೋಟಗಾರಿಕೆ ಸಾಲ ಹಾಗೂ 2.12 ಕೋಟಿ ರೂ. ಜಾಮೀನು ಸಾಲ ನೀಡಿದ್ದು, 19.50 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಎನ್.ಎನ್.ತಳವಾರ್ ತಿಳಿಸಿದರು.

ಈ ವೇಳೆ ಮಾತನಾಡಿದ ಸಂಘದ ಮಾಜಿ ಅಧ್ಯಕ್ಷ ಹಳ್ಳಿಹಾಳ್ ಗ್ರಾಮದ ಹೆಚ್.ವೀರನಗೌಡ ಅವರು, ನಮ್ಮ ಸಂಘವು ಜಿಲ್ಲಾ ಮಟ್ಟದಲ್ಲಿ ನಂ. 1 ಸ್ಥಾನದಲ್ಲಿದೆ. ಇದಕ್ಕೆ ಅನೇಕರ ಶ್ರಮವಿದ್ದು, ಸಂಘದ ಇನ್ನಷ್ಟು ಪ್ರಗತಿಗೆ ಎಲ್ಲರೂ ಶ್ರಮಿಸಬೇಕು. ಈ ವರ್ಷದ ಲಾಭಾಂಶವನ್ನು ಸಂಘದ ಅಭಿವೃದ್ಧಿಗೆ ನೀಡೋಣ ಎಂದರು.

ಗ್ರಾ.ಪಂ. ಮಾಜಿ ಉಪಾಧ್ಯಕ್ಷರೂ ಆದ ನಂದಿ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಗೌಡ್ರ ಬಸವರಾಜಪ್ಪ ಮಾತನಾಡಿ, ಸಂಘದ ಪ್ರಗತಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಸಂಘದ ಸಂಸ್ಥಾಪಕ ಅಧ್ಯಕ್ಷರ ಭಾವಚಿತ್ರ ಹಾಕುವಂತೆ ಸಲಹೆ ನೀಡಿದರು.

ಸಂಘದ ಮಾಜಿ ಅಧ್ಯಕ್ಷರೂ, ಹಾಲಿ ನಿರ್ದೇಶಕರಾದ ಡಿ.ಹೆಚ್.ಮಂಜುನಾಥ್ ಮಾತನಾಡಿ, ಜಿ.ಆನಂದಪ್ಪ ಅವರು, ಡಿಸಿಸಿ ಬ್ಯಾಂಕಿನ ಉಪಾಧ್ಯಕ್ಷರಾಗಿದ್ದ ಸಂದರ್ಭದಲ್ಲಿ ನಮ್ಮ ಸಂಘಕ್ಕೆ ಹೆಚ್ಚಿನ ಸಾಲ ಸೌಲಭ್ಯ ಸಿಕ್ಕಿತು ಎಂದರು.

ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷರೂ ಆದ ಸಂಘದ ಮಾಜಿ ಅಧ್ಯಕ್ಷ ಜಿ.ಆನಂದಪ್ಪ ಮಾತನಾಡಿ, ನಮ್ಮ ಸಂಘದಲ್ಲಿ ನ್ಯೂನತೆಗಳಿಗಿಂತ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿ, ಎಲ್ಲರೂ ಕೆಲಸ ಮಾಡಿದ್ದಾರೆ. ಸಂಘದ ಪ್ರಗತಿಗೆ ನಮ್ಮ ನಾಲ್ಕು ಗ್ರಾಮಗಳ ಜನರ ಒಗ್ಗಟ್ಟು ಕಾರಣವಾಗಿದೆ. ಹಾಗಾಗಿ ನಮ್ಮ ಸಂಘ ಜಿಲ್ಲೆಯಲ್ಲಿ ನಂ.1 ಸ್ಥಾನಕ್ಕೆ ಬಂದಿದೆ. ಸಂಘದಿಂದ ಸಾಮಾಜಿಕ ಕಾರ್ಯಕ್ರಮಗಳಿಗೂ ಒತ್ತು ಕೊಡಿ ಎಂದು ಆನಂದಪ್ಪ ಸಲಹೆ ನೀಡಿದರು.

ಗ್ರಾ.ಪಂ. ಮಾಜಿ ಅಧ್ಯಕ್ಷ ಎಂ.ವಿ.ನಾಗರಾಜ್, ಎಕ್ಕೆಗೊಂದಿ ರುದ್ರಗೌಡ ಎಂ.ಬಸವರಾಜಪ್ಪ, ಗ್ರಾ.ಪಂ. ಸದಸ್ಯ ಹೋಬಳಿ ಆನಂದಗೌಡ ಮಾತನಾಡಿದರು.

ಸಂಘದ ಉಪಾಧ್ಯಕ್ಷ ಖಾಸಿಂ ಸಾಬ್, ನಿರ್ದೇಶಕರಾದ ಜಿ.ಎಂ.ಪ್ರಕಾಶ್, ಸಿ. ಎನ್.ಪರಮೇಶ್ವರಪ್ಪ, ಜಿ.ಬಸವರಾಜಪ್ಪ, ಶ್ರೀಮತಿ ಈರಮ್ಮ, ಶ್ರೀಮತಿ ಲಲಿತಮ್ಮ, ಎನ್.ಕರಿಬಸಪ್ಪ, ಎ.ಕೆ.ರಂಗಪ್ಪ, ಗ್ರಾಮದ ಮುಖಂಡರಾದ ಜಿ. ಎಂ.ಆನಂದಪ್ಪ, ಬಿ.ಎಂ. ದೇವೇಂದ್ರಪ್ಪ, ಕೆ.ಎಸ್. ನಂದ್ಯಪ್ಪ, ನಾಗಸನಹಳ್ಳಿ ಮಹೇಶ್ವರಪ್ಪ, ಜಿ.ಪಿ. ಹನುಮಗೌಡ, ಬಿ.ನಿಂಗಾಚಾರಿ, ಮುದ್ದಪ್ಪ ಶಂಕ್ರಪ್ಪ, ಎಂ.ಜಯ್ಯಣ್ಣ, ಗ್ರಾ.ಪಂ. ಸದಸ್ಯ ಕೆ.ಜಿ.ಬಸವರಾಜ್, ಬಸಾಪುರದ ಮಹಾಂತಯ್ಯ, ಪತ್ರಕರ್ತ ಪ್ರಕಾಶ್, ಸಂಘದ ಸಿಬ್ಬಂದಿಗಳಾದ ಬಸವರಾಜ್, ಚಂದ್ರಪ್ಪ, ಚಮನ್, ಮಂಜುನಾಥ್ ಸೇರಿದಂತೆ ಇನ್ನೂ ಅನೇಕರು ಸಭೆಯಲ್ಲಿದ್ದರು. ನಿವೃತ್ತ ಶಿಕ್ಷಕ ಜಿ.ಆರ್. ನಾಗರಾಜ್ ಕಾರ್ಯಕ್ರಮ ನಿರೂಪಿಸಿದರು. ಎಕ್ಕೆಗೊಂದಿ ರುದ್ರಗೌಡ ಸ್ವಾಗತಿಸಿದರು. ಎನ್. ಎನ್.ತಳವಾರ್ ವಂದಿಸಿದರು.

## ಮಲೇಬೆನ್ನೂರಿದಲ್ಲಿ ಇಂದು ಪ್ರತಿಭಾ ಕಾರಂಜಿ ಕಲೋತ್ಸವ

ಪಟ್ಟಣದ ಭಾನು ಹೈ-ಟೆಕ್ ಶಾಲೆಯಲ್ಲಿ ಇಂದು ಬೆಳಿಗ್ಗೆ 10.30 ರಿಂದ ಸಂಜೆ 5 ಗಂಟೆವರೆಗೆ ಮಲೇಬೆನ್ನೂರು ಸಮೂಹ ಸಂಪನ್ಮೂಲ ಕೇಂದ್ರ ವ್ಯಾಪ್ತಿಯ ಪ್ರೌಢಶಾಲೆಗಳ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಿಆರ್‌ಪಿ ಕರಿಬಸಪ್ಪ ಬಸಲಿ ತಿಳಿಸಿದ್ದಾರೆ. ಆ.30 ರ ಶುಕ್ರವಾರ ಲಯನ್ಸ್ ಶಾಲೆಯಲ್ಲಿ ಪ್ರಾಥಮಿಕ ಶಾಲೆಗಳ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಶಾಲಾ ಮುಖ್ಯ ಶಿಕ್ಷಕ ಚಂದ್ರಶೇಖರ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಶತಮಾನೋತ್ಸವ ಸಂಭ್ರಮ

ದಾವಣಗೆರೆ ನಗರದ ಹಳೇಪೇಟೆಯಲ್ಲಿರುವ ಚಿಂದೋಡಿ ಎಸ್. ವೀರಣ್ಣ ಮತ್ತು ಚಿಂದೋಡಿ ಕುಟುಂಬದವರ ನಿವಾಸದಲ್ಲಿ ಇಂದು ಬೆಳಗ್ಗೆ 10.30ಕ್ಕೆ ಅಣ್ಣಿಗೇರಿ ಚಿಂದೋಡಿ ಮನೆತನದ ದಾಸೋಹ ಪರಂಪರೆಯ ಶತಮಾನೋತ್ಸವ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮದಲ್ಲಿ ಆವರಗೊಳ್ಳದ ಓಂಕಾರ ಶಿವಾಚಾರ್ಯ ಶ್ರೀಗಳು, ವಿರಕ್ತ ಮಠದ ಬಸವ ಪ್ರಭು ಶ್ರೀಗಳು, ಉರುಗಾದ್ರಿ ಸಂಸ್ಥಾನ ಮಠದ ಕರಿಬಸವ ರಾಜೇಂದ್ರ ಶ್ರೀಗಳು ಸಾನ್ನಿಧ್ಯ ವಹಿಸಲಿದ್ದಾರೆ.


**ನೀರಾವರಿ ಜಮೀನು ಮಾರಾಟಕ್ಕಿದೆ**
ದಾವಣಗೆರೆಯಿಂದ 6 ಕಿ.ಮೀ. ಹತ್ತಿರದ ಪುಟಗನಾಳ ಗ್ರಾಮಕ್ಕೆ ಹೊಂದಿಕೊಂಡಿರುವ ಕೆಂಪು ಮಸಾರಿ ಹೊಲ, ಅಡಿಕೆ ಗಿಡ ಹಾಕಲು ಸೂಕ್ತವಾದ 4 ಎಕರೆ 16 ಸೇಂಟ್ಸ್ ಜಮೀನಿದೆ. 1 ಬೋರ್ ಇದೆ.
90084 15137, 63609 35608

**ಮಳಿಗೆಗಳು ಬಾಡಿಗೆಗೆ ಇವೆ**
ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ಶ್ರೀ ಕಲ್ಲೇಶ್ವರ ಬಿಲ್ಡಿಂಗ್, 1ನೇ ಮಹಡಿ, 2ನೇ ಮಹಡಿ, ಸೆಲ್ಲರ್ ಮಹಡಿ, 1100 Sq.ft., ಲಿಫ್ಟ್ ಸೌಲಭ್ಯ, ATMಗೆ ಜಾಗ
99646 99096

**ಬೇಕಾಗಿದ್ದಾರೆ**
ಹೋಲ್‌ಸೇಲ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು SSLC ಪಾಸ್/ಫೇಲ್ ಆದ ಸದೃಢ ಹುಡುಗರು ಬೇಕಾಗಿದ್ದಾರೆ. ಅನುಭವಕ್ಕೆ ತಕ್ಕಂತೆ ಸಂಬಳ. ಸ್ವತಃ ಬಂದು ಬೇಟಿಯಾಗಿ
ಸಮಯ : ಮಧ್ಯಾಹ್ನ 12 ರಿಂದ 2 ಗಂಟೆಯವರೆಗೆ
78991 77660

**WANTED**
S.V.MARKETING DAVANGERE
* Marketing Executive
* Accountant
* godown Incharge
63620 23451, 97434 37003

**ಬೇಕಾಗಿದ್ದಾರೆ**
ಹಾಸ್ಪಿಟಲ್‌ನಲ್ಲಿ ಇನ್ಶೂರೆನ್ಸ್ ಸ್ಕೀಮ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಸ್ಟಾಫ್ ಬೇಕಾಗಿದ್ದಾರೆ. ಉತ್ತಮ ವೇತನ ನೀಡಲಾಗುವುದು
99725 23910

**Car Loan / ಕಾರ್ ಲೋನ್**
Nationalised / ಸರ್ಕಾರಿ ಬ್ಯಾಂಕಿನಿಂದ ಮನೆಯಲ್ಲಿ ಕುಳಿತು ಕಾರ್ ಲೋನ್ ಪಡೆಯಿರಿ.
50gm ಬೆಳ್ಳಿ ಕಾಯಿನ್ ಉಚಿತವಾಗಿ ಪಡೆಯಿರಿ.
96325 54524
* condition apply

**ಸೈಟುಗಳು ಮಾರಾಟಕ್ಕಿವೆ**
ಕೊಂಡಜ್ಜಿ - ಬುಳ್ಳಾಪುರದಲ್ಲಿ, ಕೆಹೆಚ್‌ಬಿ ಲೇಔಟ್‌ನಲ್ಲಿ 25x30 ಅಳತೆಯ ಸೈಟುಗಳು ಮಾರಾಟಕ್ಕಿವೆ.
96111 44565
97434 47178

**ಮಣಿಪಾಲ್ ಆರೋಗ್ಯ ಕಾರ್ಡ್**
ಹೊಸ ಕಾರ್ಡ್ ಮಾಡಿಸಿಕೊಳ್ಳಲು 31.8.2024 ಕೊನೆಯ ದಿನಾಂಕ.
ಸಂಪರ್ಕಿಸಿ :
ಮಣಿಪಾಲ್ ಮಾಹಿತಿ ಕೇಂದ್ರ, ತ್ರಿಶೂಲ್ ಟಾಕೀಸ್ ರಸ್ತೆ, ಕಾವೇರಮ್ಮ ಶಾಲೆಯ ಹತ್ತಿರ, ಕೆ.ಬಿ. ಬಡಾವಣೆ, ದಾವಣಗೆರೆ.
89042 19373

**ಬೇಕಾಗಿದ್ದಾರೆ**
ಪತ್ರಿಕಾ ಕಾರ್ಯಾಲಯದಲ್ಲಿ ಸಂಜೆ ಪಾಳೆಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನ ಹಾಗೂ ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರ ನಂತರ
ಫೋ. : 08192 254736

**ಶಾಪಿಂಗ್ ಕಾಂಪ್ಲೆಕ್ಸ್‌ಗಳು ಮಾರಾಟಕ್ಕಿವೆ**
ಅಳತೆ 30×50 ಚ.ಅ. ಆರ್‌ಎಂಸಿ ಲಿಂಕ್ ರಸ್ತೆ, 12ನೇ ಕ್ರಾಸ್ 'ಅಥಣಿ' ಕಾಂಪ್ಲೆಕ್ಸ್ ಪಕ್ಕದ ರಸ್ತೆ, ದಾವಣಗೆರೆ.
86601 25491, 98453 63900

**ಬೇಕಾಗಿದ್ದಾರೆ**
ಪೈಪ್ ಡಿಸ್ಟ್ರಿಬ್ಯೂಷನ್ ಆಫೀಸ್ ನಲ್ಲಿ ಪ್ಯಾಕಿಂಗ್, ಲೋಡಿಂಗ್ ಹಾಗೂ ಅನ್ ಲೋಡಿಂಗ್ ಮಾಡಲು ಉತ್ಸಾಹಿ ಯುವಕರು ಬೇಕಾಗಿದ್ದಾರೆ.
74067 40635
70196 73906

**WANTED**
Female Nurses to Work In a Reputed Hospital In Davanagere. Good Salary. Call Us On
80735 15690

**ಮಳಿಗೆ ಬಾಡಿಗೆಗೆ/ಲೀಸ್‌ಗಿದೆ**
ದಾವಣಗೆರೆ ಪಿಬಿ ರಸ್ತೆ, ಫೈರ್ ಇಂಜಿನ್ ಆಫೀಸ್ ಪಕ್ಕ, ಎಪಿಎಂಸಿ ಕ್ವಾಟ್ರಸ್ ಮುಂಭಾಗ, ರಸ್ತೆಗೆ ಹೊಂದಿಕೊಂಡಿರುವ ಅಗಲ 24 ಉದ್ದ 28 ವ್ಯವಹಾರಿಕ ಸ್ಥಳ ಆಗಿರುತ್ತದೆ.
NBA ಲೋಕೇಶ್
98446 81747

**ಗೋಡೌನ್ ಬಾಡಿಗೆಗೆ ಇದೆ, ವಿಚಾರಿಸಿ**
SG Krishnamurthy
By Pass Road, Near Shamnur Bridze, Glass House Area, Davanagere.
86182 19879 K. Murthy
78299 91320 K. Samarth

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಬೇಕಾಗಿದ್ದಾರೆ**
ನಗರದ ಡೈಮಂಡ್ ಜ್ಯುವೆಲರಿಯಲ್ಲಿ ಕೆಲಸ ಮಾಡಲು ಸೇಲ್ಸ್ ಬಾಯ್ಸ್, ಕಂಪ್ಯೂಟರ್ ಅನುಭವ ಹೊಂದಿರುವ ಹುಡುಗರು ಬೇಕಾಗಿದ್ದಾರೆ ಉತ್ತಮ ವೇತನ ಕೊಡಲಾಗುವುದು. ಸಂಪರ್ಕಿಸಿ :
9482744566, 8088045683

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವಿರುವ ಸೇಲ್ಸ್ ಗರ್ಲ್ಸ್ ಮತ್ತು ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ.
ಎಸ್.ಎಸ್. ಹೈಟೆಕ್ ಆಸ್ಪತ್ರೆ ರೋಡ್, ಜಯನಗರ, ಬಿ ಬ್ಲಾಕ್, ದಾವಣಗೆರೆ.
99861 62462

**SALES OR MARKETING PERSON NEED**
Salary + Incentive
Till 1.0 Lakh
Highest Incentive
Urgent Need
96061 62212

**ಅತೀ ಕಡಿಮೆ ಖರ್ಚಿನಲ್ಲಿ MBBS**
18 ರಿಂದ 28 ಲಕ್ಷದೊಳಗೆ ವಿದೇಶಗಳಲ್ಲಿ MBBS ಮಾಡಬಹುದು.
NEET SCORE SC, ST,OBC 129, GEN : 164.
98868 96574, 86602 35013

**ಸೋಲಾರ್ & ವಾಟರ್ ಫಿಲ್ಟರ್ ಸರ್ವೀಸ್**
ಸೋಲಾರ್ ವಾಟರ್ ಹೀಟರ್ ಹಾಗೂ ವಾಟರ್ ಫಿಲ್ಟರ್ ಸರ್ವೀಸ್ & ರಿಪೇರಿ ಮಾಡಲು ಸಂಪರ್ಕಿಸಿ.
84315 30052, 87228 39869

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಬೇಕಾಗಿದ್ದಾರೆ**
ತಕ್ಷಣ ಸೆಕ್ಯೂರಿಟಿ ಗಾರ್ಡ್/ Supevisor ಬೇಕಾಗಿದ್ದಾರೆ. 12 Hours Duty + ESI, PF
Salary 9000-14000/-
91130 53483

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**KAIDB**
Furniture Factory for Rent, Davanagere. 4000 Sqft.
98459 77475

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಬೇಕಾಗಿದ್ದಾರೆ**
ಮನಿಷಾ & ಶಿಫಾಲಿ ಸೆಕ್ಯೂರಿಟಿ ಸರ್ವೀಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯಲ್ಲಿ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಕೂಡಲೇ ಬೇಕಾಗಿದ್ದಾರೆ. ಸಂಪರ್ಕಿಸಿ :
98448 18900, 70227 92613

**WANTED**
RETAIL EXPERIENCE
Required male or Female Store Manager, Branded Store,
Firstcry.com
C.G. Hospital Road, Davangere.
83108 00027, 97434 47019

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು ಬೇಕಾಗಿದ್ದಾರೆ.
ಭೇಟಿ ಸಮಯ ಸಂಜೆ 6:30ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
# 579, 6ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**CHANGE OF NAME**
I GK Manjunatha s/o Kenchappa, resident at Hadadi Village, Davanagere Taluk, Davanagere District do hereby take on oath as in my Aadhar Card my name entered as GK Manjunatha & in my Union Bank of India Account my name entered as Manjappa Both names GK Manjunatha and Manjappa are one and the same person belongs to me only. Henceforth all my transactions & dealings will be in the name GK Manjunatha Vide affidavit dated 26.8.2024 sworn before notary M. Prathaparudra, Davanagere.

# ಸೃಜನಶೀಲತೆಗೆ ಪಠ್ಯೇತರ ಚಟುವಟಿಕೆಗಳೂ ಅಗತ್ಯ

## ಹರಪನಹಳ್ಳಿಯ ತೆಲಗಿ ವಲಯ ಮಟ್ಟದ ಕ್ರೀಡಾಕೂಟದಲ್ಲಿ ವೈ.ಕಾಶಿನಾಥ್ ನಾಯ್ಕ



ಹರಪನಹಳ್ಳಿ, ಆ.28- ಪಠ್ಯ ಅಭ್ಯಾಸದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದಾಗ ಮಾತ್ರ ಸೃಜನಶೀಲರಾಗಲು ಸಾಧ್ಯವಾಗುತ್ತದೆ ಎಂದು ಶ್ರೀ ವೆಂಕಟೇಶ್ವರ ಪ್ರೌಢಶಾಲೆಯ ಕಾರ್ಯಾಧ್ಯಕ್ಷ ವೈ. ಕಾಶಿನಾಥ ಹೇಳಿದರು

ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ಶಾಲಾ ಶಿಕ್ಷಣ ಇಲಾಖೆ, ಗ್ರಾಮ ಪಂಚಾಯತಿ ಗುಂಡಗತ್ತಿ ಶ್ರೀವೆಂಕಟೇಶ್ವರ ಪ್ರೌಢಶಾಲೆ ಪುಣಭಗಟ್ಟ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ತೆಲಗಿ ವಲಯ ಮಟ್ಟದ ಕ್ರೀಡಾ ಕೂಟ ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶದ ಮಕ್ಕಳ ಪ್ರತಿಭೆ ಗುರುತಿಸಲು ಶಾಲಾ ಹಂತದ ಕ್ರೀಡಾಕೂಟಗಳು ಸಹಕಾರಿಯಾಗಿದ್ದು, ಇದರಿಂದ ವಿದ್ಯಾರ್ಥಿಗಳ ನಡುವೆ ಸೋದರ ಸಂಬಂಧ ಬೆಳೆಯಲಿವೆ ಎಂದರು.

ತಾಲೂಕು ದೈಹಿಕ ಪರಿವೀಕ್ಷಕ ಷಣ್ಮುಖಪ್ಪ ಮಾತನಾಡಿ, ಕ್ರೀಡೆಯಲ್ಲಿ ಸೋಲು ಗೆಲುವು ಸಹಜ, ವಿದ್ಯಾರ್ಥಿಗಳು ಗ್ರಾಮೀಣ ಕ್ರೀಡೆಯಿಂದ ಉನ್ನತ ಮಟ್ಟಕ್ಕೆ ಹೋಗುವ ಮೂಲಕ ಉತ್ತಮ ಕ್ರೀಡಾ ಪಟುಗಳಾಗಿ ಎಂದರು.

ಪುರಸಭೆ ಮಾಜಿ ಅಧ್ಯಕ್ಷ ಎಂ.ರಾಜಶೇಖರ್, ಕ್ರೀಡಾ ಧ್ವಜಾರೋಹಣ ನೆರವೇರಿಸಿದರು, ವಕೀಲ ಮಂಜುನಾಥ್ ಮಾತನಾಡಿದರು.

ಈ ಸಂದರ್ಭದಲ್ಲಿ ಶ್ರೀವೆಂಕಟೇಶ್ವರ ಪ್ರೌಢ ಶಾಲೆಯ ಅಧ್ಯಕ್ಷೆ ಉಷಾ ಕಾಶಿನಾಥ್ ನಾಯ್ಕ , ಗುಂಡಗತ್ತಿ ಬಂದೋಳ್ ಮಂಜಣ್ಣ, ಮುಖ್ಯ ಶಿಕ್ಷಕ ಹೆಚ್.ಎನ್.ನಾಗರಾಜ್, ತಲುವಾಗಲು ರುದ್ರಪ್ಪ, ಹನುಮಂತಪ್ಪ, ಗ್ರಾ.ಪಂ. ಅಧ್ಯಕ್ಷೆ ವಿಜಯಲಕ್ಷ್ಮಿ, ಉಪಾಧ್ಯಕ್ಷ ಹನುಮಂತಪ್ಪ, ನೇತ್ರಾವತಿ, ನಾಗಣ್ಣ, ಮಂಜಮ್ಮ ನಾಗರಾಜ, ಬಿ.ಕೆ.ಮಂಜಪ್ಪ, ಹೇಮಂತಪ್ಪ, ರಾಜಪ್ಪ, ಕರಿಯಪ್ಪ, ಕೆ.ಪ್ರಕಾಶ್, ಕೆ.ಗಂಗಣ್ಣ, ಕೌಶಿಕ್, ಎಸ್.ದೇವಿಂದ್ರಪ್ಪ, ಕೆ. ಚಂದ್ರಪ್ಪ, ಬಿ.ಹೆಚ್.ಹನುಮಂತಪ್ಪ, ತಿರುಪತಿ ನಾಯ್ಕ, ಸೂರ್ಯನಾಯ್ಕ, ಮೋಟ್ಲಾನಾಯ್ಕ, ಹನುಮಂತಪ್ಪ, ಮಹಾದೇವಕ್ಕ. ಲಕ್ಯನಾಯ್ಕ, ನಾಗೇಶ್, ಕೆಂಚಪ್ಪ, ಶಿವಶಂಕರ್, ಮೋಹನ್, ನಿಂಗರಾಜ್ ಸೇರಿದಂತೆ ಇತರರು ಇದ್ದರು.

# 5 ಕೋಟಿ ರೂ. ವೆಚ್ಚದ ಬ್ರಿಡ್ಜ್ ಕಂ ಬ್ಯಾರೇಜ್

## ತೊರೆಸಾಲು ಭಾಗದಲ್ಲಿ ಅಂತರ್ಜಲ ಹೆಚ್ಚಳ : ಜಗಳೂರು ಶಾಸಕ ಬಿ.ದೇವೇಂದ್ರಪ್ಪ



ಜಗಳೂರು, ಆ.28- ತಾಲ್ಲೂಕಿನ ಮೂಡಲಮಾಚಿಕೆರೆ ಸಿದ್ದಿಹಳ್ಳಿ ಮಾರ್ಗಮಧ್ಯೆ ಜಿನಿಗು ಹಳ್ಳದಲ್ಲಿ ನಿರ್ಮಾಣವಾಗುತ್ತಿರುವ 5ಕೋಟಿ ರೂ. ವೆಚ್ಚದ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣದಿಂದ ತೊರೆಸಾಲು ಭಾಗದಲ್ಲಿ ಅಂತರ್ಜಲ ಹೆಚ್ಚಳವಾಗಲಿದೆ ಎಂದು ಶಾಸಕ ಬಿ.ದೇವೇಂದ್ರಪ್ಪ ತಿಳಿಸಿದರು.

ಚೆಕ್ ಡ್ಯಾಂ ಕಾಮಗಾರಿ ಪರಿಶೀಲನೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 5ಕೋಟಿ ರೂ. ವೆಚ್ಚದಲ್ಲಿ ಗುಣಮಟ್ಟದ ಬ್ರಿಡ್ಜ್ ಕಂ ಬ್ಯಾರೇಜ್ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದ್ದು, ಇದರಿಂದ ತೊರೆಸಾಲು ಭಾಗದಲ್ಲಿ ಅಂತರ್ಜಲ ಹೆಚ್ಚಳವಾಗಲಿದೆ ಜನ ಜಾನುವಾರುಗಳಿಗೆ ನೀರು ಪೂರೈಕೆಯಾಗಲಿದೆ ಎಂದರು.

ನುರಿತ ಇಂಜಿನಿಯರ್ ಗಳ ಡಿಸೈನ್ ನಂತೆ ವಿನ್ಯಾಸದಲ್ಲಿ ಕಾಮಗಾರಿ ನಿರ್ಮಾಣಗೊಳ್ಳುತ್ತಿದೆ. 9 ಅಡಿ ಎತ್ತರದಲ್ಲಿ ಸೇತುವೆ ನಿರ್ಮಾಣಗೊಂಡಿದೆ. ನೀರು ಸಂಗ್ರಹದ ಪ್ರಮಾಣ ಕಡಿಮೆಯಾಗುತ್ತಿದೆ 2 ಅಡಿ ಎತ್ತರವಿರಬೇಕು ಎಂಬುದು ಗ್ರಾಮಸ್ಥರ ಬೇಡಿಕೆಯಾಗಿದೆ. ಸಂಬಂಧಿಸಿದ ಇಂಜಿನಿಯರ್ ಮತ್ತು ಗುತ್ತಿಗೆದಾರರ ಬಳಿ ಚರ್ಚಿಸಿ ಹೆಚ್ಚುವರಿ ಅನುದಾನದಲ್ಲಿ ಕಾಮಗಾರಿ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಸಿದ್ದಿಹಳ್ಳಿ ಪ್ರಕಾಶ್ ರೆಡ್ಡಿ, ಹಟ್ಟಿತಿಪ್ಪೇಸ್ವಾಮಿ, ಸಣ್ಣಸೂರಯ್ಯ, ಮಹೇಶ್ವರಪ್ಪ, ಪಲ್ಲಾಗಟ್ಟೆ ಶೇಖರಪ್ಪ, ಮಂಜುನಾಥ್, ಎಂ.ಎಸ್. ಪಾಟೀಲ್, ಕಾಂತರಾಜ್ ಸೇರಿದಂತೆ ಇತರರು ಇದ್ದರು.

# ಕೆರೆಗಳು ಋತುಮಾನ ಜಲಸಂಗ್ರಹ ಆಸ್ತಿಗಳು



(1ನೇ ಪುಟದಿಂದ) ಸಮೃದ್ಧಿಯಾಗಲಿ, ಬೆಳೆದ ಬೆಳೆಗಳಿಗೆ ಮಾರುಕಟ್ಟೆಯಲ್ಲಿ ಸೂಕ್ತ ಬೆಲೆ ದೊರೆತು ರೈತರ ಬದುಕು ಹಸನಾಗಬೇಕಿದೆ. ದಶಕಗಳ ಕನಸಿನ ಭದ್ರಾ ಮೇಲ್ದಂಡೆ ಯೋಜನೆ ಸಕಾಲದಲ್ಲಿ ಸಾಕಾರಗೊಳ್ಳದೆ ರೈತರು ವಂಚಿತರಾಗುತ್ತಿರುವುದು ಬೇಸರದ ಸಂಗತಿ ಎಂದರು.

ಶಾಸಕ ಬಿ.ದೇವೇಂದ್ರಪ್ಪ ಮಾತನಾಡಿ, ಬರದ ನಾಡಿನಲ್ಲಿ ಮುಂಗಾರು ಮಳೆಯಿಂದ ಕೆರೆಕಟ್ಟೆಗಳು ತುಂಬಿವೆ.ಅಂತೆಯೇ ಸಿರಿಗೆರೆ ಶ್ರೀಗಳ ಸಂಕಲ್ಪದಿಂದ ತಾಲ್ಲೂಕಿಗೆ 57ಕೆರೆತುಂಬಿಸುವ ಯೋಜನೆಯಡಿ ತಾಲೂಕಿನ ಅತಿದೊಡ್ಡ ಕೆರೆಗಳಲ್ಲೊಂದಾಗಿರುವ ದಿವಂಗತ ಇಮಾಂ ಸಾಹೇಬರು ನಿರ್ಮಿಸಿದ ಗಡಿಮಾಕುಂಟೆ ಕೆರೆಗೆ ಕಳೆದ ರಾತ್ರಿ ಪೈಪ್ ಲೈನ್ ಮೂಲಕ ನೀರು ಹರಿದಿರುವುದು ರೈತರ ಮುಖದಲ್ಲಿ ಮಂದಹಾಸ ಮೂಡಿಸಿದೆ ಎಂದರು.

ಮಾಜಿ ಶಾಸಕ ಎಚ್.ಪಿ.ರಾಜೇಶ್ ಮಾತನಾಡಿ, ಮೂರು ಜನ ಮುಖ್ಯಮಂತ್ರಿಗಳು, ಮೂರು ಜನ ಶಾಸಕರ ಪಕ್ಷಾತೀತ ಕಾಳಜಿಯಿಂದ ಕಾಮಗಾರಿ ತ್ವರಿತಗತಿಯಲ್ಲಿ ಪೂರ್ಣಗೊಂಡು ತಾಲ್ಲೂಕಿನ 57 ಕೆರೆಗಳಿಗೆ ನೀರು ಬಂದಿವೆ. 2008 ರಿಂದ ಎಸ್.ಟಿ ಮೀಸಲು ಕ್ಷೇತ್ರವಾದ ನಂತರ ಅಭಿವೃದ್ಧಿಯತ್ತ ದಾಪುಗಾಲು ಇಟ್ಟಿದೆ. ಇದಕ್ಕೂ ಪೂರ್ವದಲ್ಲಿ ಅಷ್ಟೊಂದು ಅನುದಾನ ಬರುತ್ತಿರಲಿಲ್ಲ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಎಸ್.ವಿ.ರಾಮಚಂದ್ರ, ಮುಖಂಡರಾದ ಕೆ.ಪಿ.ಪಾಲಯ್ಯ, ಕೆ.ಬಿ.ಕಲ್ಲೇರುದ್ರೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ವಿ.ಎಸ್. ಎಸ್.ಎನ್ ಅಧ್ಯಕ್ಷ ಬಿಸ್ತುವಳ್ಳಿ ಬಾಬು, ಮುಖಂಡರಾದ ಸಿದ್ದೇಶ್, ಯು.ಜಿ.ಶಿವಕುಮಾರ್, ತಿಪ್ಪೇಸ್ವಾಮಿಗೌಡ, ಪ್ರಕಾಶ್ ರೆಡ್ಡಿ, ಪಲ್ಲಾಗಟ್ಟೆ ಶೇಖರಪ್ಪ, ಬಿ.ಮಹೇಶ್ವರಪ್ಪ, ಎಸ್.ಕೆ.ರಾಮರೆಡ್ಡಿ, ಎಂ.ಎಸ್ ಪಾಟೀಲ್, ಗುರುಸಿದ್ದನಗೌಡ, ಹರೀಶ್, ಹರೀಶ್, ಜಿ.ಬಸಪ್ಪ ಸೇರಿದಂತೆ ಇತರರು ಇದ್ದರು.

# ಅದ್ಭುತವಾದ ನಾಟಕ ಕಲೆಗೆ ಪ್ರೋತ್ಸಾಹ ಬೇಕು

## ಹಗೇದಿಬ್ಬ ವೃತ್ತದಲ್ಲಿ 'ಬಸ್ ಹಮಾಲ' ನಾಟಕ ಕಾರ್ಯಕ್ರಮದಲ್ಲಿ ವಾಸಿಂ ಚಾರ್ಲಿ



ದಾವಣಗೆರೆ, ಆ.28- ಮೊಬೈಲ್ ವಾಟ್ಸಾಪ್, ಫೇಸ್ಬುಕ್ ಮತ್ತು ಟಿ.ವಿ ಕಾರ್ಯಕ್ರಮಗಳಿಂದ ಅಂತರ ಕಾಪಾಡಿಕೊಂಡು ಅದ್ಭುತವಾದ ನಾಟಕ ಕಲೆಯನ್ನು ಪ್ರೋತ್ಸಾಹಿಸಬೇಕು ಎಂದು ಕಾಂಗ್ರೆಸ್ ಯುವ ಮುಖಂಡ ವಾಸಿಂ ಚಾರ್ಲಿ ಹೇಳಿದರು.

ನಗರದ ಹಗೇದಿಬ್ಬ ಸರ್ಕಲ್ ಬಯಲು ರಂಗಮಂಟಪದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶ್ರೀ ಸತ್ಯ ನಾರಾಯಣ ಕನ್ನಡ ಕಲಾಬಳಗ ಇವರ ಸಂಯುಕ್ತ ಆಶ್ರಯದಲ್ಲಿ, ಶ್ರೀ ಲಕ್ಷ್ಮೀ ಶಂಕರ ನಾಟಕ ಸಂಘದ ಕಲಾವಿದರು ಅಭಿನಯಿಸಿದ 'ಬಸ್ ಹಮಾಲ' ನಾಟಕ ಪ್ರದರ್ಶನ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಳೆದ ನಾಲ್ಕು ವರ್ಷಗಳಿಂದ ಇಲ್ಲಿ ನಾಟಕ ಅಭಿನಯಿಸಲಾಗುತ್ತಿದೆ. ಜಾತ್ರೆ ಮತ್ತಿತರೆ ಸಂದರ್ಭದಲ್ಲಿ ನಾಟಕಗಳು ನಿರಂತರವಾಗಿ ನಡೆಯಬೇಕು ಎಂಬ ಆಶಯವನ್ನು ಅವರು ವ್ಯಕ್ತಪಡಿಸಿದರು.

11ನೇ ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ಅಜಿತ್ ಆಲೂರು ನಾಟಕ ಕಾರ್ಯಕ್ರಮ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಕಲಾ ಪೋಷಕರಾದ ಆಲೂರು ಪ್ರಕಾಶಪ್ಪ, ಬೊಮ್ಮಜ್ಜಿ ಚನ್ನಬಸಪ್ಪ, ತೆಲಗಿ ಮಲ್ಲೇಶಪ್ಪ, ವಿಠೋಬರಾವ್, ಸ್ಫೂರ್ತಿ ಸಾಂಸ್ಕೃತಿಕ ಸಂಘದ ಅಧ್ಯಕ್ಷ ಎನ್.ಎಸ್.ರಾಜು, ಕಾಂಗ್ರೆಸ್ ಮುಖಂಡ ಟಿ.ಅಣ್ಣಪ್ಪ, ಗಾಂಧಿನಗರ ಪೊಲೀಸ್ ಠಾಣೆ ಹೆಚ್.ಸಿ ಅಂಬರೀಶ್ ಮತ್ತಿತರರು ಆಗಮಿಸಿದ್ದರು.

ಹಗೇದಿಬ್ಬ ಸರ್ಕಲ್ ಗೆಳೆಯರ ಬಳಗದ ಎ.ಗುಡ್ಡಪ್ಪ, ಪೈ.ಹನುಮಂತಪ್ಪ, ಬಿ.ಮಂಜುನಾಥ್, ರವಿಕುಮಾರ್, ತರಗಾರ ಹನುಮಂತಪ್ಪ, ಬಂದವ್ವರ ರೇವಣಪ್ಪ, ಎಸ್.ಪಿ ಕರೇಗೌಡ್ರು, ವೀರಣ್ಣ ಮತ್ತಿತರರು ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಸಮಾರೋಪ ಸಮಾರಂಭ

ಡಿಸಿಎಂ ಟೌನ್‌ಶಿಪ್ ವಾಸವಿ ಅಮ್ಮನವರ ದೇವಸ್ಥಾನದ ಬಳಿ ನಿರ್ಮಾಣಗೊಂಡಿರುವ ಶ್ರೀಮತಿ ಪ್ರೇಮ ಶ್ರೀ ರಾಜನಹಳ್ಳಿ ರಮಾನಂದ ಕಲ್ಯಾಣ ಮಂಟಪದ ಉದ್ಘಾಟನೆಯ ಸಮಾ ರೋಪ ಸಮಾರಂಭವು ಶ್ರೀ ವಾಸವಿ ಸೇವಾ ಸಂಘದ ವತಿಯಿಂದ ಇಂದು ಬೆಳಿಗ್ಗೆ 11.30 ಕ್ಕೆ ನಡೆಯಲಿದೆ.

ರಾಮಕೃಷ್ಣ ಮಿಷನ್‌ನ ಕಾರ್ಯದರ್ಶಿ ಶ್ರೀ ಸ್ವಾಮಿ ತ್ಯಾಗೀಶ್ವರಾನಂದಜೀ ಮಹಾರಾಜ್ ಸಾನ್ನಿಧ್ಯ ವಹಿಸುವರು.

ವಾಸವಿ ಸೇವಾ ಸಂಘದ ಅಧ್ಯಕ್ಷ ಕೆ.ಎಸ್. ರುದ್ರಶ್ರೇಷ್ಠಿ ಅಧ್ಯಕ್ಷತೆ ವಹಿಸಲಿದ್ದು, ಭೂ ಮತ್ತು ಗಣಿ ವಿಜ್ಞಾನ ಇಲಾಖೆ ನಿರ್ದೇಶಕ ಆರ್. ಗಿರೀಶ್ ಉದ್ಘಾಟಿಸುವರು. ವಿಶೇಷ ಆಹ್ವಾನಿತರಾಗಿ ವೈ. ತಿಪ್ಪೇಸ್ವಾಮಿ ಶ್ರೇಷ್ಠಿ, ವೈ. ಅನಂತ ಶ್ರೇಷ್ಠಿ, ಬಿ.ಹೆಚ್. ಕೃಷ್ಣಮೂರ್ತಿ ಶ್ರೇಷ್ಠಿ, ಎಸ್. ನಾಗರಾಜ್ ಶ್ರೇಷ್ಠಿ ಆಗಮಿಸುವರು.

ಸಂಜೆ 6.30 ರಿಂದ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

# ಕೆರೆಗಳಿಗೆ ನೀರು ಹರಿಸಲು ಒತ್ತಾಯಿಸಿ ನಾಳೆ ಜಾಗೃತಿ ಜಾಥಾ

ದಾವಣಗೆರೆ, ಆ. 28- ಸಾಸ್ವೇಹಳ್ಳಿ ಏತ ನೀರಾವರಿ ಯೋಜನೆಯಿಂದ ಚನ್ನಗಿರಿ ತಾಲ್ಲೂಕಿನ ನಿಗದಿತ ಕೆರೆಗಳಿಗೆ ನೀರು ಹರಿಸಬೇಕು ಎಂದು ಒತ್ತಾಯಿಸಿ ಇದೇ ದಿನಾಂಕ 30 ರಂದು ಶುಕ್ರವಾರ ಬೆಳಗ್ಗೆ 10.30ಕ್ಕೆ ಕೃಷಿ ಮಾರುಕಟ್ಟೆ ಆವರಣದಿಂದ ತಾಲೂಕಿನ ದಂಡಾಧಿಕಾರಿ ಕಚೇರಿವರೆಗೆ ಜಾಗೃತಿ ಜಾಥಾ ನಡೆಸಿ, ಮನವಿ ಸಲ್ಲಿಸ ಲಾಗುವುದು ಎಂದು ಖಡ್ಗ ಸ್ವಯಂ ಸೇವಕರ ಸಂಘದ ರಘು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸಾಸ್ವೇಹಳ್ಳಿ ನೀರಾವರಿ ಯೋಜನೆ 2016 ರಲ್ಲಿ ಪ್ರಾರಂಭವಾಗಿ ಕಳೆದ ಒಂದೂವರೆ ತಿಂಗಳ ಹಿಂದೆ ಮುಕ್ತಾಯ ವಾಗಿದೆ. ಚನ್ನಗಿರಿ ತಾಲ್ಲೂಕಿನ ನಿಗದಿತ ಕೆರೆ ಗಳಿಗೆ ನೀರು ಹರಿಸುವಲ್ಲಿ ವಿಳಂಬವಾಗಿದೆ. ಕೂಡಲೇ ನೀರು ಹರಿಸಬೇಕು ಎಂದು ಒತ್ತಾಯಿಸಿ ಹೋರಾಟ ನಡೆಸಲಾಗುವುದು ಎಂದು ತಿಳಿಸಿದರು.

ಒಂದು ವಾರದ ಗಡುವು ನೀಡ ಲಾಗುವುದು. ಒಂದೊಮ್ಮೆ ನೀರು ಹರಿಸದಿದ್ದ ಲ್ಲಿ ತಹಶೀಲ್ದಾರ್ ಕಚೇರಿಗೆ ಮುತ್ತಿಗೆ ಹಾಕ ಲಾಗುವುದು ಎಂದು ಎಚ್ಚರಿಸಿದರು.

ಸಂಘದ ಸದಸ್ಯ ಬಿ. ಚಂದ್ರಹಾಸ ಮಾತನಾಡಿ, ಸಾಸ್ವೇಹಳ್ಳಿ ಏತ ನೀರಾವರಿ ಯೋಜನೆ ಮೊದಲ ಹಂತದ ಪ್ರಕಾರ ಚನ್ನಗಿರಿ ಕಸಬಾ ಹೋಬಳಿಯ 76, ಸಂತೇಬೆನ್ನೂರು ಹೋಬಳಿಯ 26, ಹೊಳಲ್ಕೆರೆ ತಾಲ್ಲೂಕಿನ 26 ಕೆರೆಗಳಿಗೆ ನೀರು ಹರಿಸಬೇಕು. ಈಗ ಕಸಬಾ ಹೋಬಳಿಯಲ್ಲಿ 120, ಸಂತೇಬೆನ್ನೂ ರಿನ 60, ಹೊಳಲ್ಕೆರೆ ತಾಲೂಕಿನ 100, ಭದ್ರಾ ವತಿ, ಶಿವಮೊಗ್ಗದ ತಲಾ 5, ಹೊನ್ನಾಳಿಯ 6 ಕೆರೆಗಳಿಗೆ ನೀರು ಹರಿಸಬೇಕು. ಎಲ್ಲ ಕಾಮಗಾರಿ ಮುಕ್ತಾಯಗೊಂಡಿದ್ದರೂ ನೀರು ಹರಿಸುತ್ತಿಲ್ಲ. ತುಂಗಭದ್ರಾ ನದಿಯಿಂದ ಅ. 31 ರವರೆಗೆ ನೀರು ಹರಿಸಲು ಮಾತ್ರ ಅವಕಾಶ ಇದೆ. ಅದರೊಳಗೆ ನೀರು ಹರಿಸಲು ಜಿಲ್ಲಾಡಳಿತ ಸಂಬಂಧಿತರು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಶ್ರೀ ಕೇದಾರಲಿಂಗ ಶಿವಾಚಾರ್ಯ ಸ್ವಾಮೀಜಿ, ಸೈಯದ್ ನಯಾಜ್, ಜಿ. ಎಸ್. ನಾಗೇಂದ್ರಪ್ಪ ಇತರರು ಸುದ್ದಿಗೋಷ್ಠಿಯಲ್ಲಿದ್ದರು.

# ರಾಜ್ಯಪಾಲ ಹುದ್ದೆ ರದ್ದುಗೊಳಿಸುವಂತೆ ಸಿಪಿಐನಿಂದ ಇಂದು ಪ್ರತಿಭಟನೆ

ಚುನಾಯಿತ ಸರ್ಕಾರವನ್ನು ಅಸ್ಥಿರಗೊಳಿಸಲು ಯತ್ನಿಸುತ್ತಿರುವ ರಾಜ್ಯಪಾಲರ ನಡೆ ವಿರೋಧಿಸಿ ರಾಜ್ಯಪಾಲ ಹುದ್ದೆ ರದ್ದುಗೊಳಿಸುಂತೆ ದಾವಣಗೆರೆ ಉಪವಿಭಾಗಾಧಿಕಾರಿ ಕಚೇರಿ ಮೂಲಕ ರಾಷ್ಟ್ರಪತಿಯವರಿಗೆ ನಾಳೆ ಬೆಳಗ್ಗೆ 11-30 ಕ್ಕೆ ಸಿಪಿಐ ಕಚೇರಿಯಿಂದ ಹೊರಟು ಗಾಂಧಿ ಸರ್ಕಲ್ ಪಿಬಿ ರಸ್ತೆ ಮೂಲಕ ತೆರಳಿ ಮನವಿ ಸಲ್ಲಿಸಲಾಗುವುದು ಎಂದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಕಾಂ ಆವರಗೆರೆ ಚಂದ್ರು ತಿಳಿಸಿದ್ದಾರೆ.

# ಲೈಂಗಿಕ ದೌರ್ಜನ್ಯ ತಡೆ ಎಲ್ಲರ ಆದ್ಯ ಕರ್ತವ್ಯ

## ಹರಪನಹಳ್ಳಿ ವಕೀಲರ ಸಂಘದ ಅಧ್ಯಕ್ಷ ರಾಮನಗೌಡ ಪಾಟೀಲ್



ಹರಪನಹಳ್ಳಿ, ಆ. 28- ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆಯುವುದು ಎಲ್ಲರ ಆದ್ಯ ಕರ್ತವ್ಯ ಎಂದು ವಕೀಲರ ಸಂಘದ ಅಧ್ಯಕ್ಷ ರಾಮನಗೌಡ ಪಾಟೀಲ್ ಹೇಳಿದರು.

ತಾಲ್ಲೂಕಿನ ಬೆಣ್ಣೆಹಳ್ಳಿ ಗ್ರಾಮದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಮತ್ತು ಕೆ.ಬಿ.ಜಿ. ಪ್ರೌಢಶಾಲೆ ಸಂಯುಕ್ತಾಶ್ರಯದಲ್ಲಿ ಜರುಗಿದ 'ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯಿದೆ- 2012 ಹಾಗೂ ಬಾಲ್ಯವಿವಾಹ ನಿಷೇಧ ಕಾಯಿದೆ- 2006' ಕುರಿತು ಹಮ್ಮಿಕೊಳ್ಳಲಾಗಿದ್ದ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು ವಿದ್ಯಾರ್ಥಿಗಳು ಬಾಲ್ಯವಿವಾಹವಾಗಿ ಮುಂದಿನ ಭವಿಷ್ಯವನ್ನು ಹಾಳು ಮಾಡಿಕೊಳ್ಳುವುದಕ್ಕಿಂತ ಕಾನೂನಿನ ಚೌಕಟ್ಟಿನಲ್ಲಿ ವಿವಾಹ ಆಗುವುದು ಉತ್ತಮ. ಮಹಿಳೆ ಯರೊಂದಿಗೆ ಅಸಭ್ಯವಾಗಿ ವರ್ತಿಸುವುದು, ಮಾತನಾಡುವುದು ಮತ್ತು ನೋಡುವುದರಿಂದಲೂ ಸಹ ಲೈಂಗಿಕ ಅಪರಾಧವಾಗುತ್ತದೆ ಎಂದು ತಿಳಿ ಹೇಳಿದರು.

ಪ್ಯಾನಲ್ ವಕೀಲ ಎಂ.ಮೃತ್ಯುಂಜಯ ಮಾತನಾಡಿ, 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಲೈಂಗಿಕ ದೌರ್ಜನ್ಯದಿಂದ ರಕ್ಷಿಸಲು ಕಾನೂನಿನಲ್ಲಿ ಅನೇಕ ಕಾಯ್ದೆಗ ಳಿವೆ. ಸ್ವಾತಂತ್ರ ಪೂರ್ವದಿಂದಲೂ ಇಂತಹ ಕಾನೂನು ಜಾರಿಯಲ್ಲಿವೆ. ಆದರೂ ಅಂದಿನಿಂದ ಇಂದಿನವರೆಗೂ ಮಕ್ಕಳ ಮೇಲೆ ಲೈಂಗಿಕ ಚಟುವಟಿಕೆ ನಡೆಯುತ್ತಲೇ ಇವೆ. ಇಂತಹ ಕೃತ್ಯವನ್ನು ತಡೆಗಟ್ಟಲು ಸಂವಿಧಾನದಿಂದ ಮಾತ್ರ ಸಾಧ್ಯ ಎಂದರು.

ಪ್ಯಾನಲ್ ವಕೀಲ ಕೆ.ಸಣ್ಣನಿಂಗನಗೌಡ ಮಾತನಾಡಿ, ವಿದ್ಯಾರ್ಥಿಗಳು ಲೈಂಗಿಕ ದೌರ್ಜನ್ಯ ನಡೆದಾಗ ಅಂತಹ ಘಟನೆಗೆ ಕಾನೂನು ಚೌಕಟ್ಟಿನಲ್ಲಿ ಹೋರಾಟ ಮಾಡುವುದು ಎಲ್ಲರ ಆದ್ಯ ಕರ್ತವ್ಯವಾಗಿದೆ. ಕಾನೂನಿನ ಚೌಕಟ್ಟಿನಲ್ಲಿ ನಡೆದಾಗ ಮಾತ್ರ ಉತ್ತಮ ಪ್ರಜೆಗಳಾಗಿ ಬಾಳುವುದಕ್ಕೆ ಸಾಧ್ಯವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಕೆ.ಬಿ.ಜಿ.ಪ್ರೌಢಶಾಲೆಯ ಅಧ್ಯಕ್ಷ ಸಿ.ಸಿದ್ದಪ್ಪ, ಮುಖ್ಯಶಿಕ್ಷಕ ಶಂಕರ್ ಮೂರ್ತಿ, ಮಾತನಾಡಿದರು. ವಕೀಲರಾದ ಬಿ. ತಿಪ್ಪೇಶ್ ಮತ್ತು ನಾಗರಾಜ್ ನಾಯ್ಕ ಸಿ., ಬಸವರಾಜ್ ಮತ್ತಿತರರು ಹಾಜರಿದ್ದರು.

# ಒಳಮೀಸಲು ಜಾರಿಗೆ ಆಗ್ರಹಿಸಿ ಮುಖ್ಯಮಂತ್ರಿ ಭೇಟಿ ಮಾಡಿದ ಮಾದಿಗ ಮುಖಂಡರ ನಿಯೋಗ



ದಾವಣಗೆರೆ, ಆ.28- ಸುಪ್ರೀಂ ಕೋರ್ಟ್ ತೀರ್ಪಿನ ಅನ್ವಯ ಒಳಮೀಸಲಾತಿ ಜಾರಿಗೆ ತುರ್ತು ಕ್ರಮಕೈಗೊಳ್ಳುವಂತೆ ಆಗ್ರಹಿಸಿ ಸಮುದಾಯದ ಮುಖಂಡರು ಮತ್ತು ಸಚಿವರಾದ ಕೆ.ಎಚ್.ಮುನಿಯಪ್ಪ, ಆರ್.ಬಿ. ತಿಮ್ಮಾಪೂರ್ ನೇತೃತ್ವದಲ್ಲಿ ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಯಿತು

ಮನವಿ ಪತ್ರವನ್ನು ಓದಿದ ಮಾಜಿ ಸಚಿವ ಎಚ್. ಆಂಜನೇಯ, ಮಾದಿಗ ಸಮುದಾಯಕ್ಕೆ ನ್ಯಾಯವಾಗಿ ದೊರಕಬೇಕಾಗಿದ್ದ ಮೀಸಲಾತಿ ಪ್ರಮಾಣ ನಿರೀಕ್ಷೆ ಮಟ್ಟದಲ್ಲಿ ದೊರೆತಿಲ್ಲ. ನಿರಂತರ ಹೋರಾಟದ ಫಲವಾಗಿ ಒಳ ಮೀಸಲಾತಿ ವರ್ಗೀಕರಣಕ್ಕಾಗಿ ಸುಪ್ರೀಂ ಕೋರ್ಟ್ ಅಸ್ತು ಎಂದಿದೆ. ಜೊತೆಗೆ ಒಳ ಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ ಎಂದು ಐತಿಹಾಸಿಕ ತೀರ್ಪನ್ನು ನೀಡಿದೆ.

ಈಗಾಗಲೇ ತೆಲಂಗಾಣ ಮತ್ತು ಆಂಧ್ರ ಪ್ರದೇಶ ಸರ್ಕಾರಗಳು ಒಳ ಮೀಸಲಾತಿ ವರ್ಗೀಕರಣಕ್ಕೆ ಮುಂದಾಗಿವೆ. ಅದೇ ರೀತಿ ತಾವೂ ಕೂಡ ಸುಪ್ರೀಂಕೋರ್ಟ್ ತೀರ್ಪನ್ನು ಸ್ವಾಗತಿಸಿದ್ದು, ಶೀಘ್ರ ಜಾರಿಗೊಳಿಸುವ ಮೂಲಕ ಸಮುದಾಯದ ಸಮಗ್ರ ಪ್ರಗತಿಗೆ ಮುಂದಾಗಬೇಕೆಂದು ಕೋರಿದರು. ಸುಪ್ರೀಂ ತೀರ್ಪು ಬಂದ ತಕ್ಷಣ ತೆಲಂಗಾಣ, ಆಂಧ್ರ, ಪಂಜಾಬ್, ಹರಿಯಾಣ ಮತ್ತಿತರೆ ರಾಜ್ಯಗಳ ಸರ್ಕಾರಗಳೂ ಒಳ ಮೀಸಲಾತಿ ಜಾರಿಗೆ ಆಗುವವರೆಗೂ ಖಾಲಿಯಿರುವ ಹುದ್ದೆಗಳಿಗೆ ಕರೆದಿರುವ ಪ್ರಕ್ರಿಯೆಗಳಿಗೆ ತಡೆ ಹಿಡಿದಿದ್ದಾರೆ. ಅದೇ ಮಾರ್ಗವನ್ನು ರಾಜ್ಯದಲ್ಲೂ ಅನುಸರಿಸಬೇಕು ಎಂದು ಕೋರಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ನೊಂದ, ಅಸ್ಪೃಶ್ಯ ಸಮಾಜದ ನೋವಿನ ಅರಿವು ನನಗಿದೆ. ಒಳಮೀಸಲು ವಿಷಯದಲ್ಲಿ ಸುಪ್ರೀಂಕೋರ್ಟ್ ತೀರ್ಪು ಪ್ರಕಟಿಸಿದಂತೆ ಅದನ್ನು ಸ್ವಾಗತಿಸಿದ್ದೇನೆ. ಅದರರ್ಥ ನಾನು ನೊಂದ ಜನರ ಪರ ಎಂದರ್ಥ ಎನ್ನುವ ಮೂಲಕ ಒಳಮೀಸಲು ಜಾರಿಗೊಳಿಸುವ ಅಭಯ ನೀಡಿದರು.

ಶಾಸಕರಾದ ಮಾಯಕೊಂಡದ ಕೆ.ಎಸ್. ಬಸವಂತಪ್ಪ, ನೆಲಮಂಗಲದ ಶ್ರೀನಿವಾಸ್, ಮಾಜಿ ಸಚಿವ ಎಂ.ಶಿವಣ್ಣ , ವಿಧಾನ ಪರಿಷತ್ತು ಸದಸ್ಯ ಡಾ.ಡಿ. ತಿಮ್ಮಯ್ಯ ಮುಂತಾದವರು ನಿಯೋಗದಲ್ಲಿದ್ದರು.

## ಓದುಗರ ಪತ್ರ

### ತಹಶೀಲ್ದಾರ್ ಕಚೇರಿಯ ಕಟ್ಟಡ ಅಪಾಯದಲ್ಲಿ?



ಮಾನ್ಯರೇ,

ದಾವಣಗೆರೆ ನಗರದಲ್ಲಿ ಇರುವ ತಹಶೀಲ್ದಾರ್ ಕಚೇರಿಯ ಇಡೀ ಕಟ್ಟಡವನ್ನು ಕಂಡಾಗ ತುಂಬಾ ಭಯವನ್ನುಂಟು ಮಾಡುತ್ತದೆ. ಈ ಕಟ್ಟಡವು ಶಿಥಿಲಗೊಂಡು ಇದರ ಕೆಲವು ಭಾಗಗಳು ಯಾವುದೇ ಕ್ಷಣದಲ್ಲಿ ಬಿದ್ದರೂ ಅಚ್ಚರಿ ಇಲ್ಲ ಎಂಬಂತೆ ಇವೆ.


ನಿತ್ಯ ಸಾವಿರಾರು ಜನರು ತಮ್ಮ ಅಹವಾಲುಗಳನ್ನು ಹೇಳಿಕೊಳ್ಳಲು, ದಾಖಲೆಗಳನ್ನು ಪಡೆದುಕೊಳ್ಳಲು ಬರುತ್ತಿರುತ್ತಾರೆ. ಮೊದಲೇ ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿ ಕಾಣಸಿಗುವುದು ಹಳ್ಳಿಯ ಜನಗಳೇ. ಅವರವರ ಚಿಂತೆಗಳಲ್ಲಿ ಬಂದಿರುವಾಗ ಈ ಕಟ್ಟಡವು ನಕಾರಾತ್ಮಕ ಅಂಶವನ್ನು ಉಣಬಡಿಸುತ್ತದೆ.

ಈಗಾಗಲೇ ನಗರದ ಪ್ರಧಾನ ಅಂಚೆ ಕಚೇರಿಯ ಮುಂದೆ ಹೊಸದಾಗಿ ನಿರ್ಮಾಣಗೊಂಡ ಕಟ್ಟಡಕ್ಕೆ ತಹಶೀಲ್ದಾರ್ ಕಚೇರಿಯು ವರ್ಗಾವಣೆಗೊಳ್ಳಲಿದೆ ಎಂಬ ಸುದ್ದಿಯು ವರ್ಷದಿಂದ ಕೇಳಿ ಬರುತ್ತಿದೆ. ಆದರೆ ಇಂದಿಗೂ ವರ್ಗಾವಣೆಗೊಂಡಿಲ್ಲ. ಯಾರ ಅನುಮತಿಗಾಗಿ ಕಾಯುತ್ತಿದ್ದಾರೆ? ಎಂದು ಸಾರ್ವಜನಿಕರು ಪ್ರಶ್ನೆ ಮಾಡಿಕೊಳ್ಳುತ್ತಿದ್ದಾರೆ. ಸದ್ಯ ಈಗ ಇರುವ ಕಟ್ಟಡವು ಅಪಾಯದ ಮುನ್ಸೂಚನೆ ನೀಡಿದೆ. ಯಾರಿಗೂ ಅನಾಹುತ ಆಗದಂತೆ, ಅಪಾಯ ಆಗದೇ ಇರುವ ಹಾಗೇ ಶೀಘ್ರವಾಗಿ ವರ್ಗಾವಣೆಯಾಗಲಿ ಎಂದು ನಗರದ ಸಾರ್ವಜನಿಕರ ಪರವಾಗಿ ವಿನಂತಿ.

- ವೈ. ವಾದಿರಾಜ ಭಟ್, ವಕೀಲರು, ದಾವಣಗೆರೆ.

## ನೇತ್ರದಾನ ಪಾಕ್ಷಿಕ

### ಆಗಸ್ಟ್ 25 ರಿಂದ ಸೆಪ್ಟೆಂಬರ್ 8 ನೇ ತಾರೀಖು



ಕೇಳಿ ಮನುಜರೇ ನಿಮ್ಮವರ ಸಾವ ನಂತರ ಕಣ್ಣ ಮಣ್ಣ ಮಾಡಬೇಡಿ
ಎರಡು ಕಣ್ಣು ನಾಲ್ಕು ಜನರಿಗೆ ದೃಷ್ಟಿ ನೀಡುವ ಭಾಗ್ಯಜ್ಯೋತಿ ತಿಳಿಯಿರಿ

ಸತ್ತ ಮನುಷ್ಯನಲಿ ನೇತ್ರ ದೀಪಗಳ ಹಾಳಾಗಲು ಬಿಡದಿರಿ ,
ಮುಂದಿನ ಜನುಮದಿ ಅಂಧನಾಗುವ ಮೂಢ ಕಥೆಯ ಭಯ ಬಿಟ್ಟು ಬಿಡಿ

ನಮ್ಮ ಪ್ರೀತಿ ಪಾತ್ರರ ಮರಣ ಸಹಿಸಲು ಬಲು ಅಸಾಧ್ಯವು, ಆದರೂ
ಮತ್ತೊಬ್ಬರ ಕತ್ತಲ ಬದುಕಿಗೆ ಬೆಳಕ ಕೊಟ್ಟೆವೆಂದು ತುಸು ಸಂತಸ ಪಡಿ

ಮರಣದ ನಾಲ್ಕೈದು ತಾಸೊಳಗೆ ನೇತ್ರ ಭಂಡಾರವ ಸಂಪರ್ಕಿಸಿ
ವೈದ್ಯರು ಬರುವವರೆಗು ಕಣ್ಣ ಮುಚ್ಚಿ ಮೇಲೆ ಒದ್ದೆ ಬಟ್ಟೆ ಹಾಕಿ

ಕೋಣೆಯ ಪಂಕ ನಿಲ್ಲಿಸಿ , ಮೃತ ವ್ಯಕ್ತಿಯ ತಲೆಯ ಸ್ವಲ್ಪ ಮೇಲೆ ಮಾಡಿ
ಮೃತ ದೇಹದಿಂದ ಕಣ್ಣುಗಳ ತೆಗೆಯಲು ಬರೀ ಹಲವು ಹತ್ತು ನಿಮಿಷಗಳು ಸ್ವಾಮಿ

ಯಾವ ರೋಗವಿದ್ದರೂ , ಕೆಲ ವಿರಳ ರೋಗಗಳ ಹೊರತು
ಎಲ್ಲರೂ ನೇತ್ರದಾನ ಮಾಡಬಹುದು
ದಾನಗಳಲೆಲ್ಲಾ ಶ್ರೇಷ್ಠದಾನ ಇದು ಎಲ್ಲೆಡೆಯೂ ಸಂಪೂರ್ಣ ಉಚಿತವು

ಮೃತ ವ್ಯಕ್ತಿ ಇರುವ ಕಡೆ ನೇತ್ರ ಸಂಗ್ರಹ ಕಾರ್ಯ ನಡೆಯುವುದು
ಮೃತರ ಕಾರ್ಯಾದಿ ಅಡ್ಡಿ , ಅವರ ಮುಖ ವಿಕಾರದ ಚಿಂತೆ ಬೇಡವು

ದೇಶದಿ ದ್ವಿದಶ ಲಕ್ಷ ಜನ ನೇತ್ರ ದಾನಕ್ಕಾಗಿ ಕಾತರದಿ ಕಾಯುತ್ತಿರುವರು
ಅಂಥ ಅತ್ಯಮೂಲ್ಯ ರತ್ನಗಳ ಸುಡದೇ ಅವರ ಆಕಾಂಕ್ಷೆಗೆ ಆಸರೆಯಾಗಿರಿ

- ಡಾ. ಉಮೇಶ ಜಿ.ಎಸ್.


ಆರೋಗ್ಯ ಮೇಳ-24
ಆರೋಗ್ಯದ ಅರಿವೇ ಆಯುರ್ವೇದ

ಮೇಳದ ವಿಶೇಷತೆ

ಉಚಿತ
ಸಕ್ಕರೆ ಕಾಯಿಲೆ ಪರೀಕ್ಷೆ
ಮೂಳೆ ಸಾಂದ್ರತೆ
ಪರೀಕ್ಷೆ ಇರುತ್ತದೆ.

* ತಜ್ಞ ಆಯುರ್ವೇದ ವೈದ್ಯರಿಂದ ಉಚಿತ ತಪಾಸಣೆ ಮತ್ತು ಆಪ್ತ ಸಮಾಲೋಚನೆ.
* 30 ಕ್ಕೂ ಹೆಚ್ಚು ಆಯುರ್ವೇದ ಔಷಧಿ ಮಳಿಗೆಗಳು.
* ಎಲ್ಲಾ ತರಹದ ಆಯುರ್ವೇದ ಔಷಧಿಗಳ ಮೇಲೆ ಭಾರೀ ರಿಯಾಯಿತಿ.
* ಸಿರಿಧಾನ್ಯ, ವಿವಿಧ ಆಹಾರ ಧಾನ್ಯಗಳ ಪ್ರದರ್ಶನ ಮತ್ತು ಮಾರಾಟ.
* ಆಯುರ್ವೇದ ವೈದ್ಯರಿಂದ ಗೋಷ್ಠಿ.

ಇದೇ ಮೊದಲ ಬಾರಿಗೆ ಕರ್ನಾಟಕದ ಮಧ್ಯ ಭಾಗದಲ್ಲಿ ಆಯುರ್ವೇದ ಔಷಧಿಗಳ ಪ್ರದರ್ಶನ ಮತ್ತು ಭಾರತೀಯ ವೇದ ಸಂಸ್ಕೃತಿಯನ್ನು ಎಲ್ಲಾ ವರ್ಗದ ಜನರಿಗೆ ತಲುಪಿಸುವ ಪ್ರಯತ್ನ.

ದಿನಾಂಕ : 31-08-2024 ಮತ್ತು 1-9-2024
ಸಮಯ : ಬೆಳಿಗ್ಗೆ 9-00 ರಿಂದ ಸಂಜೆ 6-00 ರವರೆಗೆ
ಸ್ಥಳ : ಶ್ರೀ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂಟಪ, ಹದಡಿ ರಸ್ತೆ, ದಾವಣಗೆರೆ

ತಪಾಸಣೆಗೆ ಬರುವವರು ಮೊದಲೇ ಹೆಸರು ನೋಂದಾಯಿಸಿರಬೇಕು :

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
ಶ್ರೀ ಧನ್ವಂತರಿ ಆಯುರ್ವೇದ ಔಷಧ ಪ್ರತಿನಿಧಿಗಳ ಸಂಘ (ರಿ.) ದಾವಣಗೆರೆ.
ಮೊ. : 7892780466, 9008731327, 6364321664

ಸರ್ವರಿಗೂ ಸುಸ್ವಾಗತ

## ಶ್ರೀ ಕೃಷ್ಣ ಜನ್ಮಾಷ್ಟಮಿಯಂದು ಕೃಷ್ಣ-ರಾಧೆಯರಂತೆ ಮುದ್ದು ಪುಟಾಣಿಗಳು.....



ಕೈರವಿ
ತಂದೆ : ಪವನ್ ಕುಮಾರ್
ತಾಯಿ : ಪಲ್ಲವಿ



ತನಿಷ್ಕ
ತಂದೆ : ಪವನ್ ಕುಮಾರ್
ತಾಯಿ : ಪಲ್ಲವಿ




ಆರ್ಯನ್
ತಂದೆ : ಸಂಕೇತ್ ದೊಡಮನಿ
ತಾಯಿ : ಜ್ಯೋತಿ ಸಂಕೇತ್




ಕೌಶಿಕ್ -
ಗುಂಡಗತ್ತಿ



ಲಿಖಿತ್
ತಂದೆ : ಮಂಜುನಾಥ್
ತಾಯಿ : ಸೌಮ್ಯ



ದಿಯ ಎಸ್.
ತಂದೆ : ಶಿವಕುಮಾರ್ ಎಸ್.
ತಾಯಿ : ಪೂಜಾ ಡಿ.



ಸಾತ್ವಿಕ್ ರಾಮ್
ತಂದೆ : ಪ್ರಮೋದ್ ಎಚ್ ಸಿ
ತಾಯಿ : ದಾಕ್ಷಾಯಿಣಿ



ಚಿರು
ತಂದೆ : ಚೇತನ
ತಾಯಿ : ಕವಿತ

## ಮಾಜಿ ಸಿಎಂ ಎಸ್.ಎಂ. ಕೃಷ್ಣ ಆರೋಗ್ಯ ಸುಧಾರಣೆ



ಬೆಂಗಳೂರು, ಆ.28 - ಶ್ವಾಸಕೋಶ ಸಮಸ್ಯೆಯಿಂದ ಆಸ್ಪತ್ರೆಗೆ ದಾಖಲಾಗಿದ್ದ ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರದ ಮಾಜಿ ಸಚಿವ ಎಸ್.ಎಂ.ಕೃಷ್ಣ ಅವರ ಆರೋಗ್ಯ ಸುಧಾರಿಸಿದೆ.

ವೈದ್ಯರ ಸಲಹೆಯಂತೆ ಆಸ್ಪತ್ರೆಯಿಂದ ಬಿಡುಗಡೆಯಾಗಿ ಮರಳಿ ಮನೆಗೆ ಆಗಮಿಸಿದ್ದಾರೆ ಎಂದು ಶಾಸಕ ದಿನೇಶ್ ಗೂಳಿಗೌಡ ಅವರು ತಿಳಿಸಿದ್ದಾರೆ.

ಆರೋಗ್ಯದಲ್ಲಿ ಸುಧಾರಣೆ ಕಂಡುಬಂದಿದ್ದು ಶ್ವಾಸಕೋಶದ ಸೋಂಕು ನಿವಾರಣೆ ಆದ ಹಿನ್ನೆಲೆಯಲ್ಲಿ ಆಸ್ಪತ್ರೆಯಿಂದ ಬಿಡುಗಡೆಗೊಳಿಸಿರುವುದಾಗಿ ಮಣಿಪಾಲ ಆಸ್ಪತ್ರೆ ವೈದ್ಯರು ತಿಳಿಸಿದ್ದಾರೆ.

ಆದರೆ, ಎರಡು ವಾರಗಳ ಕಾಲ ಮನೆಯಲ್ಲಿ ವಿಶ್ರಾಂತಿ ಪಡೆಯುವಂತೆ ವೈದ್ಯರು ಸಲಹೆ ನೀಡಿದ್ದು ಯಾವುದೇ ಸಾರ್ವಜನಿಕ ಭೇಟಿ ಮತ್ತು ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳದಂತೆ ವೈದ್ಯರು ಸೂಚಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಅವರ ಹಿತೈಷಿಗಳು, ಅಭಿಮಾನಿಗಳು ಕೆಲವು ದಿನಗಳ ಕಾಲ ಅವರನ್ನು ಭೇಟಿ ಮಾಡದಂತೆ ಕುಟುಂಬ ವರ್ಗದವರಿಗೆ ವೈದ್ಯರು ಸಲಹೆ ಮಾಡಿದ್ದಾರೆ.

# ಅವಕಾಶಕ್ಕೆ ತಕ್ಕಂತೆ ಮಾರ್ಗದರ್ಶನ ಅಗತ್ಯ

### ಶ್ರೀಮತಿ ಪ್ರೇಮಾ ರಾಜನಹಳ್ಳಿ ಶ್ರೀ ರಮಾನಂದ ಕಲ್ಯಾಣ ಮಂಟಪದ ಉದ್ಘಾಟನೆಯಲ್ಲಿ ಡಾ.ಜೆ.ವಿ. ನಂದನಕುಮಾರ್



ದಾವಣಗೆರೆ, ಆ. 28- ಹಿಂದೆ ಶೆಟ್ರು ಹುಡುಗ ಎಸ್ಸೆಸ್ಸೆಲ್ಸಿ ಪಾಸ್ ಆಗುವುದೇ ದೊಡ್ಡದು ಎಂಬ ಕಾಲ ಇತ್ತು. ಆದರೆ ಈಗ ಆರ್ಯ ವೈಶ್ಯ ಸಮಾಜದ ಮಕ್ಕಳು ಹೆಚ್ಚು ಪ್ರತಿಭಾನ್ವಿತರಾಗಿದ್ದಾರೆ. ಅವಕಾಶಗಳೂ ಹೆಚ್ಚಾಗಿವೆ ಎಂದು ರಾಜ್ಯ ಸರ್ಕಾರದ ವಿಶ್ರಾಂತ ಅಪರ ನಿರ್ದೇಶಕ ಡಾ.ಜೆ.ವಿ. ನಂದನಕುಮಾರ್ ಹೇಳಿದರು.

ಶ್ರೀ ವಾಸವಿ ಸೇವಾ ಸಂಘದಿಂದ ನಗರದ ಡಿಸಿಎಂ ಟೌನ್‌ಶಿಪ್‌ನಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ ಶ್ರೀಮತಿ ಪ್ರೇಮಾ ರಾಜನಹಳ್ಳಿ ಶ್ರೀ ರಾಮಾನಂದ ಕಲ್ಯಾಣ ಮಂಟಪದ ಉದ್ಘಾಟನಾ ಸಮಾರಂಭಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.

ಸಮಾಜದ ವಿದ್ಯಾರ್ಥಿಗಳಿಗೆ ಅವಕಾಶಗಳಿಗೆ ತಕ್ಕಂತೆ ಮಾರ್ಗದರ್ಶನ ಅಗತ್ಯವಿದೆ. ಸೂಕ್ತ ಮಾರ್ಗದರ್ಶನ ಸಿಕ್ಕರೆ ಹೊರಗಿನ ಸವಾಲುಗಳನ್ನು ಮೆಟ್ಟಿನಿಂತು ಉತ್ತಮ ಸಾಧನೆ ಮಾಡುತ್ತಾರೆ ಎಂದರು.

ಹಿಂದಿನಿಂದಲೂ ಆರ್ಯವೈಶ್ಯ ಸಮಾಜ ಜನರ ನಂಬಿಕೆಗೆ ಪಾತ್ರವಾಗಿದೆ. ಸಮಾಜ ಸೇವೆ ಮಾಡುವುದು ಸುಲಭವಲ್ಲ. ದಾನಿಗಳಿದ್ದರೂ ಮಾಡುವ ಕೈಗಳ ಅಗತ್ಯವಿದೆ. ವಾಸವಿ ಸಂಘವು ಅನೇಕ ಸಮಾಜ ಸೇವಾ ಕಾರ್ಯಗಳನ್ನು ಮಾಡುತ್ತಿರುವುದು ಶ್ಲಾಘನೀಯ ಎಂದರು.

ಸರ್ಕಾರದಿಂದ, ಆರ್ಯವೈಶ್ಯ ಮಂಡಳಿ ಹಾಗೂ ಮಹಾಸಭಾದಿಂದ ಸಿಗುವ ಸೌಲಭ್ಯಗಳ ಬಗ್ಗೆ ಸಾಮಾಜಿಕ ಜಾಲ ತಾಣಗಳಲ್ಲಿ ತಿಳಿಸಲಾಗುತ್ತದೆ. ಇದನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ಬಾಪೂಜಿ ವಿದ್ಯಾಸಂಸ್ಥೆ ಅಧ್ಯಕ್ಷ ರಾಜನಹಳ್ಳಿ ರಮಾನಂದ ಅವರು ಸಮಾರಂಭ ಉದ್ಘಾಟಿಸಿ ಶುಭ ಹಾರೈಸಿದರು. ಶ್ರೀ ವಾಸವಿ ಸೇವಾ ಸಂಘದ ಗೌರವಾಧ್ಯಕ್ಷ ಡಾ.ಬಿ.ಎಸ್. ನಾಗಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು.

ಶ್ರೀಮತಿ ಪ್ರೇಮಾ ರಮಾನಂದ, ಚನ್ನಗಿರಿ ಸತ್ಯನಾರಾಯಣ ಶೆಟ್ರು, ಕೆ.ಎಲ್. ರವಿಂದ್ರನಾಥ್ ಶ್ರೇಷ್ಠಿ, ಹೆಚ್.ಆರ್. ಕಾಶಿವಿಶ್ವನಾಥ ಶ್ರೇಷ್ಠಿ, ಎಲ್.ಜೆ. ರಾಧಾಕೃಷ್ಣ ಶ್ರೇಷ್ಠಿ, ಕೆ.ಎಸ್. ರುದ್ರಶ್ರೇಷ್ಠಿ ಇತರರು ಉಪಸ್ಥಿತರಿದ್ದರು. ಸಮಾರಂಭಕ್ಕೂ ಮುನ್ನ ಹೋಮ, ಸತ್ಯನಾರಾಯಣ ಸ್ವಾಮಿ ಪೂಜೆ ಸೇರಿದಂತೆ ಧಾರ್ಮಿಕ ಕಾರ್ಯಗಳು ನಡೆದವು.


## ತೃತೀಯ ವರ್ಷದ ಪುಣ್ಯಸ್ಮರಣೆ



ನಿಧನ : 29.08.2021

**ದಿ. ಶ್ರೀ ಲಿಂಗದಕಲ್ಲುಗುಡಿ ಪೈಲ್ವಾನ್ ಎನ್.ಸಿ. ನಾಗಪ್ಪ**

(ಲಿಂಗದಕಲ್ಲುಗುಡಿ ದಿ. ಪೈಲ್ವಾನ್ ಚನ್ನಬಸಪ್ಪನವರ ಹಿರಿಯ ಪುತ್ರರು,
ಶ್ರೀ ಲಿಂಗೇಶ್ವರ ಸ್ವಾಮಿ ದೇವಸ್ಥಾನ ಸಮಿತಿ ಸದಸ್ಯರು ಮತ್ತು ವರ್ತಕರು
ಶ್ರೀ ಶಿವಕುಮಾರ ಸ್ವಾಮಿ ಬಡಾವಣೆ, ದಾವಣಗೆರೆ.)

ಗುರುಗಳ ಸೇವೆ, ಧಾರ್ಮಿಕ ಸೇವೆ, ಸರಳ ಜೀವನ, ನಿರಂತರ ಪರಿಶ್ರಮ,
ನೇರ ನಡೆ - ನುಡಿ, ನಾನು ಎನ್ನದೇ ನನ್ನವರು ಎಂದು ನಂಬಿ ಬದುಕಿದ;
ನುಡಿದಂತೆ ನಡೆದ ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು.

'ನಿಮ್ಮ ಆದರ್ಶ ಪ್ರಾಯ ಜೀವನವೇ ನಮ್ಮ ಜೀವನದ ದಾರಿಯಾಗಿದೆ'

ಧರ್ಮಪತ್ನಿ : ಲಿಂಗದಕಲ್ಲುಗುಡಿ ಶ್ರೀಮತಿ ಕಮಲಮ್ಮ ಪೈಲ್ವಾನ್
ಎನ್.ಸಿ. ನಾಗಪ್ಪ ಮತ್ತು ಕುಟುಂಬದವರು

'ಅಪ್ಪ ಅಂದರೆ ಅಭಿಮಾನ ; ಅಪ್ಪ ಅಂದರೆ ಆಗಸದಷ್ಟು ಭರವಸೆ ; ಅಪ್ಪ ಅಂದರೆ ಧೈರ್ಯ'


## ಮುಂದುವರಿದ ವೈದ್ಯ ವಿದ್ಯಾರ್ಥಿಗಳ ಮುಷ್ಕರ



ದಾವಣಗೆ, ಆ.28- ರಕ್ಷಣೆ, ವಿದ್ಯಾರ್ಥಿ ವೇತನ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗಾಗಿ ಬಾಪೂಜಿ ಆಸ್ಪತ್ರೆ ಮುಂಭಾಗ ನಡೆಯುತ್ತಿರುವ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳ ಪ್ರತಿಭಟನೆ ಬುಧವಾರವೂ ಮುಂದುವರೆಯಿತು.

## ಇಂದು ಶತಮಾನೋತ್ಸವ ಸಂಭ್ರಮ

ದಾವಣಗೆರೆ ನಗರದ ಹಳೇಪೇಟೆಯಲ್ಲಿರುವ ಚಿಂದೋಡಿ ಎಸ್. ವೀರಣ್ಣ ಮತ್ತು ಚಿಂದೋಡಿ ಕುಟುಂಬದವರ ನಿವಾಸದಲ್ಲಿ ಇಂದು ಬೆಳಗ್ಗೆ 10.30ಕ್ಕೆ ಅಣ್ಣಿಗೇರಿ ಚಿಂದೋಡಿ ಮನೆತನದ ದಾಸೋಹ ಪರಂಪರೆಯ ಶತಮಾನೋತ್ಸವ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮದಲ್ಲಿ ಆವರಗೊಳ್ಳದ ಓಂಕಾರ ಶಿವಾಚಾರ್ಯ ಶ್ರೀಗಳು, ವಿರಕ್ತ ಮಠದ ಬಸವ ಪ್ರಭು ಶ್ರೀಗಳು, ಉರುಗಾದ್ರಿ ಸಂಸ್ಥಾನ ಮಠದ ಕರಿಬಸವ ರಾಜೇಂದ್ರ ಶ್ರೀಗಳು ಸಾನ್ನಿಧ್ಯ ವಹಿಸಲಿದ್ದಾರೆ.

## ನಗರದಲ್ಲಿ ಇಂದು ಅನ್ನ ಸಂತರ್ಪಣೆ



ದಾವಣಗೆರೆ ಭಾರತ್ ಕಾಲೋನಿ 9 ನೇ ಕ್ರಾಸ್ ಶ್ರೀ ಸೇವಾಲಾಲ್ ಮರಿಯಮ್ಮ ದೇವಸ್ಥಾನ ಟ್ರಸ್ಟ್ ವತಿಯಿಂದ ಶ್ರೀ ಸೇವಾಲಾಲ್ ಮೂರ್ತಿ ಪ್ರತಿಷ್ಠಾಪನೆ ಪ್ರಯುಕ್ತ ಇಂದು ಮಧ್ಯಾಹ್ನ 12.30 ಕ್ಕೆ ಅನ್ನ ಸಂತರ್ಪಣೆ ನಡೆಯಲಿದೆ.


**REQUIRED**

Young lady with minimum
SSLC qualification required to
**take care of two and half year boy.**

***Apply with biodata with reference***
***Contact no. : 96861 95323***
**Shanthala,** Chamrajpet Davangere.


## ಕಡೇ ಶನಿವಾರದ ಶಿವನಾರದಮುನಿ ಸ್ವಾಮಿ ವಿಶೇಷ ಪೂಜೆ



ದಾವಣಗೆರೆ, ಆ. 28 - ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು, ಚಿಗಟೇರಿ ಗ್ರಾಮದ ಶಿವನಾರದಮುನಿ ಸ್ವಾಮಿಯ ಕಡೇ ಶ್ರಾವಣ ಶನಿವಾರದ ವಿಶೇಷ ಪೂಜೆ ಹಾಗೂ ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ದಿನಾಂಕ 31.8.2024ರ ಶನಿವಾರದಂದು ಏರ್ಪಡಿಸಲಾಗಿದೆ.

ದಿ. 31.8.2024ರ ಶನಿವಾರದಂದು ಬೆಳಿಗ್ಗೆ 5 ರಿಂದ 6 ರವರೆಗೆ ರುದ್ರಾಭಿಷೇಕ, ನಂತರ ಹೊಸ ಮಡಿ ವಿಶೇಷ, ಹೂವಿನ ಅಲಂಕಾರದೊಂದಿಗೆ ವಿಶೇಷ ಪೂಜೆಯು ಬೆಳಿಗ್ಗೆ 9 ರಿಂದ 10 ರವರೆಗೆ ಧಾರ್ಮಿಕ ವಿಧಿ, ವಿಧಾನಗಳೊಂದಿಗೆ ಪ್ರಧಾನ ಅರ್ಚಕರಿಂದ ಮಹಾಮಂಗಳಾರತಿಯೊಂದಿಗೆ ವಿಶೇಷ ಪೂಜೆ ನೆರವೇರುವುದು. ದೇವಸ್ಥಾನಕ್ಕೆ ಬರುವ ಭಕ್ತಾದಿಗಳಿಗೆ ಸುಮಾರು 25 ಸಾವಿರ ಜನರಿಗೆ ಪ್ರಸಾದದ ವ್ಯವಸ್ಥೆಯನ್ನು ದೇವಸ್ಥಾನ ಸಮಿತಿಯ ವತಿಯಿಂದ ಏರ್ಪಡಿಸಲಾಗಿದೆ ಎಂದು ತಿಳಿಸಿದ್ದಾರೆ.

ಸರ್ವ ಭಕ್ತಾದಿಗಳು ಆಗಮಿಸಿ, ಸ್ವಾಮಿಯ ಕೃಪೆಗೆ ಪಾತ್ರರಾಗಿ ದರ್ಶನಾಶೀರ್ವಾದ ಪಡೆದು ಪ್ರಸಾದ ಸ್ವೀಕರಿಸಬೇಕೆಂದು ಶ್ರೀ ಶಿವನಾರದಮುನಿ ದೇವಸ್ಥಾನ ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಶ್ರೀ ಅಣಬೇರು ರಾಜಣ್ಣ, ಟ್ರಸ್ಟ್ ಪದಾಧಿಕಾರಿಗಳು ಮತ್ತು ಗ್ರಾಮಸ್ಥರು ತಿಳಿಸಿದ್ದಾರೆ.

## ನಗರದಲ್ಲಿ ಇಂದು ಉಚಿತ ನೇತ್ರ ತಪಾಸಣೆ

ಸಂಕಲ್ಪ ಸೇವಾ ಫೌಂಡೇಷನ್, ದಾವಣಗೆರೆ ನೇತ್ರಾಲಯ, ಡಾ. ಅಗರವಾಲ್ಸ್ ಕಣ್ಣಿನ ಆಸ್ಪತ್ರೆ ಇವರ ವತಿಯಿಂದ ಇಂದು ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ನಿಜಲಿಂಗಪ್ಪ ಬಡಾವಣೆ, ಎರಡನೇ ಮುಖ್ಯರಸ್ತೆ ಬಳಿಯ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿ ಸಂಪರ್ಕಿಸಿ : ಯುಸುಫ್ 9380644388, ಅಭಿಜಿತ್ .ಜಿ. ಎಂ 8310161061


## ಭಾವಪೂರ್ಣ ಶ್ರದ್ಧಾಂಜಲಿ


ದಿನಾಂಕ: 27.08.2024 ರಂದು ನಿಧನರಾದ ಎಲ್ಲರ ಪ್ರೀತಿಪಾತ್ರರು,
ಎಲ್ಲರಿಗೂ ಸಹಾಯ ಮಾಡುವ ಮನಸ್ಸುಳ್ಳವರು.



**ಶ್ರೀ ಕೆ.ವಿ. ಆನಂದ ರಾವ್**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ...

BMS **ಬಿ.ಮುರಿಗೆಪ್ಪ ಸಿದ್ಧರಾಮಪ್ಪ** asianpaints
ಮಂಡಿಪೇಟೆ, ಪಿ.ಬಿ.ರಸ್ತೆ (ವಿನೋಬನಗರ) ದಾವಣಗೆರೆ.





|| ಶ್ರೀ ವೀರಭದ್ರೇಶ್ವರ ಪ್ರಸನ್ನ ||
|| ಶ್ರೀ ಕರಿಬಸವೇಶ್ವರ ಪ್ರಸನ್ನ ||
|| ಕಾಯಕವೇ ಕೈಲಾಸ ||



**100** ನೇ
1924-2024

## ದಾಸೋಹ ಶತಮಾನೋತ್ಸವ ಸಂಭ್ರಮ







**ಶರಣ ಅಣ್ಣಿಗೇರಿ ಚಿಂದೋಡಿ ಶಾಂತವೀರಪ್ಪ**
**ಶರಣೆ ಅಣ್ಣಿಗೇರಿ ಚಿಂದೋಡಿ ಶಾಂತಮ್ಮ**

ಪರಮಪೂಜ್ಯ : ಶ್ರೀ ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮಿಗಳು
ಪುರವರ್ಗ ಮಠ, ಆವರಗೊಳ್ಳ.
ಪರಮಪೂಜ್ಯ : ಶ್ರೀ ಶ್ರೀ ಬಸವಪ್ರಭು ಮಹಾಸ್ವಾಮಿಗಳು
ವಿರಕ್ತ ಮಠ, ದಾವಣಗೆರೆ.
ಪರಮಪೂಜ್ಯ : ಶ್ರೀ ಜಗದ್ಗುರು ಡಾ|| ಕರಿಬಸವರಾಜೇಂದ್ರ ಸ್ವಾಮೀಜಿಗಳು
ಉರಗಾದ್ರಿ ಗವಿಮಠ ಸಂಸ್ಥಾನ, ಆಂಧ್ರಪ್ರದೇಶ

**ದಿನಾಂಕ : 29.08.2024ರ ಗುರುವಾರ ಸ್ಥಳ : ಹಳೇಪೇಟೆ, ದಾವಣಗೆರೆ**

ಅಣ್ಣಿಗೇರಿ ಚಿಂದೋಡಿ ಮನೆತನದ ದಾಸೋಹ ಪರಂಪರೆಗೆ-100 ಶತಮಾನೋತ್ಸವದ ಸಂಭ್ರಮ. ಗಾಯನ ಗಂಧರ್ವ : ಶರಣ ಅಣ್ಣಿಗೇರಿ ಚಿಂದೋಡಿ ಶಾಂತವೀರಪ್ಪ ಮತ್ತು ಶರಣೆ, ಚಿಂದೋಡಿ ಶಾಂತಮ್ಮನವರು ಪ್ರಾರಂಭಿಸಿದ್ದ ಜಂಗಮ ದಾಸೋಹ ಸೇವೆ ಪರಂಪರೆಯು ಇಂದಿಗೆ ನೂರು ವರ್ಷದ ಸಂಭ್ರಮವನ್ನು ಕಾಣುತ್ತಿದೆ. 1924ರಲ್ಲಿ ಚಿಂದೋಡಿ ಮನೆತನದ ಪೂರ್ವಿಕರು-ಹಿರಿಯರು ನಡೆಸಿಕೊಂಡು ಬಂದಂತಹ ದಾಸೋಹ ಪರಂಪರೆಗೆ ಇಂದಿಗೆ ನೂರು ವರ್ಷಗಳು ತುಂಬುತ್ತಿವೆ. ಇದರ ಅಂಗವಾಗಿ ಈ ದಿನ ದಿನಾಂಕ : 29.8.2024ರಂದು ಗುರುವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆಯ ಹಳೇಪೇಟೆಯಲ್ಲಿರುವ ಚಿಂದೋಡಿ ಎಸ್. ವೀರಣ್ಣ ಮತ್ತು ಚಿಂದೋಡಿ ಕುಟುಂಬದವರು ತಮ್ಮ ಹಿರಿಯರು ನಡೆಸಿಕೊಂಡು ಬಂದಂತಹ ದಾಸೋಹದ ಶತಮಾನೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಂಡಿರುತ್ತಾರೆ, ಈ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಪರಮಪೂಜ್ಯ ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮಿಗಳು ಆವರಗೊಳ್ಳ ಮತ್ತು ಶ್ರೀ ಬಸವ ಪ್ರಭು ಮಹಾಸ್ವಾಮಿಗಳು ವಿರಕ್ತಮಠ ಮತ್ತು ಜಗದ್ಗುರು ಶ್ರೀ ಕರಿಬಸವರಾಜೇಂದ್ರಮಹಾಸ್ವಾಮಿಗಳು, ಉರುಗಾದ್ರಿ ಸಂಸ್ಥಾನ ಮಠ, ಆಂಧ್ರಪ್ರದೇಶ ಈ ಎಲ್ಲಾ ಪೂಜ್ಯಶ್ರೀಗಳ ಸಾನ್ನಿಧ್ಯದಲ್ಲಿ ನೆರವೇರಲಿದೆ ಹಾಗೂ ಈ ಕಾರ್ಯಕ್ರಮದಲ್ಲಿ ಗುರುಲಿಂಗ ಜಂಗಮರು, ಹರಗುರು ಚರಮೂರ್ತಿಗಳು ಮತ್ತು ಅಪಾರ ಬಂಧುಗಳು, ಸ್ನೇಹಿತರು ಭಾಗವಹಿಸಲಿದ್ದಾರೆ. ಎಲ್ಲರೂ ಈ ದಾಸೋಹದ ಶತಮಾನೋತ್ಸವದ ಸಂಭ್ರಮದಲ್ಲಿ ಪಾಲ್ಗೊಳ್ಳಬೇಕಾಗಿ ಚಿಂದೋಡಿ ಮನೆತನದವರು ವಿನಂತಿಸಿ ಸ್ವಾಗತಿಸಿದ್ದಾರೆ. ಫೋ. : 9481452630, 9844425525

ಚಿಂದೋಡಿ ಮನೆತನದ ಪರಂಪರೆ, ಜಂಗಮ ದಾಸೋಹ ಸೇವೆ ಶತಮಾನೋತ್ಸವದ ಸವಿನೆನಪು
**1924 ರಿಂದ ಪ್ರಾರಂಭವಾದ ಜಂಗಮ ದಾಸೋಹ ಸೇವೆಯ ಪರಂಪರೆ**
**2024ರ ಇಂದಿಗೂ ಮುಂದೆಯೂ ನಿರಂತರ ಸಾಗಿದೆ....**


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas